ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 12 ಸೋಮವಾರ 2022

ಸಂಪುಟ: 43 | ಸಂಚಿಕೆ: 235 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕಾರುಗಳ ಡಿಕ್ಕಿ: ಐವರ ಸಾವು

ನಾಗಮಂಗಲ ಬಳಿ ದುರಂತ



ನಾಗಮಂಗಲ, ಡಿ.11– ಕಾರುಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಐವರು ಸ್ಥಳದಲ್ಲೇ ಸಾವನ್ನಪ್ಪಿ, ಮೂವರು ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ತಿಟ್ಟನಹೊಸಹಳ್ಳಿ ಗೇಟ್ ಬಳಿ ಭಾನುವಾರ ರಾತ್ರಿ ನಡೆದಿದೆ.

ಸ್ವಿಫ್ಟ್ ಕಾರಿನಲ್ಲಿದ್ದ ಶ್ರೀನಿವಾಸಮೂರ್ತಿ (50) ಹಾಗೂ ಜಯಂತಿ(45) ಹಾಗೂ ತಮಿಳುನಾಡು ಮೂಲದ ಇನ್ನೋವಾ ಕಾರಿನಲ್ಲಿದ್ದ ಮೂವರು ಸ್ಥಳದಲ್ಲಿ ಸಾವನ್ನಪ್ಪಿದ್ದು, ಮೂವರ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳನ್ನು ತಾಲೂಕಿನ ಬಿ.ಜಿ. ನಗರದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶ್ರೀನಿವಾಸಮೂರ್ತಿ ಮತ್ತು ಜಯಂತಿ ಅವರು ಬೆಂಗಳೂರಿನಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ಭಾಗವಹಿಸಿ ಹಿಂತಿರುಗುತ್ತಿದ್ದಾಗ ಹಾಸನದ ಕಡೆಯಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಇನ್ನೋವಾ ಕಾರು ರಸ್ತೆ ವಿಭಜಕ ದಾಟಿ ಡಿಕ್ಕಿ ಹೊಡೆದಿದ್ದರಿಂದ ಅವಘಡ ಸಂಭವಿಸಿದೆ. ಜಿಟಿಜಿಟಿ ಮಳೆಗೆ ವಾಹನ ▶ 8ನೇ ಪುಟಕ್ಕೆ

ಇಂದಿನಿಂದ ಶಾಲಾ ಮಕ್ಕಳಿಗೆ ಆಕಾಶವಾಣಿ ಮೂಲಕ ಪಠ್ಯ ಬೋಧನೆ

ಬೆಂಗಳೂರು: ಶಾಲಾ ಮಕ್ಕಳಿಗೆ ಆಕಾಶವಾಣಿ ಮೂಲಕ ಪಠ್ಯ ಬೋಧನೆಯ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯಲ್ಲಿ ವೇಳಾಪಟ್ಟಿಯನ್ನು ಪ್ರಕಟಗೊಳಿಸಿದೆ.

ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಯೊಂದಿಗೆ ಡಿಜಿಟಲ್ ಉಪಕ್ರಮದ ಅಳವಡಿಕೆ ಹಾಗೂ ತರಗತಿ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಏಕತಾನತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಆಕಾಶವಾಣಿ ಮೂಲಕ ಶಾಲೆಗಳಲ್ಲಿ ರೇಡಿಯೋ ಪಾಠವನ್ನು ಪ್ರಸಾರ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ ಪ್ರಕಟ ಮಾಡಿರುವ ವೇಳಾಪಟ್ಟಿಯಲ್ಲಿ ನಾಳೆಯಿಂದ ಫೆಬ್ರವರಿ 23ರವರೆಗೆ ಆಕಾಶವಾಣಿಯಲ್ಲಿ ನಿತ್ಯ ಪಠ್ಯ ಬೋಧನೆ ನಡೆಯಲಿದೆ. 1ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗಾಗಿ ಪಠ್ಯ ಬೋಧನೆ ನಡೆಯಲಿದ್ದು, 'ಬಾನ್ ದನಿ' ಕಾರ್ಯಕ್ರಮದ ಮೂಲಕ ಪಠ್ಯ ಬೋಧನೆ ಮಾಡಲಾಗುವುದು ಎಂದು ಇಲಾಖೆ ತಿಳಿಸಿದೆ. ▶ 8ನೇ ಪುಟಕ್ಕೆ

ವಿಧಾನಸಭೆ ಚುನಾವಣೆ–2023

ಕಾಂಗ್ರೆಸ್ ಅಭ್ಯರ್ಥಿಗಳ ಸಂಭಾವ್ಯ ಪಟ್ಟಿ ಸಿದ್ಧ

● ಸಿದ್ದರಾಮಯ್ಯ ವರುಣಾದಲ್ಲೇ ಸ್ಪರ್ಧೆ, ಎಲ್ಲಾ ಹಾಲಿ ಶಾಸಕರಿಗೂ ಟಿಕೆಟ್ ● ನಂ.ಗೂಡಿಗೆ ಧ್ರುವನಾರಾಯಣ್ ● ತಿ.ನ.ಪುರಕ್ಕೆ ಸುನೀಲ್ ಬೋಸ್ ● ಅರಸೀಕೆರೆಗೆ ಶಿವಲಿಂಗೇಗೌಡ

ಬೆಂಗಳೂರು,ಡಿ.11–ವಿಧಾನಸಭೆ ಚುನಾವಣೆಗೆ ಈಗಿನಿಂದಲೇ ರಾಜಕೀಯ ಪಕ್ಷಗಳು ಕಾರ್ಯತಂತ್ರ ಪ್ರಾರಂಭಿಸಿವೆ. ನಾಯಕತ್ವಕ್ಕಾಗಿ ಸಾಕಷ್ಟು ಪೈಪೋಟಿ ನಡೆಯುತ್ತಿದ್ದರೂ, ಈಗಿನಿಂದಲೇ ಚುನಾವಣೆ ಎದುರಿಸಲು ಅನುವಾಗುವಂತೆ ಕಾಂಗ್ರೆಸ್ ಬಹುತೇಕ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ ಎಂಬ ಮಾಹಿತಿ ಹೊರಬಿದ್ದಿದೆ.

ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಬಿಜೆಪಿ, ಜೆಡಿಎಸ್‌ಗಿಂತ ಮೊದಲೇ ಕಾಂಗ್ರೆಸ್ ಪಟ್ಟಿ ಬಿಡುಗಡೆಗೆ ಕಾರ್ಯತಂತ್ರ ರೂಪಿಸಲಾಗಿದ್ದು, ಅದಕ್ಕೆ ಪೂರಕವಾಗಿ ಕೆಲ ತಿಂಗಳ ಹಿಂದೆಯೇ ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಪ್ರತಿ ಕ್ಷೇತ್ರದಿಂದ ಐದರಿಂದ 15 ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದರು. ಆದರೆ, ಇದೀಗ ಎಲ್ಲಾ ಕ್ಷೇತ್ರಗಳಲ್ಲೂ ಸಂಭವನೀಯರ ಪಟ್ಟಿ ಅಂತಿಮವಾಗಿದೆ ಎಂದು ತಿಳಿದುಬಂದಿದೆ.

ಕೆಲ ಕ್ಷೇತ್ರಗಳಲ್ಲಿ ಒಬ್ಬರನ್ನು ಅಂತಿಮಗೊಳಿಸಿರುವ ಕಾಂಗ್ರೆಸ್ ನಾಯಕರು, ಮತ್ತೆ ಕೆಲ ಕ್ಷೇತ್ರಗಳಲ್ಲಿ ಹೆಚ್ಚಿನ ಆಯ್ಕೆ ಇಟ್ಟುಕೊಂಡಿದ್ದಾರೆ. ಹೆಚ್ಚು ಆಕಾಂಕ್ಷಿಗಳಿರುವ ಪಟ್ಟಿಯನ್ನೂ ಸಹ ಆದಷ್ಟು ಬೇಗ ಒಂದಕ್ಕಿಳಿಸಿ ಜನವರಿಯಲ್ಲಿ ಅಂತಿಮ ಪಟ್ಟಿ ಹೊರಡಿಸಲು ತೀರ್ಮಾನಿಸಿದ್ದಾರೆ ಎಂದು ಹೇಳಲಾಗಿದೆ. ಬಹುತೇಕ ಹಾಲಿ ಶಾಸಕರಿಗೆ ಟಿಕೆಟ್ ಅಂತಿಮವಾಗಿದೆ. ಆದರೂ ಮೂರ್ನಾಲ್ಕು ಹಾಲಿ ಶಾಸಕರಿಗೆ ಟಿಕೆಟ್ ಕೈತಪ್ಪಬಹುದು ಎಂದು ಹೇಳಲಾಗುತ್ತಿದೆ. ಈಗಾಗಲೇ ಅಭ್ಯರ್ಥಿಗಳ ಸಂಭಾವ್ಯ ಪಟ್ಟಿಯನ್ನು ಕಾಂಗ್ರೆಸ್ ಸಿದ್ಧಪಡಿಸಿದೆ. ವಿಪಕ್ಷ ನಾಯಕ ಸಿದ್ದರಾಮಯ್ಯ ಬಹುತೇಕ ವರುಣಾ ಕ್ಷೇತ್ರದಲ್ಲೇ ಸ್ಪರ್ಧಿಸುವರು ಎಂದು ಹೇಳಲಾಗುತ್ತಿದ್ದು, ▶ 6ನೇ ಪುಟಕ್ಕೆ



ಸಿದ್ದರಾಮಯ್ಯ | ಡಾ.ಯತೀಂದ್ರ | ಕೆ.ಮರಿಗೌಡ | ತನ್ವೀರ್‌ಸೇಠ್ | ಸೋಮಶೇಖರ್ | ವಾಸು

ಕೆ.ಹರೀಶ್‌ಗೌಡ | ಕೆ.ವೆಂಕಟೇಶ್ | ರವಿಶಂಕರ್ | ಸುನಿಲ್ ಬೋಸ್ | ಧ್ರುವನಾರಾಯಣ | ಅನಿಲ್ ಚಿಕ್ಕಮಾದು

ಹೆಚ್.ಪಿ.ಮಂಜುನಾಥ್ | ಪುಟ್ಟರಂಗಶೆಟ್ಟಿ | ಎಸ್.ಜಯಣ್ಣ | ಎಸ್.ಬಾಲರಾಜ್ | ಆರ್.ನರೇಂದ್ರ | ಗಣೇಶ್ ಪ್ರಸಾದ್

ಎ.ಎಸ್.ಪೊನ್ನಣ್ಣ | ಜೀವಿಜಯ | ಮಂಥರ್‌ಗೌಡ | ಚಂದ್ರಮೌಳಿ | ಗಣಿಗರವಿ | ಡಾ.ಕೃಷ್ಣ



ಗುರುಚರಣ್ | ನರೇಂದ್ರಸ್ವಾಮಿ | ಡಾ.ರವೀಂದ್ರ | ರಮೇಶ್ ಬಂಡಿಸಿದ್ದೇಗೌಡ | ವಿಜಯ ರಾಮೇಗೌಡ | ಕಿಕ್ಕೇರಿ ಸುರೇಶ್ | ಚಂದ್ರಶೇಖರ್ | ಚೆಲುವರಾಯಸ್ವಾಮಿ

ಮೈಸೂರು		
ವರುಣಾ	–	ಸಿದ್ದರಾಮಯ್ಯ, ಯತೀಂದ್ರ ಸಿದ್ದರಾಮಯ್ಯ
ಚಾಮುಂಡೇಶ್ವರಿ	–	ಕೆ.ಮರಿಗೌಡ
ಎನ್.ಆರ್.ಮೊಹಲ್ಲಾ	–	ತನ್ವೀರ್ ಶೇಠ್
ಕೃಷ್ಣರಾಜ	–	ಎಂ.ಕೆ.ಸೋಮಶೇಖರ್
ಚಾಮರಾಜ ಕ್ಷೇತ್ರ	–	ವಾಸು/ಕೆ.ಹರೀಶ್‌ಗೌಡ
ಪಿರಿಯಾಪಟ್ಟಣ	–	ಕೆ.ವೆಂಕಟೇಶ್
ಕೆ.ಆರ್.ನಗರ	–	ರವಿಶಂಕರ್
ಟಿ.ನರಸೀಪುರ	–	ಸುನೀಲ್ ಬೋಸ್
ನಂಜನಗೂಡು	–	ಧ್ರುವನಾರಾಯಣ್
ಹೆಚ್.ಡಿ.ಕೋಟೆ	–	ಅನಿಲ್ ಚಿಕ್ಕಮಾದು.
ಹುಣಸೂರು	–	ಹೆಚ್.ಪಿ.ಮಂಜುನಾಥ್
ಚಾಮರಾಜನಗರ		
ಚಾಮರಾಜನಗರ	–	ಸಿ.ಪುಟ್ಟರಂಗಶೆಟ್ಟಿ
ಕೊಳ್ಳೇಗಾಲ	–	ಎಸ್.ಜಯಣ್ಣ, ಎಸ್.ಬಾಲರಾಜು
ಹನೂರು	–	ಆರ್.ನರೇಂದ್ರ
ಗುಂಡ್ಲುಪೇಟೆ	–	ಗಣೇಶ್ ಪ್ರಸಾದ್
ಕೊಡಗು		
ವಿರಾಜಪೇಟೆ	–	ಎ.ಎಸ್.ಪೊನ್ನಣ್ಣ
ಮಡಿಕೇರಿ	–	ಜೀವಿಜಯ, ಮಂಥರ್‌ಗೌಡ/ ಚಂದ್ರಮೌಳಿ
ಮಂಡ್ಯ		
ಮಂಡ್ಯ	–	ಗಣಿಗರವಿ, ಡಾ.ಕೃಷ್ಣ
ಮದ್ದೂರು	–	ಗುರುಚರಣ್
ಮಳವಳ್ಳಿ	–	ನರೇಂದ್ರ ಸ್ವಾಮಿ
ಮೇಲುಕೋಟೆ	–	ಡಾ.ರವೀಂದ್ರ
ಶ್ರೀರಂಗಪಟ್ಟಣ	–	ರಮೇಶ್ ಬಂಡಿಸಿದ್ದೇಗೌಡ
ಕೆ.ಆರ್.ಪೇಟೆ	–	ವಿಜಯ ರಾಮೇಗೌಡ/ ಕಿಕ್ಕೇರಿ ಸುರೇಶ್/ಕೆ.ಬಿ.ಚಂದ್ರಶೇಖರ್
ನಾಗಮಂಗಲ	–	ಚೆಲುವರಾಯಸ್ವಾಮಿ
ಹಾಸನ		
ಹಾಸನ	–	ಬಿ.ಪಿ.ಮಂಜೇಗೌಡ, ರಂಗಸ್ವಾಮಿ
ಅರಸೀಕೆರೆ	–	ಶಿವಲಿಂಗೇಗೌಡ
ಬೇಲೂರು	–	ಗಂಡಸಿ ಶಿವರಾಂ, ಕೃಷ್ಣೇಗೌಡ
ಸಕಲೇಶಪುರ	–	ಮುರುಳೀಮೋಹನ್
ಅರಕಲಗೂಡು	–	ಎ.ಟಿ.ರಾಮಸ್ವಾಮಿ (ಜೆಡಿಎಸ್ ತೊರೆದರೆ ಮಾತ್ರ), ಕೃಷ್ಣೇಗೌಡ
ಶ್ರವಣಬೆಳಗೊಳ	–	ಎಂಎಲ್‌ಸಿ ಗೋಪಾಲಸ್ವಾಮಿ, ವಿಜಯ್ ಲಲಿತ್ ರಾಘವ್

ಪಕ್ಷ ಸೂಚಿಸಿದರೆ ವರುಣಾದಲ್ಲಿ ಸ್ಪರ್ಧೆ



ಮೈಸೂರು,ಡಿ.11(ಎಂಟಿವೈ)–ಪಕ್ಷದ ವರಿಷ್ಠರು ಸೂಚಿಸಿದರೆ ವರುಣಾ ಕ್ಷೇತ್ರ ಸೇರಿದಂತೆ ಹಳೇ ಮೈಸೂರು ಭಾಗದ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸಲು ನಾನು ಸಿದ್ಧ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ಗನ್‌ಹೌಸ್ ವೃತ್ತದ ಬಳಿ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಸ್ತುತ ಪಕ್ಷ ರಾಜ್ಯ ಉಪಾಧ್ಯಕ್ಷ ಸ್ಥಾನ ನನಗೆ ಕೊಟ್ಟಿದೆ. ರಾಜ್ಯಾದ್ಯಂತ ಪಕ್ಷ ಸಂಘಟನೆಗಾಗಿ ಪ್ರವಾಸ ಮಾಡುತ್ತಿದ್ದೇನೆ. ಮುಂದಿನ ಚುನಾವಣೆಯಲ್ಲಿ ಪಕ್ಷ ನನಗೆ ಯಾವುದೇ ಸವಾಲು ಕೊಟ್ಟರೂ ಅದನ್ನು ನಾನು ನಿಭಾಯಿಸುತ್ತೇನೆ. ಪಕ್ಷದ ತೀರ್ಮಾನವೇ ಅಂತಿಮ. ಎಲ್ಲಾ ಸವಾಲುಗಳನ್ನೂ ಎದುರಿಸುತ್ತೇನೆ ಎಂದರು.

ಹಳೆ ಮೈಸೂರು ಭಾಗದಲ್ಲಿ ಪಕ್ಷವನ್ನು ಗಟ್ಟಿಗೊಳಿಸಲು ಗಮನ ನೀಡಲಾಗಿದೆ. ವರುಣಾ ಕ್ಷೇತ್ರ ಮಾತ್ರವಲ್ಲದೆ ಹಳೆ ಮೈಸೂರು ಪ್ರಾಂತ್ಯದಲ್ಲಿ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಪಕ್ಷ ಸೂಚಿಸಿದರೆ, ಅದಕ್ಕೆ ಬದ್ಧನಾಗಿ ಚುನಾವಣೆಗೆ ಸ್ಪರ್ಧಿಸುತ್ತೇನೆ. ವರುಣಾ ಮಾತ್ರವಲ್ಲ ಎಲ್ಲಾ ಕ್ಷೇತ್ರಗಳಲ್ಲೂ ಸಂಘಟನೆ ಮಾಡುತ್ತಿದ್ದೇನೆ. ಹಳೇ ಮೈಸೂರು ಭಾಗದಲ್ಲಿ ಹೆಚ್ಚು ಸ್ಥಾನ ಪಡೆಯಲು ಹೋರಾಟ ಮಾಡುತ್ತಿದ್ದೇವೆ ಎಂದರು.

ದೇಶದಲ್ಲಿ ಪ್ರಧಾನಿ ಮೋದಿ ಅಲೆ ಇಲ್ಲ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಮೋದಿ ಅವರದ್ದು ಕೇವಲ ಅಲೆಯಲ್ಲ, ಅದೊಂದು ಸುನಾಮಿ. ಇದು ಕಾಂಗ್ರೆಸ್ ನಾಯಕರಿಗೆ ಇನ್ನೂ ಅರ್ಥವಾಗಿಲ್ಲ. ಕಾಂಗ್ರೆಸ್ ಚುನಾವಣೆಯಲ್ಲಿ ಗೆಲ್ಲುವ ಭ್ರಮೆಯಲ್ಲಿದೆ ಎಂದು ಕಿಡಿಕಾರಿದರು.

ಗುಜರಾತ್ ಫಲಿತಾಂಶ ಕರ್ನಾಟಕದ ಚುನಾವಣೆ ಮೇಲೆ ಪ್ರಭಾವ ಬೀರಲ್ಲ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಿರುವುದು ಅವರಲ್ಲಿರುವ ಗೆಲುವಿನ ಭ್ರಮೆ ತೋರಿಸುತ್ತದೆ. ಎಲ್ಲೆಡೆ ಬಿಜೆಪಿ ಪರವಾದ ಒಲವು ಇದೆ. ಚುನಾವಣೆ ನಡೆದ ನಂತರ ಕಾಂಗ್ರೆಸ್‌ಗೆ ಮೋದಿ ಅಲೆಯ ಬಗ್ಗೆ ಉತ್ತರ ಸಿಗಲಿದೆ ಎಂದರು.

ರಾಜ್ಯದಲ್ಲಿ ಅಧಿಕಾರ ಹಿಡಿಯಲು ಗುಜರಾತ್ ಮಾದರಿ ಟಿಕೆಟ್ ಹಂಚಿಕೆ ಸೂಕ್ತ

ಸಂಸದ ಶ್ರೀನಿವಾಸಪ್ರಸಾದ್ ಅಭಿಮತ

● ಕಾಂಗ್ರೆಸ್ ಮುನ್ನಡೆಸಲು ಖರ್ಗೆ ಅಶಕ್ತ
● ಹೆಚ್.ವಿಶ್ವನಾಥ್ ಅಲೆಮಾರಿ ನಾಯಕ
● ಬೆಂಕಿಯಲ್ಲಿ ಕೈ ಕಾಯಿಸಿಕೊಳ್ಳುವ ಜೆಡಿಎಸ್

ಮೈಸೂರು,ಡಿ.11(ಎಂಟಿವೈ)–ಮುಂಬರುವ ವಿಧಾನಸಭಾ ಚುನಾವಣೆ ರಾಜ್ಯದಲ್ಲಿ ಬಿಜೆಪಿ ಗೆಲ್ಲುವುದಕ್ಕೆ ಗುಜರಾತ್ ಮಾದರಿಯಲ್ಲಿ ಟಿಕೆಟ್ ಹಂಚಿಕೆ ಮಾಡಿ ಹೊಸಬರಿಗೆ ಅವಕಾಶ ನೀಡಬೇಕು ಎಂದು ಚಾಮರಾಜನಗರದ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅಭಿಪ್ರಾಯಪಟ್ಟರು.

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ತಮ್ಮ ನಿವಾಸದಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೆಲ ವಿದ್ಯಮಾನ ಗಮನಿಸಿದರೆ ಗುಜರಾತ್ ಹಾಗೂ ಉತ್ತರ ಪ್ರದೇಶದಲ್ಲಿ ಅನುಸರಿಸಿದ ಮಾನದಂಡವನ್ನು ರಾಜ್ಯದಲ್ಲೂ ಪಕ್ಷದ ವರಿಷ್ಠರು ಜಾರಿಗೊಳಿಸಲಿದ್ದಾರೆ ಎನಿಸುತ್ತದೆ. ಇದರಿಂದ ಪಕ್ಷಕ್ಕೆ ಇನ್ನಷ್ಟು ಬಲ ಬಂದಂತಾಗುತ್ತದೆ ಎಂದರು.


ಗೆಲ್ಲುವ ಅಭ್ಯರ್ಥಿಗಳ ಆಯ್ಕೆ ಬಹು ಮುಖ್ಯ ಪಾತ್ರವಹಿಸಲಿದೆ. ಕರ್ನಾಟಕದಲ್ಲೂ ಇದೇ ಮಾದರಿ ಅನುಸರಿಸುವುದರಲ್ಲಿ ಅನುಮಾನವಿಲ್ಲ. ಈಗಾಗಲೇ ಕೇಂದ್ರದ ವರಿಷ್ಠರು 2–3 ಬಾರಿ ಸಮೀಕ್ಷೆ ನಡೆಸಿದ್ದಾರೆ. ಮುಂದಿನ ವರ್ಷ ಏಪ್ರಿಲ್ ಒಳಗೆ ಚುನಾವಣೆ ನಡೆಸಲು ಸಿದ್ಧತೆ ನಡೆಸಿದ್ದಾರೆ. ಕರ್ನಾಟಕದ ಚುನಾವಣೆ ಮೇಲೆ ವರಿಷ್ಠರು ಕಟ್ಟೆಚ್ಚರ ವಹಿಸಿದ್ದಾರೆ. ಅಭ್ಯರ್ಥಿಗಳ ಆಯ್ಕೆ ಮೇಲೂ ಕಣ್ಗಾವಲು ವಹಿಸಿದ್ದಾರೆ ಎಂದು ತಿಳಿಸಿದರು.

ಸಿದ್ದರಾಮಯ್ಯ ವಿರುದ್ಧ ಕಿಡಿ: ಜುಟ್ಟು ಜಾರಿದ್ರು ಮೀಸೆ ಮಣ್ಣಾಗಲಿಲ್ಲ ಎಂಬ ಧೋರಣೆ ಮಾಜಿ ಸಿಎಂ ಸಿದ್ದರಾಮಯ್ಯ ಅವರದ್ದಾಗಿದೆ. ಅವರು ರಾಜಕೀಯ ಅಲೆಮಾರಿ. ಗುಜರಾತ್ ಫಲಿತಾಂಶ ರಾಜ್ಯದ ಮೇಲೆ ಪರಿಣಾಮ ಬೀರಲ್ಲ. ನಾವು ಮನೆಯಲ್ಲಿ ಕುಳಿತರೂ ಗೆಲ್ಲುತ್ತೇವೆ ಎಂದು ಸಿದ್ದರಾಮಯ್ಯ ಉಡಾಫೆ ಮಾತನ್ನಾಡಿದ್ದಾರೆ. ಲೋಕಸಭಾ ▶ 8ನೇ ಪುಟಕ್ಕೆ



“ನನ್ನ ವಿರುದ್ಧ ಪಿತೂರಿ ಮಾಡಿದವರನ್ನು ಸೋಲಿಸುವುದೇ ನನ್ನ ಗುರಿ. ನಾನು ಸಿದ್ದರಾಮಯ್ಯ ಅವರನ್ನು ಸೋಲಿಸುವ ಸವಾಲು ಹಾಕಿದ್ದೆ. ಅದೇ ರೀತಿ ಸವಾಲು ಸ್ವೀಕರಿಸಿ ಉತ್ತರ ಕೊಟ್ಟಿದ್ದೀನಿ. ಮುಂಬರುವ ಚುನಾವಣೆಯಲ್ಲೂ ಕೂಡ ಸವಾಲು ಹಾಕ್ತಿದ್ದೀನಿ. ನನ್ನನ್ನ ಸೋಲಿಸಲು ಪಿತೂರಿ ನಡೆಸಿದವರ ವಿರುದ್ಧ ಎಂದೆಂದಿಗೂ ನನ್ನ ಸವಾಲು ಇರುತ್ತೆ.
–ಶ್ರೀನಿವಾಸಪ್ರಸಾದ್

123 ಸ್ಥಾನ ಗೆದ್ದು ಜೆಡಿಎಸ್ ಶಕ್ತಿ ತೋರಿಸುತ್ತೇವೆ



ಬೆಂಗಳೂರು, ಡಿ.11– ಗುಜರಾತ್ ಚುನಾವಣೆ ಬಳಿಕ ಕರ್ನಾಟಕದಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳು ಗೆಲ್ಲಲು ಯಾವೆಲ್ಲ ತಂತ್ರಗಳನ್ನು ಮಾಡುತ್ತಿದೆ ಅನ್ನೋದು ಗೊತ್ತಿದೆ. ಕರ್ನಾಟಕದಲ್ಲಿ ಜೆಡಿಎಸ್ ಪಕ್ಷ ಇದೆ ಅನ್ನುವುದನ್ನೇ ಇವರು ಮರೆತಿದ್ದಾರೆ, ಆದರೂ ನನಗೆ ಬೇಸರ ಇಲ್ಲ. ಬರುವ ದಿನಗಳಲ್ಲಿ ಜೆಡಿಎಸ್ ತನ್ನ ಶಕ್ತಿ ಎಂಥದ್ದು ಎಂಬುದನ್ನು ತೋರಿಸಲಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಪರೋಕ್ಷವಾಗಿ ಟಾಂಗ್ ನೀಡಿದ್ದಾರೆ.

ಪಕ್ಷದ ಕಚೇರಿ ಜೆಪಿ ಭವನದಲ್ಲಿ ಹಮ್ಮಿಕೊಂಡಿದ್ದ ಚಾಮರಾಜಪೇಟೆ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದರಾಜು ಹಾಗೂ ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಗೌರಮ್ಮ, ಮಾಜಿ ಉಪಮೇಯರ್ ರಾಮೇಗೌಡ, ಶಿಕಾರಿಪುರದ ಮಾಜಿ ಶಾಸಕರು ಸೇರಿದಂತೆ 53ಕ್ಕೂ ಹೆಚ್ಚು ಸ್ಥಳೀಯ ಮುಖಂಡರ ಜೆಡಿಎಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪಂಚರತ್ನ ರಥಯಾತ್ರೆಗೆ ಉತ್ತಮ ಪ್ರತಿಕಿಯೆ ವ್ಯಕ್ತವಾಗಿದೆ. ಮಧ್ಯರಾತ್ರಿ 2 ಗಂಟೆಗೆ ಜನ ಸೇರಿ ಸ್ವಾಗತ ಕೋರುತ್ತಿದ್ದಾರೆ. ಬೆಂಗಳೂರಿನಲ್ಲಿ ಕೂಡ ಜೆಡಿಎಸ್ ಅನೇಕ ಕ್ಷೇತ್ರ ಗೆಲ್ಲುವ ನಿರೀಕ್ಷೆ ಇದೆ ಎಂದರು.

ಬೆಂಗಳೂರು ನಗರದಲ್ಲಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್–ಬಿಜೆಪಿಗಿಂತ ಅತಿ ಹೆಚ್ಚು ಕ್ಷೇತ್ರ ಗೆಲ್ಲುವ ಭರವಸೆಯಿದೆ. ಬಿಜೆಪಿ, ಕಾಂಗ್ರೆಸ್ ಪಕ್ಷಗಳ ಆಂತರಿಕ ಸಮೀಕ್ಷೆಗಳಲ್ಲೇ ಜೆಡಿಎಸ್ 50 ಸ್ಥಾನ ತಲುಪುತ್ತದೆ ಅಂತ ಬರ್ತಿದೆ. 50 ಕ್ಷೇತ್ರ ಮಾತ್ರವಲ್ಲ, ಜೆಡಿಎಸ್ 123 ಕ್ಷೇತ್ರ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಚಾಮರಾಜಪೇಟೆ ಜೆಡಿಎಸ್ ಗೆಲ್ಲುವ ಮೊದಲ ಕ್ಷೇತ್ರ ಆಗಲಿದೆ. ಚಾಮರಾಜಪೇಟೆಯಲ್ಲಿ ಹೊಸ ಪರಿವರ್ತನೆ ತರಬೇಕಾಗಿದೆ. ಇಲ್ಲಿ ಏನೇನೋ ನಡೆಯುತ್ತಿದೆ ಅನ್ನೋದು ನನಗೆ ಗೊತ್ತಿದೆ. ಚಾಮರಾಜಪೇಟೆ ಒಗ್ಗಟ್ಟಿನ ಕ್ಷೇತ್ರ. ಪಕ್ಷ ಅಂತಿಮವಾಗಿ ಏನು ನಿರ್ಧಾರ ಮಾಡುವುದೋ ಅದನ್ನು ಸ್ಥಳೀಯ ನಾಯಕರು ಒಪ್ಪಬೇಕಾಗುತ್ತದೆ ಎಂದು ಕುಮಾರಸ್ವಾಮಿ ಸಲಹೆ ನೀಡಿದರು.

ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಪರೀಕ್ಷಾ ವೇಳಾಪಟ್ಟಿ: ಸಿಬಿಎಸ್‌ಇ

ನವದೆಹಲಿ: ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ 10 ಮತ್ತು 12ನೇ ತರಗತಿ ಪರೀಕ್ಷೆ ವೇಳಾಪಟ್ಟಿ ನಕಲಿ ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಭಾನುವಾರ ಸ್ಪಷ್ಟಪಡಿಸಿದೆ. ಮಂಡಳಿಯು ಶೀಘ್ರದಲ್ಲಿಯೇ ಅಧಿಕೃತ ಪರೀಕ್ಷಾ ವೇಳಾಪಟ್ಟಿ ಬಿಡುಗಡೆ ಮಾಡಲಿದೆ. ವಿದ್ಯಾರ್ಥಿಗಳು ಮತ್ತು ಪೋಷಕರು ಅಧಿಕೃತ ಮಾಹಿತಿಗೆ ಕಾಯಬೇಕು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಮೊದಲು 2023 ಫೆ.15ರಿಂದ 10 ಮತ್ತು 12ನೇ ತರಗತಿಯ ಥಿಯರಿ ಪರೀಕ್ಷೆಗಳನ್ನು ಆರಂಭಿಸುವುದಾಗಿ ಮಂಡಳಿ ಪ್ರಕಟಿಸಿತ್ತು. ಪ್ರಾಯೋಗಿಕ ಪರೀಕ್ಷೆಗಳು ಜನವರಿ 1ರಿಂದ ಆರಂಭವಾಗಲಿವೆ. ಇವುಗಳ ಪಠ್ಯವನ್ನು ಅಷ್ಟರೊಳಗೆ ಮುಗಿಸಲು ಶಾಲೆಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಮಂಡ್ಯ ಜಿಲ್ಲೆ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ



ಮೈಸೂರು,ಡಿ.11–ಮೈಸೂರಿನ ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ ಹಾಸನದ ಹೆಚ್‌ಕೆಎಸ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಮೈಸೂರು ವಿಭಾಗ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಪ್ರಥಮ ಪಿಯುಸಿ ವಿಭಾಗ: ಆಂಗ್ಲ ಭಾಷಾ ಪ್ರಬಂಧ ಸ್ಪರ್ಧೆಯಲ್ಲಿ ಮಾಂಡವ್ಯ ಎಕ್ಸಲೆನ್ಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಮನಸ್ವಿ (ಪ್ರಥಮ), ಜನಪದ ಗೀತೆ ಸ್ಪರ್ಧೆಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆಎಂ ದೊಡ್ಡಿಯ ಶ್ರೇಯಸ್ (ದ್ವಿತೀಯ), ಸರ್ಕಾರಿ ಪದವಿಪೂರ್ವ ಕಾಲೇಜು ತಗ್ಗಳ್ಳಿಯ ಲಿಖಿತಾ ಹೆಚ್‌ಎಸ್ ಜನಪದ ಗೀತೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ದ್ವಿತೀಯ ಪಿಯುಸಿ ವಿಭಾಗ: ಆಂಗ್ಲ ಭಾಷಾ ಪ್ರಬಂಧ ಸ್ಪರ್ಧೆಯಲ್ಲಿ ಸೆಂಟ್ ಆನ್ಸ್ ಪದವಿ ಪೂರ್ವ ಕಾಲೇಜು, ಮದ್ದೂರು ಬಂಡಿ ಜೆಸ್ಸಿತ ಪ್ರಥಮ ಸ್ಥಾನ, ಜನಪದ ಗೀತೆ ಸ್ಪರ್ಧೆಯಲ್ಲಿ ಪರಿವರ್ತನಾ ಪದವಿ ಪೂರ್ವ ಕಾಲೇಜು ಯಶಸ್ವಿನಿ ಎಸ್ ನಾಯಕ್ ದ್ವಿತೀಯ ಸ್ಥಾನ, ಭಾವಗೀತೆ ಸ್ಪರ್ಧೆಯಲ್ಲಿ ಸದ್ವಿದ್ಯಾ ಪದವಿ ಪೂರ್ವ ಕಾಲೇಜು, ಮಂಡ್ಯದ ಸಿಂಚನ ಎಸ್ ತೃತೀಯ ಸ್ಥಾನ ಪಡೆದಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳನ್ನು ಮಂಡ್ಯ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಉಮೇಶ್, ಶಾಖಾಧಿಕಾರಿ ರಾಜೇಗೌಡ, ಮಮತಾ, ಹರ್ಷಿತಾ, ಮಂಜುನಾಥ್ ಹಾಗೂ ತಂಡದ ವ್ಯವಸ್ಥಾಪಕ ಪ್ರಶಾಂತ್, ವಿಜಯಾ ಅಭಿನಂದಿಸಿದರು.



ಮೈಸೂರು ಗ್ರಾಮಾಂತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಅಕ್ಷರ ದಾಸೋಹ ವಿಭಾಗದಿಂದ ಮರಿಯನಿಕೇತನ ಶಾಲೆಯಲ್ಲಿ ಏರ್ಪಡಿಸಿದ್ದ ಅಡುಗೆ ತಯಾರಿಕೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಕೆ.ಹೆಮ್ಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಅಡುಗೆ ಸಹಾಯಕಿ ಸಿ.ಎಸ್.ಸವಿತ ಮಹೇಶ್ ಅವರನ್ನು ಅಭಿನಂದಿಸಲಾಯಿತು. ಮುಖ್ಯ ಶಿಕ್ಷಕಿ ಸುಮಂಗಲ, ಶಿಕ್ಷಕರಾದ ವಚನ ಕುಮಾರಸ್ವಾಮಿ, ತಾರಾ, ಕಲ್ಪನಾಬಾಯಿ, ನಾಗಮಣಿ, ಸುಶೀಲ ಉಪಸ್ಥಿತರಿದ್ದರು.

ನಾಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಡಿ.11–ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಡಿ.13ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಮಾಹಿತಿಗೆ ಮೊ. 9916155453 ಸಂಪರ್ಕಿಸಬಹುದು.

ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡರಿಗೆ ಮಾತೃ ವಿಯೋಗ

ಮೈಸೂರು, ಡಿ.11– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಮಾಜಿ



ಅಧ್ಯಕ್ಷರು, ಎಂಸಿಡಿಸಿಸಿ ಬ್ಯಾಂಕ್ ಮತ್ತು ಮೈಮುಲ್‌ನ ಮಾಜಿ ಅಧ್ಯಕ್ಷರಾದ ಸಿ.ಬಸವೇಗೌಡರ ತಾಯಿ ಈರಮ್ಮ (99) ಅನಾರೋಗ್ಯದಿಂದ ನಿಧನರಾದರು. ಮಧ್ಯಾಹ್ನ 2ರವರೆಗೆ ಮೈಸೂರಿನ ಗಂಗೋತ್ರಿ ಬಡಾವಣೆಯಲ್ಲಿರುವ ಬಸವೇಗೌಡರ ನಿವಾಸದಲ್ಲಿ ಮೃತರ ದೇಹವನ್ನು ಅಂತಿಮ ದರ್ಶನಕ್ಕೆ ಇಡಲಾಗಿತ್ತು. ನಂತರ ಅವರ ಸ್ವಗೃಹ ತಿ.ನರಸೀಪುರ ತಾಲೂಕು ಬನ್ನೂರು ಹೋಬಳಿ ಮಾದೇಗೌಡನ ಹುಂಡಿಯಲ್ಲಿ ಸಂಜೆ 6 ಗಂಟೆಗೆ ಅಂತ್ಯಕ್ರಿಯೆ ನೆರವೇರಿತು.

ಈರಮ್ಮರವರು ಬಸವೇಗೌಡರು, ಮತ್ತೋರ್ವ ಪುತ್ರ ತಿ.ನರಸೀಪುರ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಸಿ.ನರಸೇಗೌಡ, ಪುತ್ರಿಯರಾದ ಶಾಂತಮ್ಮ, ಭಾಗ್ಯ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ. ಈರಮ್ಮರವರು ಹಿರಿಯ ರಾಜಕಾರಣಿಗಳು, ಮಾಜಿ ಶಾಸಕ ದಿವಂಗತ ಕೆ.ಕೆಂಪೀರೇಗೌಡರ ಹಿರಿಯ ಸಹೋದರಿಯೂ ಕೂಡ ಹೌದು.

ಮಾಜಿ ಸಚಿವರಾದ ಪಿ.ಜಿ.ಆರ್.ಸಿಂಧ್ಯಾ ಮತ್ತು ಎಂ.ಸಿ.ನಾಣಯ್ಯ ಬಸವೇಗೌಡರಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ಸಾಂತ್ವನ ಹೇಳಿ ಸಂತಾಪ ಸೂಚಿಸಿದರು.

ಲೋಕಸಭಾ ಸದಸ್ಯ ವಿ. ಶ್ರೀನಿವಾಸಪ್ರಸಾದ್, ಶಾಸಕರಾದ ಜಿ.ಟಿ.ದೇವೇಗೌಡ, ಮರಿತಿಬ್ಬೇಗೌಡ, ಅಶ್ವಿನ್ ಕುಮಾರ್, ಎಲ್.ನಾಗೇಂದ್ರ, ಮಾಜಿ ಶಾಸಕ ವಾಸು, ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕವೀಶ್ ಗೌಡ, ಮೈಮುಲ್ ಮಾಜಿ ಅಧ್ಯಕ್ಷರಾದ ಕೆ.ಉಮಾಶಂಕರ್, ಎಸ್.ರಾಮಕೃಷ್ಣೇಗೌಡ, ಮಾಜಿ ಮುಡಾ ಅಧ್ಯಕ್ಷ ಪಿ.ಗೋವಿಂದರಾಜು, ಮಾಜಿ ಉಪ ಮೇಯರ್ ಸುರೇಶ್ ಬಾಬು, ಎಂ.ಸಿ.ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕರಾದ ಚಿಕ್ಕಳ್ಳಿ ಕುಮಾರ, ಬಿ.ಎನ್.ಸದಾನಂದ, ವಿವಿಧ ಕ್ಷೇತ್ರದ ಗಣ್ಯರು ಸೇರಿದಂತೆ ಇನ್ನೂ ಅನೇಕ ಮಂದಿ ಮೃತರ ಅಂತಿಮ ದರ್ಶನ ಪಡೆದರು.

ಬಿಜೆಪಿ ಸರ್ಕಾರದಲ್ಲಿ ರೌಡಿಶೀಟರ್‌ಗಳ ಸಂಖ್ಯೆ ಹೆಚ್ಚಳ

ಮೈಸೂರು, ಡಿ.11(ಆರ್‌ಕೆಬಿ)– ಬಿಜೆಪಿ ಸರ್ಕಾರ ಬಂದ ನಂತರ ರೌಡಿಗಳ ಸಂಖ್ಯೆ ಏರಿಕೆಯಾಗುತ್ತಿದ್ದು, 2018ರಲ್ಲಿ 23 ಸಾವಿರ ಇದ್ದ ರೌಡಿಶೀಟರ್‌ಗಳ ಸಂಖ್ಯೆ ಈಗ 33 ಸಾವಿರಕ್ಕೆ ಏರಿದೆ. ಇದೀಗ ಬಿಜೆಪಿಗೆ 60 ಮಂದಿ ರೌಡಿಶೀಟರ್‌ಗಳ ಸೇರ್ಪಡೆಗೆ ಪಟ್ಟಿ ತಯಾರಾಗಿದ್ದು, ಆ ಪೈಕಿ 36 ಮಂದಿಯನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್‌ಎಸ್‌ಎಸ್, ಕೇಂದ್ರ ಗೃಹ ಸಚಿವ ಅಮಿತ್ ಷಾ ಸೂಚನೆ ಮೇರೆಗೆ ಬಿಜೆಪಿಗೆ ರೌಡಿಗಳನ್ನು ಸೇರ್ಪಡೆ ಮಾಡಿಕೊಳ್ಳಲಾಗುತ್ತಿದ್ದು, ಪೈಂಟರ್ ರವಿ ಸೇರಿ ರೌಡಿಶೀಟರ್ ಹಿನ್ನೆಲೆಯ 10 ಮಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಲಾಗುತ್ತಿದೆ ಎಂದು ಆರೋಪಿಸಿದರು.

ಸೈಲೆಂಟ್ ಸುನಿಲ್, ವಿಲ್ಸನ್ ಗಾರ್ಡನ್ ನಾಗ, ಒಂಟೆ ರೋಹಿತ್ ಸೇರಿದಂತೆ ಇನ್ನೂ 150 ಮಂದಿ ರೌಡಿಶೀಟರ್‌ಗಳನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಬಿಜೆಪಿ ತಯಾರಿ ಮಾಡಿಕೊಳ್ಳುತ್ತಿದೆ ಎಂದು ಮಾಹಿತಿ ನೀಡಿದ ಅವರು, ಬೆತ್ತನಗೆರೆ ಶ್ರೀನಿವಾಸ್ ತನ್ನ ಹೆಸರನ್ನು ನಲ್ಲೂರು ಶಂಕರೇಗೌಡ ಎಂದು ಬದಲಿಸಿಕೊಂಡಿದ್ದಾರೆ. ಪಕ್ಷದ ಮುಖಂಡರೊಬ್ಬರ ಪ್ರಕಾರ ಆರ್‌ಎಸ್‌ಎಸ್ ಮತ್ತು ಗೃಹ ಸಚಿವ ಅಮಿತ್ ಷಾ ಅವರ ಸೂಚನೆ ಮೇರೆಗೆ ಉತ್ತರ ಪ್ರದೇಶ, ಗುಜರಾತ್ ಮಾದರಿಯನ್ನು ಕರ್ನಾಟಕದಲ್ಲೂ ಪ್ರಯೋಗಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಅವರು ದೂರಿದರು.



ಕಾಂಗ್ರೆಸ್ 140 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇರುವುದರಿಂದ ಇದನ್ನು ತಡೆಗಟ್ಟಿ, ಕಾಂಗ್ರೆಸ್ ಗೆಲುವಿನ ನಾಗಾಲೋಟಕ್ಕೆ ತಡೆಯುಂಟು ಮಾಡುವ ಹುನ್ನಾರವನ್ನು ಬಿಜೆಪಿ ನಡೆಸಿದೆ. ಹಾಗಾಗಿ ರೌಡಿಶೀಟರ್‌ಗಳನ್ನು ಮುಂದಿಟ್ಟುಕೊಂಡು ಚುನಾವಣೆ ಗೆಲ್ಲುವ ಉದ್ದೇಶವನ್ನು ಬಿಜೆಪಿ ನಾಯಕರು ಹೊಂದಿದ್ದಾರೆ ಎಂದು ಆರೋಪಿಸಿದರು. ಆದರೆ, ರಾಜ್ಯದ ಜನರು ಬುದ್ಧಿವಂತರಿದ್ದು, ಇಂತಹ ಪ್ರಯತ್ನಗಳಿಗೆ ಅವಕಾಶ ನೀಡುವುದಿಲ್ಲ ಎಂದರು.

ಉಗ್ರರನ್ನು ಬಿಜೆಪಿಗೆ ಸೇರಿಸಿಕೊಳ್ಳುವರೇ?: ರೌಡಿಗಳು ಮನಃಪರಿವರ್ತನೆಯಾದರೆ ಬಿಜೆಪಿಗೆ ಸೇರಿಸಿಕೊಳ್ಳಲು ತಪ್ಪೇನು ಎಂದು ಸಿ.ಟಿ.ರವಿ ಹೇಳಿದ್ದನ್ನು ಉಲ್ಲೇಖಿಸಿದ ಲಕ್ಷ್ಮಣ್, ಉಗ್ರರು ಕೂಡ ಮನಃಪರಿವರ್ತನೆಯಾಗಿ ಪಕ್ಷ ಸೇರಲು ಬಯಸಿದರೆ ಸೇರಿಸಿಕೊಳ್ಳುತ್ತಾರೆಯೇ ಎಂದು ಪ್ರಶ್ನಿಸಿದರು. ಗುಜರಾತ್‌ನಲ್ಲಿ ಮಾತ್ರ ಗೆದ್ದು ಎರಡು ಕಡೆ ಸೋತಿದ್ದರೂ ಇಡೀ ದೇಶದಲ್ಲಿ ಗೆಲುವಿನ ಸಂಭ್ರಮಾಚರಣೆ ಮಾಡುತ್ತಿರುವ ಬಿಜೆಪಿ, ಗುಜರಾತ್ ಚುನಾವಣೆ ಗೆಲುವನ್ನು ಮೋದಿ–ಅಮಿತ್ ಷಾ ಮ್ಯಾಜಿಕ್ ಮೋಡಿ ಎಂದು ಬಿಂಬಿಸುತ್ತಿದ್ದಾರೆ. ಆದರೆ ಕರ್ನಾಟಕದಲ್ಲಿ ಅದು ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು.

ಮೀಸಲಾತಿ ಹೆಚ್ಚಳ ನಿಜಬಣ್ಣ ಬಯಲು: ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಿಸಿ, ಗೆಜೆಟ್ ನೋಟಿಫಿಕೇಷನ್ ಹೊರಡಿಸಿರುವ ರಾಜ್ಯ ಸರ್ಕಾರದ ನಡೆಯನ್ನು ಚುನಾವಣಾ ಗಿಮಿಕ್ ಎಂದು ವ್ಯಂಗ್ಯವಾಡಿದ ಲಕ್ಷ್ಮಣ್, ಶೇ.50ಕ್ಕಿಂತ ಹೆಚ್ಚು ಮೀಸಲಾತಿ ಪ್ರಮಾಣ ಹೆಚ್ಚಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಸಚಿವರು ಇತ್ತೀಚೆಗೆ ಸಂಸತ್‌ನಲ್ಲಿ ನೀಡಿರುವ ಹೇಳಿಕೆಯನ್ನು ಉಲ್ಲೇಖಿಸಿದರು. ಇದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಚಿವ ಶ್ರೀರಾಮುಲು ಉತ್ತರ ನೀಡಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಕಾಂಗ್ರೆಸ್ ಮೈಸೂರು ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ವಕ್ತಾರ ಕೆ.ಮಹೇಶ್, ಹಿಂದುಳಿದ ವರ್ಗಗಳ ವಿಭಾಗದ ನಾಗೇಶ್ ಉಪಸ್ಥಿತರಿದ್ದರು.

ಮೈಸೂರು ಸುತ್ತಮುತ್ತ ಮಳೆ–ಚಳಿ: ಇನ್ನೂ ಮೂರು ದಿನ ಮಳೆ

ಮೈಸೂರು,ಡಿ.11(ಆರ್‌ಕೆಬಿ)–ಮಾಂಡೌಸ್ ಚಂಡಮಾರುತದ ಪರಿಣಾಮ ಮೈಸೂರು ಸುತ್ತಮುತ್ತ 2 ದಿನಗಳಿಂದ ಮೋಡ ಕವಿದ ವಾತಾವರಣವಿದ್ದು, ತುಂತುರು ಮಳೆಯಾಗುತ್ತಿದೆ. ಈ ಮಳೆ ಇನ್ನೂ 3 ದಿನ ಕೆಲವೆಡೆ ಸಾಧಾರಣ, ಮತ್ತೆ ಕೆಲವೆಡೆ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೈಸೂರು ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಚಳಿ–ಮಳೆಗೆ ಜನರು ನಲುಗಿದ್ದು, ಇನ್ನೂ ಮೂರು ದಿನ ಮಳೆಯಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಮತ್ತಷ್ಟು ಚಳಿ ಅನುಭವಿಸುವ ಸಾಧ್ಯತೆ ಇದೆ. ಮಾಂಡೌಸ್ ಚಂಡಮಾರುತದ ಪರಿಣಾಮ ಬಂಗಾಳಕೊಲ್ಲಿಯ ನೈರುತ್ಯ ಭಾಗದಲ್ಲಿ ವಾಯುಭಾರ ಕುಸಿತವಾಗಿದ್ದು, ಇದರಿಂದ ಕರ್ನಾಟಕ, ಪಾಂಡಿಚೇರಿ, ತಮಿಳುನಾಡು, ಆಂಧ್ರಪ್ರದೇಶದಲ್ಲಿ ಮಳೆ, ಚಳಿ ಗಾಳಿ ಬೀಸಲಿದೆ.

ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಇನ್ನೂ ಮೂರು ದಿನ ಭಾರೀ ಮಳೆಯಾಗಲಿದ್ದು, 10 ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ತುಮಕೂರು, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೋಲಾರ, ಮಂಡ್ಯ, ರಾಮನಗರ ಜಿಲ್ಲೆಗಳಲ್ಲಿ ಯಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ. ಮೈಸೂರು, ಬೆಂಗಳೂರು, ಉಡುಪಿ, ಹಾಸನ, ಕೊಡಗು, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಸೇರಿದಂತೆ ಹಲವೆಡೆ ಡಿ.13ರವರೆಗೆ ಮಳೆ ಮುಂದುವರಿಯಲಿದೆ.



ಇನ್ನೂ ಮೂರು ದಿನ ಮಳೆ: ಡಿ.12ರಿಂದ 14ರವರೆಗೆ ಮೈಸೂರು ಜಿಲ್ಲೆಯಲ್ಲಿ ಕ್ರಮವಾಗಿ 8 ಮಿ.ಮೀ., 12 ಮಿ.ಮೀ, ಮತ್ತು 5 ಮಿ.ಮೀ., ಮಳೆಯಾಗಲಿದೆ. ಇದೇ ರೀತಿ ಚಾಮರಾಜನಗರ ಜಿಲ್ಲೆಯಲ್ಲಿ ಕ್ರಮವಾಗಿ 8, 11 ಮತ್ತು 8 ಮಿ.ಮೀ., ಮಂಡ್ಯ ಜಿಲ್ಲೆಯಲ್ಲಿ ಕ್ರಮವಾಗಿ 12, 14, 11 ಮಿ.ಮೀ ಹಾಗೂ ಕೊಡಗು ಜಿಲ್ಲೆಯಲ್ಲಿ ಕ್ರಮವಾಗಿ 12, 13 ಮತ್ತು 7 ಮಿ.ಮೀ. ಮಳೆಯಾಗುವ ಸಾಧ್ಯತೆಗಳಿವೆ ಎಂದು ಮೈಸೂರಿನ ನಾಗನಹಳ್ಳಿ ಕೃಷಿ ಕ್ಷೇತ್ರ ಹವಾಮಾನ ವಿಭಾಗದ ಪ್ರಕಟಣೆ ತಿಳಿಸಿದೆ.

ಜ.5, 6ರಂದು ಚಿತ್ರದುರ್ಗದಲ್ಲಿ ಕಾಯಕ ಜನೋತ್ಸವ

ಮುಖ್ಯಮಂತ್ರಿಗಳಿಂದ ಮಡಿವಾಳ ಮಾಚಿದೇವ ಮಠದ ಮುಖ್ಯ ಮಹಾದ್ವಾರ ಉದ್ಘಾಟನೆ

ಮೈಸೂರು,ಡಿ.11(ಆರ್‌ಕೆಬಿ)–ಜಗದ್ಗುರು ಮಾಚಿದೇವ ಮಹಾ ಸಂಸ್ಥಾನ ಮಠದ ವತಿಯಿಂದ ಜ.5 ಮತ್ತು 6ರಂದು ಚಿತ್ರದುರ್ಗದ ಮಠದಲ್ಲಿ 'ಕಾಯಕ ಜನೋತ್ಸವ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಠಾಧೀಶ ಶ್ರೀ ಬಸವ ಮಾಚಿದೇವ ಸ್ವಾಮೀಜಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.5ರಂದು ಬೆಳಗ್ಗೆ 10.30ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶ್ರೀಮಠದ ಶಿಲಾ ಮುಖ್ಯ ಮಹಾದ್ವಾರ ಹಾಗೂ ಸಮಾರಂಭ ಉದ್ಘಾಟನೆ ನೆರವೇರಿಸುವರು. ಇದೇ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಾಚಿದೇವಶ್ರೀ ಪ್ರಶಸ್ತಿ ಸ್ವೀಕರಿಸುವರು ಎಂದರು.

ಜ.6ರಂದು ಸಂಜೆ 4 ಗಂಟೆಗೆ ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಯಲ್ಲಿ ಸೇರ್ಪಡೆ ಮಾಡಬೇಕೆಂದು ಒತ್ತಾಯಿಸಿ, ಮಹಿಳಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಸಾಂಸ್ಕೃತಿಕ ಸಂಭ್ರಮ ಮತ್ತು ಸಾಧಕರ ಸಮಾವೇಶದಲ್ಲಿ ಮಾಚಿದೇವ ಸೇವಾ ರತ್ನ ಪ್ರಶಸ್ತಿ ಪ್ರದಾನ, ವಿವಿಧ ದತ್ತಿ ನಿಧಿಗಳ ದಾನಿಗಳಿಗೆ ಸನ್ಮಾನ, ಆದರ್ಶ ಕುಟುಂಬ ಪ್ರಶಸ್ತಿ ಪ್ರದಾನ, ಕಾಯಕ ಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳಿರುತ್ತವೆ. ಕಾರ್ಯಕ್ರಮದಲ್ಲಿ ಧಾರ್ಮಿಕ ದತ್ತಿ ಸಚಿವರಾದ ಶಶಿಕಲಾ ಜೊಲ್ಲೆ ಭಾಗವಹಿಸುವರು ಎಂದರು.

ಅಸಂಘಟಿತ ಮಡಿವಾಳ ಸಮುದಾಯ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಹೀಗಾಗಿ ಕಾರ್ಯಕ್ರಮ ವೇಳೆ ಮುಖ್ಯಮಂತ್ರಿಗಳಿಗೆ ಸಮುದಾಯದ ಹಕ್ಕು, ಅಹವಾಲುಗಳನ್ನು ಸಲ್ಲಿಸಲಾಗುವುದು. ಅಲ್ಲದೆ, ಸಮುದಾಯದವರನ್ನು ಒಗ್ಗೂಡಿಸುವ ಉದ್ದೇಶವನ್ನೂ ಹೊಂದಲಾಗಿದೆ. ಸುಮಾರು 1.5 ಲಕ್ಷ ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು. ಆರ್.ರಘು, ಚಂದ್ರಶೇಖರ್, ಪ್ರಸನ್ನ, ಸತ್ಯನಾರಾಯಣ ಇನ್ನಿತರರು ಹಾಜರಿದ್ದರು.

ಅವಧಿ ವಿಸ್ತರಣೆ

ಮೈಸೂರು,ಡಿ.11–ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರ (ಸ್ನಾತಕೋತ್ತರ ಹಾಗೂ ವೃತ್ತಿಪರ ಕೋರ್ಸುಗಳ ವಿದ್ಯಾರ್ಥಿಗಳಿಗೆ) ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2022–23ನೇ ಸಾಲಿಗೆ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಡಿ.19ರವರೆಗೆ ವಿಸ್ತರಿಸಿದೆ. ವಿದ್ಯಾರ್ಥಿ ಪೋಷಕರ ವಾರ್ಷಿಕ ಆದಾಯ ಮಿತಿ ಪ್ರವರ್ಗ–1, ಎಸ್‌ಸಿ ಮತ್ತು ಎಸ್‌ಟಿ 2.50 ಲಕ್ಷ ರೂ. ಪ್ರವರ್ಗ–2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆ 1 ಲಕ್ಷ ರೂ. ಒಳಗಿರಬೇಕು. ಅರ್ಜಿ ಸಲ್ಲಿಸಲು ಬಯಸುವ ವಿದ್ಯಾರ್ಥಿಗಳ ವಯೋಮಿತಿ 16ರಿಂದ 26 ವರ್ಷದೊಳಗಿರಬೇಕು. ಇಲಾಖೆ www.bcwd.karnataka.gov.in ಅಥವಾ ದೂ.ಸಂ 080–8050370006 ಸಂಪರ್ಕಿಸಬಹುದು.

ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್‌ನಿಂದ ಕರೋಲ್ ಸಿಂಗಿಂಗ್ ಸ್ಪರ್ಧೆ; 100ಕ್ಕೂ ಹೆಚ್ಚು ತಂಡ ಭಾಗಿ



ಮೈಸೂರು,ಡಿ.11(ಪಿಎಂ)–ಮೈಸೂರಿನ ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 30ನೇ ಕರೋಲ್ ಸಿಂಗಿಂಗ್ ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಿಂದ 100ಕ್ಕೂ ಹೆಚ್ಚು ತಂಡಗಳು ಭಾಗವಹಿಸಿ ತಮ್ಮ ಗಾನಮಾಧುರ್ಯದಲ್ಲಿ ಯೇಸುಕ್ರಿಸ್ತರ ಸ್ಮರಿಸಿದವು. ಮೈಸೂರಿನ ಸಿದ್ಧಾರ್ಥನಗರದ ಟೆರಿಷಿಯನ್ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸ್ಪರ್ಧೆಗೆ ಮೈಸೂರು ಬಿಷಪ್ ಡಾ.ಕೆ.ಎ.ವಿಲಿಯಂ ಚಾಲನೆ ನೀಡಿದರು.

ಪ್ರತಿ ತಂಡದಲ್ಲಿ ಕನಿಷ್ಠ 5 ಮಂದಿಯಿಂದ ಗರಿಷ್ಠ 50 ಮಂದಿವರೆಗೆ ಇರಲು ಅವಕಾಶ ಕಲ್ಪಿಸಲಾಗಿತ್ತು. 1 ನಿಮಿಷ ಪೂರ್ವ ಸಿದ್ಧತೆ ಸೇರಿದಂತೆ ಪ್ರತಿ ತಂಡದ ಗಾಯನಕ್ಕೆ 6 ನಿಮಿಷದ ಅವಧಿ ನಿಗದಿ ಮಾಡಲಾಗಿತ್ತು. ಕಿಂಡರ್ ಗಾರ್ಟನ್ ವಿಭಾಗ, 1ರಿಂದ 4ನೇ ತರಗತಿ ವಿಭಾಗ, 5ರಿಂದ 7ನೇ ತರಗತಿ ವಿಭಾಗ, 8ರಿಂದ 10ನೇ ತರಗತಿ ವಿಭಾಗ, ಪಿಯು ಕಾಲೇಜು ವಿಭಾಗ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿಭಾಗ, ಚರ್ಚ್‌ಗಳ ವಿಭಾಗ ಮತ್ತು ವೃತ್ತಿಪರರ ವಿಭಾಗ ಮೊದಲಾದ ವಿಭಾಗಗಳು ಸೇರಿದಂತೆ ಒಟ್ಟು 12 ವಿಭಾಗಗಳಲ್ಲಿ ಸ್ಪರ್ಧೆ ನಡೆಯಿತು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಗಳಿಗೆ ಟ್ರೋಫಿಗಳ ಜೊತೆಗೆ ನಗದು ಬಹುಮಾನ ವಿತರಿಸಲಾಯಿತು. ಮೌಂಟ್ ಕಾರ್ಮೆಲ್ ಚರ್ಚ್‌ನ ಪ್ಯಾರಿಷ್ ಪ್ರೀಸ್ಟ್ ರೆ.ಫಾ.ಶಾಜಿ ಕುನ್ನೆಲ್, ಕಾರ್ಮೆಲ್ ಭವನದ ಸಲಹೆಗಾರ ರೆ.ಫಾ.ರಾಯ್ ಪೂಪ್ಪಿಳ್ಳಿ, ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಅಧ್ಯಕ್ಷ ಜಾನ್ಸನ್ ಚಾಲಿಸ್ಸೆರಿ, ಸ್ಪರ್ಧೆ ಸಂಚಾಲಕ ಎಂ.ಕೆ.ಜಾನಿ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.12.2022 ಸೋಮವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022ರಿಂದ 15.12.2022 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ : ಪುಷ್ಯ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 22ನೇ ವರ್ಷದ ಹನುಮ ಜಯಂತಿ ಮಹೋತ್ಸವ, ನಿತ್ಯಾರಾಧನೆ, ಶಾಕಾಂಬರಿ ಅಲಂಕಾರ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಇರ್ವಿನ್ ರಸ್ತೆ, ಬೆಳಗ್ಗೆಯಿಂದ.

■ **ಶ್ರೀ ಶ್ರೀ ನಾಗಾನಂದ ದತ್ತಾತ್ರೇಯ ಮಠ:** ಶ್ರೀ ಶುಭಕೃತ ಸಂವತ್ಸರದ ಭಗವಾನ್ ಶ್ರೀ ದತ್ತಾತ್ರೇಯ ಸ್ವಾಮಿಯವರ 47ನೇ ವರ್ಷದ ಸಪ್ತಾಹ, ಸ್ಥಳ: ಮಠದ ಆವರಣ, ಬೆಳಗ್ಗೆಯಿಂದ.

■ **ಮೈಸೂರು ಮಕ್ಕಳ ಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಪೀಠ :** ಸ್ವರ್ಣಾಮೃತ ಪ್ರಾಶನ, ಸ್ಥಳ: ಎಸ್‌ಡಿಎಂ ಮತ್ತು ಎಂಎಂಕೆ ಮಹಿಳಾ ಮಹಾವಿದ್ಯಾಲಯ, ಬಲ್ಲಾಳ್ ಸರ್ಕಲ್ ಹತ್ತಿರ, ಬೆಳಗ್ಗೆ 7 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** 'ಸುವರ್ಣ ಪ್ರಾಶನ ಅಭಿಯಾನ', ಸ್ಥಳ: ಆಸ್ಪತ್ರೆ ಆವರಣ, ಮೈಸೂರು ನಗರದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆ, ಕಾಲೇಜು, ಪಬ್ಲಿಕ್ ಸ್ಕೂಲ್‌ಗಳಲ್ಲಿ ಬೆಳಗ್ಗೆ 8 ಗಂಟೆಯಿಂದ.

■ **ಕ್ರೀಡಾ ಭಾರತಿ, ಮೈಸೂರು ಜಿಲ್ಲೆ, ಮೈಸೂರು ವಿವಿ ದೈಹಿಕ ಶಿಕ್ಷಕ ವಿಭಾಗ :** ಜಿಲ್ಲಾ ಮಟ್ಟದ ಸ್ಪರ್ಧಾಕೂಟ–2022 ಮತ್ತು ರಾಜ್ಯ ಮಟ್ಟದ ಯೋಗ ವ್ಯೂಹ ರಚನಾ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭ, ಉದ್ಘಾಟನೆ: ಕ್ರೀಡಾ ಭಾರತಿ ದಕ್ಷಿಣ ಭಾರತ ಸಂಯೋಜಕ ಚಂದ್ರಶೇಖರ್ ಜಾಗಿದಾರ್, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ (ಪ್ರಭಾರ) ಪ್ರೊ. ಹೆಚ್. ರಾಜಶೇಖರ್, ಕ್ರೀಡಾ ಸಚಿವ ಡಾ. ಕೆ.ಸಿ. ನಾರಾಯಣಗೌಡ, ಸ್ಥಳ: ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಫ್ರೀ–ಡಯಾಬಿಟಿಸ್ ಮತ್ತು ಸಂಧಿವಾತ ಕಾಯಿಲೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಹಿರಿಯ ನಾಗರಿಕರ ಮಂಡಳಿ :** 43ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಸರಸ್ವತಿ ಸಮುದಾಯ ಭವನ, ಜಯಲಕ್ಷ್ಮೀಪುರಂ, ಬೆಳಗ್ಗೆ 9 ಗಂಟೆಗೆ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಅಭ್ಯುದಯ ಮಹಿಳಾ ಸಮಾಜ:** ವಿವಿಧ ಜಾನಪದ ಮತ್ತು ಸಂಗೀತ ವಿದ್ವಾಂಸರಿಂದ ಜನಪದ ಗೀತೆ ಮತ್ತು ಸುಗಮ ಸಂಗೀತ ಕಾರ್ಯಾಗಾರ, ಉದ್ಘಾಟನೆ: ಗಾಯಕರು ಮತ್ತು ಮಹಾರತ್ನ ಟ್ರಸ್ಟ್ ಅಧ್ಯಕ್ಷ ಮೈಸೂರು ಮಹಾಲಿಂಗು, ಸ್ಥಳ: ಅಭ್ಯುದಯ ಮಹಿಳಾ ಸಮಾಜ, ಜೆ.ಪಿ.ನಗರ, ಸಂಜೆ 4ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ– ಡಾ. ಬಿ.ಎನ್.ಮನೋರಮ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಕೆ.ಟಿ. ಉದಯಕಿರಣ್, ಮತ್ತೂರು ಕುಮಾರಸ್ವಾಮಿ, ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 8.30 ಬದುಕು ಅಕ್ಷಯವಾಗಲಿ: ಪ್ರಾಯೋಜಿತ ಕಾರ್ಯಕ್ರಮ, 10.00 ಲಯ ಸಂಭ್ರಮ, ಶಾಸ್ತ್ರೀಯ ಸಂಗೀತದ ವರ್ಣ ಮತ್ತು ತಿಲ್ಲಾನಗಳಲ್ಲಿ ಮೃದಂಗದ ಪಾತ್ರ. ಭಾಗವಹಿಸುವವರು ಖ್ಯಾತ ಹಿನ್ನೆಲೆ ಗಾಯಕರಾದ ರಾಜ್ ಕುಮಾರ್ ಭಾರತಿ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ. **ಮಧ್ಯಾಹ್ನ:** 12.30 ದೇವರನಾಮ–ನಂದಿತಾ ಮತ್ತು ವೃಂದ, 12.45 ನಮ್ಮ ಆರೋಗ್ಯ: ಹೃದಯ ವೈಫಲ್ಯ: ಕಾರಣಗಳು, ಚಿಕಿತ್ಸೆ ಮತ್ತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕುರಿತು ಡಾ.ವೀನು ಅವರೊಂದಿಗೆ ಮಾತುಕತೆ, 1.20 ಭಾವಗೀತೆ: ಎ.ಎನ್.ಶೀಲ, 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ–ಡಾ.ಸುಕನ್ಯಾ ಪ್ರಭಾಕರ್. **ಸಂಜೆ:** 4.00 ಮಹಿಳಾರಂಗ 'ಡಾಕ್ಟರ್ ಸಮಯ' ವಿಷಯ–ಮಹಿಳೆಯರನ್ನು ಕಾಡುವ ಸಾಮಾನ್ಯ ಆರೋಗ್ಯ ಸಮಸ್ಯೆಗಳು. ಭಾಗವಹಿಸುವವರು ಡಾ.ಸಂಗೀತಾ ಪ್ರಸ್ತುತಿ–ಕೆ.ಬಿ.ಮೀನಾ, 4.30 ಝೇಂಕಾರ: ಮಕ್ಕಳ ಗೀತಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್‌ವಾಣಿ– ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ಕೆ.ಸಿ.ಕೆಂಪನಾಯಕ ಅವರೊಂದಿಗೆ ಸಂದರ್ಶನ. **ರಾತ್ರಿ:** 9.30 ಜಿ.ಎನ್.ಬಾಲಸುಬ್ರಹ್ಮಣ್ಯಂ: ಹಾಡುಗಾರಿಕೆ, 10.30 ಸವಿನೆನಪು.

ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಕಾರ್ಯಕ್ರಮ



■ **ಶ್ರೀರಂಗ ಮಂದಿರ (ಚಲನಚಿತ್ರೋತ್ಸವ) :** ಬೆಳಗ್ಗೆ 10.30ರಿಂದ 'ಕಾವಿ' (ಹಿಂ), ನಿರ್ದೇಶನ: ಗ್ರೆಗ್ ಹೆಲ್ವೇ, ಮಧ್ಯಾಹ್ನ 12ರಿಂದ 'ಮಿಟ್ಟಿ ಮಾನಸ್' (ಹಿಂ), ನಿರ್ದೇಶನ: ಮಣಿಕೌಲ್, ಮಧ್ಯಾಹ್ನ 2ರಿಂದ 'ಉಲ್ಗುಲನ್ ಏಕ್ ಕ್ರಾಂತಿ' (ಹಿಂ), ನಿರ್ದೇಶನ: ಅಶೋಕ್ ಶರಣ್.

■ **ಭೂಮಿಗೀತ :** ಮಣಿಪುರ ಕಲಾಕ್ಷೇತ್ರ ತಂಡದಿಂದ 'ಇಮಾ ನಂಗಿ ನತಂಬಾಕ್ತ' (ಮಣಿಪುರಿ), ರಚನೆ, ಸಂಗೀತ, ನಿರ್ದೇಶನ: ಹೈಸ್ನಾಂ ತೋಂಬ, ಸಂಜೆ 6.30ರಿಂದ.

■ **ಸಂಸತ್ ರಂಗ ಮಂದಿರ :** ಉಡುಪಿಯ ಸುಮ ನಸಾ ಕೊಡವೂರು ತಂಡದಿಂದ 'ಕಾಪ' (ತುಳು), ನಿರ್ದೇಶನ: ದಿವಾಕರ್ ಕಟೀಲ್.

■ **ಕಲಾಮಂದಿರ :** ಬೆಂಗಳೂರಿನ ಕರ್ನಾಟಕ ಕಲಾವೈಭವ ಸಂಘದಿಂದ 'ಗೌಡ್ರ ಗದ್ಲ' (ಕನ್ನಡ), ರಚನೆ: ಬಿ.ವಿ. ಈಶ, ನಿರ್ದೇಶನ: ಮಾಲತಿ ಸುಧೀರ್.

■ **ಬಿ.ವಿ. ಕಾರಂತ ರಂಗಚಾವಡಿ :** ಮೈಸೂರಿನ ಕಿರಗಸೂರು ರಾಜಪ್ಪ ಮತ್ತು ತಂಡದವರಿಂದ ರಂಗ ಗೀತೆಗಳು.

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಕೇಂದ್ರ :** ಮೈಬಿಲ್ಡ್ 22 ಸಮಾರೋಪ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಸಂಜೆ 4 ಗಂಟೆಗೆ.

■ **ಎಂ.ಬಿ. ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ :** ಪ್ರಥಮ ವರ್ಷದ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಶಾಸಕರುಗಳಾದ ನಾಗೇಂದ್ರ, ಜಿ.ಟಿ. ದೇವೇಗೌಡ, ರಾಮದಾಸ್, ಸಂಸದ ಪ್ರತಾಪ್ ಸಿಂಹ ಅವರ ಧರ್ಮಪತ್ನಿ ಶ್ರೀಮತಿ ಡಾ. ಅರ್ಪಿತಾ ಸಿಂಹ, ಮೇಯರ್ ಶಿವಕುಮಾರ್, ಸ್ಥಳ: ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆ, ಸಂಜೆ 4 ಗಂಟೆಗೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ:** ಪಂಡಿತ್ ಡಾ. ಬೆ.ನಾ.ವಿಜಯೇಂದ್ರಾಚಾರ್ ಅವರಿಂದ 'ಮಹಾಭಾರತದ ಉದ್ಯೋಗ ಪರ್ವ' ಕುರಿತು ಪ್ರವಚನ, ಸ್ಥಳ: ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರ ಮಠದ ಆವರಣ, ಸಂಜೆ 5 ಗಂಟೆಯಿಂದ.

ಜೊಂಡು ಹುಲ್ಲಿನ ಕರಕುಶಲ ವಸ್ತುಗಳಿಗೆ ಭರ್ಜರಿ ಬೇಡಿಕೆ



ಮೈಸೂರು, ಡಿ.11(ಎಸ್‌ಪಿಎನ್)– ಈ ಬಾರಿ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಕರಕುಶಲ ವಸ್ತು ಪ್ರದರ್ಶನ ಆವರಣದಲ್ಲಿರುವ ದವಲಪ್ಪ ತಮ್ಮಣ್ಣಾ ಸಾತಪುತೆ ಮಳಿಗೆಯಲ್ಲಿ ಜೊಂಡು ಹುಲ್ಲಿನಿಂದ ತಯಾರಿಸಿದ ಬ್ಯಾಗ್, ಮ್ಯಾಟ್ ಸೇರಿದಂತೆ ಇತರೆ ಕರಕುಶಲ ವಸ್ತುಗಳಿಗೆ ಗೃಹಿಣಿಯಿಂದ ಭರ್ಜರಿ ರೆಸ್ಪಾನ್ಸ್ ದೊರೆತಿದೆ.

ಈ ಕುರಿತು ಮಳಿಗೆಯ ಮಾಲೀಕ ದವಲಪ್ಪ ಮಾತನಾಡಿ, ನಮ್ಮ ಊರು ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲೂಕಿನ ಹುಲಗೇರಿ ಬಣದ ಸಮಗಾರ ಓಣಿ. ಈ ಕಲೆ ನಮ್ಮ ಪೂರ್ವಜರಿಂದ ಬಂದಿದೆ. ಜೊಂಡು ಹುಲ್ಲಿನಿಂದ ಅಡುಗೆ ಮನೆಯಲ್ಲಿ ಉಪಯೋಗಿಸುವ ಸಿಂಬೆ, ಟೇಬಲ್ ಮ್ಯಾಟ್, ವಿವಿಧ ಬ್ಯಾಗ್, ನೆಲದ ಹಾಸು ಸೇರಿದಂತೆ ಹಲವು ಗೃಹೋಪಯೋಗಿ ಉತ್ಪನ್ನಗಳನ್ನು ತಯಾರಿಸುತ್ತೇವೆ. ಕೆರೆಯಂಗಳದಲ್ಲಿ ಬೆಳೆಯುವ ಜೊಂಡು ಹುಲ್ಲನ್ನು ಸಂಗ್ರಹಿಸಿ, ಚೆನ್ನಾಗಿ ಒಣಗಿಸಿ, ಈ ಉತ್ಪನ್ನಗಳನ್ನು ತಯಾರಿಸುತ್ತೇವೆ. ನಮ್ಮಲ್ಲಿ 100 ರೂನಿಂದ 5 ಸಾವಿರ ಬೆಲೆಯ ಉತ್ಪನ್ನಗಳಿವೆ. ಮೊದಲು ಚಾಪೆ, ನೆಲಹಾಸು, ಮಾತ್ರ ಹೆಣೆಯುತ್ತಿದ್ದೇವು.

> ಮೈಸೂರಿನಲ್ಲಿ ಪ್ಲಾಸ್ಟಿಕ್ ಬ್ಯಾನ್ ಆಗಿದೆ. ಪ್ಲಾಸ್ಟಿಕ್ ಪರ್ಯಾಯ ಏನು ಅನ್ನುವವರಿಗೆ ದೇಸಿ ಬ್ಯಾಗ್‌ಗಳು ಬಳಕೆ ಅರ್ಹವಾಗಿವೆ. ಅಲಂಕಾರಿಕವಾಗಿವೆ. ಇಂದಿನ ಪೀಳಿಗೆಗೆ ತಕ್ಕಂತೆ ತಯಾರಿಸಲಾಗಿದೆ. ಪ್ಲಾಸ್ಟಿಕ್ ಬದಲಿಗೆ ಇಂತಹ ದೇಸಿ ಬ್ಯಾಗ್‌ಗಳನ್ನು ಗ್ರಾಹಕರು ಖರೀಧಿಸಿ, ಕರಕುಶಲ ಮೇಳದಲ್ಲಿ ಜೊಂಡೊ ಹುಲ್ಲಿನಿಂದ ಎಣೆದಿರುವ ಬ್ಯಾಗ್‌ಗಳನ್ನು ಕೊಂಡು ಪ್ರೋತ್ಸಾಹಿಸಬೇಕು.
> – ಚೈತ್ರ, ಗೃಹಿಣಿ

ಕಾಲ ಬದಲಾದಂತೆ ಆಧುನಿಕತೆಗೆ ತಕ್ಕಂತೆ ಅಚ್ಚುಕಟ್ಟಾಗಿ ಹೊಸೆಯಲು ಪ್ರಯತ್ನಿಸುತ್ತಿದ್ದೇವೆ. ಕರಕುಶಲ ವಸ್ತುಗಳಿಗೆ ಒಂದು ಸೂರಿನಡಿ ಮಾರುಕಟ್ಟೆ ಒದಗಿಸಲು ಸರ್ಕಾರ ಚಿಂತಿಸಬೇಕು ಹಾಗೂ ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಉತ್ಸವಗಳು ಜರುಗಿದಾಗ, ಕರಕುಶಲ ಮೇಳ ಆಯೋಜಿಸುವ ಕ್ರಮ ಜರುಗಿಸಬೇಕು ಎಂದು ಮಾಹಿತಿ ನೀಡಿದರು.

ನಗರ ಪ್ರದೇಶದಲ್ಲಿ ಪ್ಲಾಸ್ಟಿಕ್, ಇತರೆ ಚರ್ಮದಿಂದ ತಯಾರಿಸಿದ ವಸ್ತುಗಳಿಂದ ಅಲಂಕಾರಿಕ ವಸ್ತುಗಳಾಗಿ ಖರೀದಿಸಲು ಗೃಹಿಣಿ ಮುಗಿ ಬೀಳುತ್ತಿದ್ದರು. ಇದೀಗ ಜೊಂಡುಹುಲ್ಲಿನಿಂದ ತಯಾರಿಸುವ ಗೃಹೋಪಯೋಗಿ ವಸ್ತುಗಳಿಗೂ ಬೇಡಿಕೆ ಹೆಚ್ಚಾಗುತ್ತಿದೆ. ಇಂದಿನ ರಂಗಾಯಣ ಕರಕುಶಲ ಮೇಳದಲ್ಲೂ ಗ್ರಾಹಕರು ಖರೀಧಿಸಲು ಬರುತ್ತಿದ್ದಾರೆ. ಆದರೆ, ಜಿಟಿಜಿಟಿ ಮಳೆ ಹಿನ್ನೆಲೆಯಲ್ಲಿ ಗ್ರಾಹಕರು ಬರಲು ಹಿಂದೇಟು ಹಾಕುತ್ತಿದ್ದಾರೆ ಎಂದು ಮಳೆರಾಯನನ್ನು ಶಪಿಸಿದರು.

> ಈ ಉತ್ಪನ್ನಗಳನ್ನು ಗ್ರಾಹಕರು ಇಷ್ಟಪಟ್ಟು ಖರೀದಿಸಲು ಮುಂದಾದರೆ, ಮೊ.ಸಂ: 94819-03114, 80882-48321, 99459-83114 ಸಂಪರ್ಕಿಸಿದರೆ, ಕೊರಿಯರ್ ಇಲ್ಲವೆ ರಿಜಿಸ್ಟರ್ ಪೋಸ್ಟ್ ಮೂಲಕ ಜೋಪಾನವಾಗಿ ಪಾರ್ಸಲ್ ಕಳುಹಿಸುತ್ತೇವೆ. ಈ ಸೇವೆಯನ್ನು ಗ್ರಾಹಕರು ಪಡೆಯಲು ಮೊಬೈಲ್ ಸಂಪರ್ಕಿಸಿ, ಮಾಹಿತಿ ಪಡೆಯಬಹುದು. ಅಲ್ಲದೆ, ಗ್ರಾಹಕರಿಗೆ ನಮ್ಮಂತಹ ಕುಶಲಕರ್ಮಿಗಳಿಗೆ ಬೆಂಬಲವಾಗಿ ನಿಲ್ಲಬೇಕು.
> -ದವಲಪ್ಪ ತಮ್ಮಣ್ಣಾ ಸಾತಪುತೆ, ಕುಶಲಕರ್ಮಿ

ಬಹುರೂಪಿ ರಾಷ್ಟ್ರೀಯ ರಂಗೋತ್ಸವ

ಭಾರತೀಯ ಭಾಷೆಗಳ ತಾಕತ್ತು ಪ್ರಪಂಚದ ಬೇರೆ ಯಾವುದೇ ಭಾಷೆಗೂ ಇಲ್ಲ

ಸಂಸ್ಕೃತಿ-ಪರಂಪರೆ ಚಿಂತಕ ಸು.ರಾಮಣ್ಣ ಅಭಿಮತ



ಬಹುರೂಪಿ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ 'ವೈವಿಧ್ಯತೆಯಲ್ಲಿ ಭಾರತೀಯತೆ' ಕುರಿತ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಿಸಲಾಯಿತು. ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಸಾಹಿತಿ ಬಾಬು ಕೃಷ್ಣಮೂರ್ತಿ, ಸಂಸ್ಕೃತಿ-ಪರಂಪರೆ ಚಿಂತಕ ಸು.ರಾಮಣ್ಣ ಹಾಗೂ ಉಪನಿರ್ದೇಶಕಿ ನಿರ್ಮಲಾ ಮಠಪತಿ ಚಿತ್ರದಲ್ಲಿದ್ದಾರೆ.

ಮೈಸೂರು, ಡಿ.11(ಎಸ್‌ಬಿಡಿ)– ಭಾರತ, ಭಾರತೀಯ ಹಾಗೂ ಭಾರತೀಯತೆ ಪರಿಕಲ್ಪನೆಗಳನ್ನು ಮೆಲಕು ಹಾಕಿದರೆ ಗುಲಾಮಿ ಮಾನಸಿಕತೆಯಿಂದ ಸಂಪೂರ್ಣವಾಗಿ ಹೊರಬರಬಹುದು ಎಂದು ಸಂಸ್ಕೃತಿ–ಪರಂಪರೆ ಚಿಂತಕ ಸು.ರಾಮಣ್ಣ ಹೇಳಿದರು.

ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ರಾಷ್ಟ್ರೀಯ ವಿಚಾರ ಸಂಕಿರಣ ಸಮಾರೋಪ ಸಮಾರಂಭದಲ್ಲಿ ಸಮಾರೋಪ ನುಡಿಗಳನ್ನಾಡಿದ ಅವರು, ಭಾರತ, ಭಾರತೀಯ ಹಾಗೂ ಭಾರತೀಯತೆ ಪರಿಕಲ್ಪನೆ ಹುಟ್ಟಿದ್ದು ಯಾವಾಗ ಎಂದು ಯಾರಿಗೂ ತಿಳಿದಿಲ್ಲ. ಇವು ಚಿರಪುರಾತನವಾಗಿದ್ದು ಕಾಲಬಾಹಿರವಾಗದ ಮೌಲ್ಯಗಳಿಂದ ತುಂಬಿವೆ. ಈ ಮೂರು ಪರಿಕಲ್ಪನೆಗಳನ್ನು ಮೆಲಕು ಹಾಕುವ ಮೂಲಕ ಗುಲಾಮಿ ಮಾನಸಿಕತೆಯಿಂದ ಸಂಪೂರ್ಣವಾಗಿ ಹೊರಬರಬಹುದು ಎಂದರು.

ಭಾರತದ ಭಾಷೆಗಳಲ್ಲಿರುವ ತಾಕತ್ತು ಪ್ರಪಂಚದ ಯಾವ ಭಾಷೆಯಲ್ಲೂ ಇಲ್ಲ. ಆದರೆ ಇಂಗ್ಲಿಷ್ ಪ್ರಭಾವದಿಂದ ಮಲಿನವಾಗುತ್ತಾ ಹೋದವು. ಕನ್ನಡ ಕಂಗ್ಲೀಷ್, ಹಿಂದಿ ಹಿಂಗ್ಲೀಷ್ ಆದವು. ಭಾರತೀಯರು ತಮ್ಮ ವ್ಯಕ್ತಿತ್ವವನ್ನೇ ಮರೆತುಬಿಡಬೇಕು ಎಂಬ ಉದ್ದೇಶದಿಂದ ಬ್ರಿಟಿಷರು ಮೊದಲು ದೇಶದ ಹೆಸರು ಬದಲಿಸಿ ಇಂಡಿಯಾ ಎಂದು ಕರೆದರು. ಭಾರತದ ಪರ್ಯಾಯ ಪದ ಇಂಡಿಯಾ ಆಗಲು ಸಾಧ್ಯವೇ ಇಲ್ಲ. ನಮ್ಮ ತಂದೆ–ತಾಯಿ ನಮಗಿಟ್ಟಿರುವ ಹೆಸರನ್ನು ಬೇರೆ ಭಾಷೆಯಲ್ಲಿ ತರ್ಜುಮೆ ಮಾಡಿ ಹೇಳಲಾಗದು. ಮೂಲ ಹೆಸರಿನಲ್ಲಿರುವ ವಾತ್ಸಲ್ಯ ಭಾವ ಅನುವಾದದಲ್ಲಿ ಉಳಿಯುವುದಿಲ್ಲ. ಸಂವಿಧಾನ

> **ಭಾಷಣ ಸ್ಪರ್ಧೆ ವಿಜೇತರು**
>
> ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಅಂಗವಾಗಿ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ 'ವೈವಿಧ್ಯತೆಯಲ್ಲಿ ಭಾರತೀಯತೆ' ಕುರಿತು ಆಯೋಜಿಸಿದ್ದ ಭಾಷಣ ಸ್ಪರ್ಧೆಯಲ್ಲಿ 14 ಜಿಲ್ಲೆಗಳ 122 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನ ವಿದ್ಯಾರ್ಥಿನಿ ಪೃಥ್ವಿ ಭಟ್‌ಗೆ 15 ಸಾವಿರ ರೂ., ದ್ವಿತೀಯ ಸ್ಥಾನ ಪಡೆದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಎನ್.ಲಕ್ಷ್ಮೀಗೆ 10 ಸಾವಿರ ರೂ. ಹಾಗೂ ತೃತೀಯ ಸ್ಥಾನ ಪಡೆದ ಬೆಂಗಳೂರಿನ ಎನ್‌ಎಂಕೆಆರ್‌ವಿ ಕಾಲೇಜಿನ ಗಾಯತ್ರಿ ಹೆಗ್ಡೆಗೆ 5 ಸಾವಿರ ರೂ. ನಗದು ಬಹುಮಾನ ಹಾಗೂ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು.

ರಚಿಸಿದ ಪ್ರಾತಃಸ್ಮರಣೀಯ ಡಾ.ಬಿ.ಆರ್.ಅಂಬೇಡ್ಕರ್ ಅವರೂ 'ಭಾರತ' ಎನ್ನುವ ಪದವನ್ನು ಅಂತಃಕರಣದಿಂದ ಇಷ್ಟಪಟ್ಟಿದ್ದರು. ಮುಂಬೈ ಸಂಸ್ಥಾನದಲ್ಲಿ ನಡೆದಿದ್ದ ಸಭೆಯೊಂದರಲ್ಲಿ ಅಂದಿನ ಮುಖ್ಯಮಂತ್ರಿ ಖೇರ್ 'ನಾನು ಮೊದಲು ಭಾರತೀಯ, ನಂತರ ಮಹಾರಾಷ್ಟ್ರೀಯ' ಎಂದಿದ್ದರು. ಆದರೆ ಡಾ.ಅಂಬೇಡ್ಕರ್ ಅವರು 'ನಾನು ಮೊದಲು ಹಾಗೂ ಎಂದೆಂದಿಗೂ ಭಾರತೀಯ' ಎಂದರು. ಅವರಿಗೆ 'ಭಾರತ' ಎನ್ನುವುದು ಅಷ್ಟೊಂದು ಪ್ರಿಯವಾಗಿತ್ತು ಎಂದು ತಿಳಿಸಿದರು.

'ಭಾರತ'ಕ್ಕೆ 'ಇಂಡಿಯಾ' ಪರ್ಯಾಯವಲ್ಲ: ಪೂರ್ವಜರು ತುಂಬಾ ಚಿಂತನೆ ಮಾಡಿ ದೇಶಕ್ಕೆ 'ಭಾರತ' ಎಂದು ಹೆಸರಿಟ್ಟಿದ್ದಾರೆ. 'ಭಾ' ಎಂದರೆ ಪ್ರಕಾಶ, ಬೆಳಕು, ಜ್ಞಾನ, ತಿಳುವಳಿಕೆ ಎಂದರ್ಥ. 'ರತ' ಎಂದರೆ ಜ್ಞಾನದ ಬೆಳಕನ್ನು ಎಲ್ಲೆಡೆ ಪಸರಿಸುವ ಕಾರ್ಯ ನಿರಂತರವಾಗಿರಬೇಕು ಎಂದರ್ಥ. ಜ್ಞಾನ ಹಾಗೂ ವಿದ್ಯೆ ಎಲ್ಲರ ಸಂಪತ್ತಾಗಬೇಕೆಂಬುದಕ್ಕೆ ಭಾರತ ಭೂಮಿಕೆಯಾಗಿದೆ. ಆದರೆ ಸ್ವಾತಂತ್ರ್ಯ ನಂತರದಲ್ಲಿ ಪುಟ್ಟ ರಾಷ್ಟ್ರ ಶ್ರೀಲಂಕಾ, ಸಿಲೋನ್ ಹೆಸರು ಬದಲಿಸಿ ಮೂಲ ಹೆಸರು ಉಳಿಸಿಕೊಂಡಿತು. ಮ್ಯಾನ್ಮಾರ್ ಎಂಬುದು 'ಬರ್ಮಾ' ಆಗಿ ಬದಲಾಯಿತು. ಆದರೆ ನಮ್ಮ ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರ್‌ಲಾಲ್ ನೆಹರೂ ಭಾರತ ಜಗತ್ತಿನಲ್ಲಿ 'ಇಂಡಿಯಾ' ಎಂದೇ ಗುರುತಿಸಿಕೊಂಡಿರುವುದರಿಂದ 'ಇಂಡಿಯಾ ಅರ್ಥಾತ್ ಭಾರತ' ಎಂದೇ ಉಳಿಸಿಕೊಂಡರು. ಇದಕ್ಕೆ ಅವರಲ್ಲಿದ್ದ ಬೇರೆ ರೀತಿಯ ಆತಂಕವೂ ಕಾರಣವಾಗಿತ್ತು. ಆದರೆ ಈಗಿನ ಪ್ರಧಾನಿ ಬಲು ಕಿಲಾಡಿ. ಸ್ವಾತಂತ್ರ್ಯೋತ್ಸವದ ದಿನ ಎಲ್ಲೆಡೆ 'ಭಾರತ್ ಮಾತಾಕಿ ಜೈ' ಮೊಳಗುವಂತೆ ಮಾಡಿದರು. ಹಾಗೆಯೇ ಲಕ್ಷ ನಂತರ ಕೋಟ್ಯಾಂತರ ಜನ ಅಭಿಮಾನ, ಅಂತಃಕರಣದಿಂದ 'ಭಾರತ' ಎಂದು ಹೇಳಲಾರಂಭಿಸಿದರೆ 'ಇಂಡಿಯಾ' ಪದ ಸಂಪೂರ್ಣ ನಶಿಸುತ್ತದೆ ಎಂದು ಆಶಿಸಿದರು.

ರಂಗಾಯಣ ಬಣ್ಣನೆ: ಅಡ್ಡಂಡ ಕಾರ್ಯಪ್ಪನವರು ರಂಗಾಯಣದ ನಿರ್ದೇಶಕರಾದಾಗ ಸಂತಸಗೊಂಡ ಹೆಚ್ಚು ಸಂಖ್ಯೆಯ ಜನ, ರಂಗಾಯಣದ ಮೂಲಕ ನಿಜವಾದ ಭಾರತೀಯತೆ ಮತ್ತೊಮ್ಮೆ ಪಸರಿಸುತ್ತದೆ ಎಂದು ವಿಶ್ವಾಸ ತಳೆದಿದ್ದರು. ಅದರಂತೆ 'ಭಾರತೀಯತೆ' ಶೀರ್ಷಿಕೆಯಡಿ ಬಹುರೂಪಿ ರೂಪಿಸಿದ್ದಾರೆ. ಒಳ್ಳೆಯ ವಿಷಯಗಳನ್ನು ಮೆಲುಕು ಹಾಕಿದಷ್ಟೂ ಅದು ಜೀರ್ಣವಾಗುತ್ತದೆ. ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ ನಡೆಸುವ ಮೂಲಕ ಭಾರತೀಯತೆ ಅಥವಾ ರಾಷ್ಟ್ರೀಯತೆಯ ಕಿಡಿ ಹೊತ್ತಿಸಿದ್ದಾರೆ. ಜೀವನವನ್ನು ದೇಶಕ್ಕಾಗಿ ಉಪಯೋಗಿಸಬೇಕೆಂದು 60 ವರ್ಷದಿಂದ ಆರ್‌ಎಸ್‌ಎಸ್‌ನಲ್ಲಿ ತೊಡಗಿರುವ ನನಗೆ ಸಂಧ್ಯಾಕಾಲದಲ್ಲಿ ಧನ್ಯತಾಭಾವ ತುಂಬಿದೆ ಎಂದರು.

ಸಾಹಿತಿ ಬಾಬು ಕೃಷ್ಣಮೂರ್ತಿ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಉಪನಿರ್ದೇಶಕಿ ನಿರ್ಮಲಾ ಮಠಪತಿ ವೇದಿಕೆಯಲ್ಲಿದ್ದರು.

ಹೊಸ ಪೀಳಿಗೆಯಿಂದ ಭಾರತ ರಕ್ಷಣೆಯಾಗಬೇಕು

ಸಾಹಿತಿ ಬಾಬು ಕೃಷ್ಣಮೂರ್ತಿ ಅಭಿಮತ

ಮೈಸೂರು, ಡಿ.11(ಎಸ್‌ಬಿಡಿ)– ಹೊಸ ಪೀಳಿಗೆಯಿಂದ ಭಾರತದ ರಕ್ಷಣೆಯಾಗಬೇಕಿದೆ. ಭಾರತ ವಿಶ್ವಗುರುವಾಗಲು ಪ್ರತಿಯೊಬ್ಬರ ಕೊಡುಗೆ ಅಗತ್ಯವಾಗಿದೆ ಎಂದು ಸಾಹಿತಿ ಬಾಬು ಕೃಷ್ಣಮೂರ್ತಿ ಅಭಿಪ್ರಾಯಿಸಿದರು.

ಬಹುರೂಪಿ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ಪ್ರಾಚೀನ ರಂಗಭೂಮಿ ಮತ್ತು ಭಾರತೀಯತೆ' ಕುರಿತು ಉಪನ್ಯಾಸ ನೀಡಿದ ಅವರು, ಸಾವಿರ ವರ್ಷದ ಹಿಂದಿನ ವಿಗ್ರಹ ಭಂಜನೆ ಮತ್ತೊಂದು ರೀತಿಯಲ್ಲಿ ಮುಂದುವರೆದಿದೆ. ಮನಸ್ಸುಗಳನ್ನು ಒಡೆಯುವ ಮೂಲಕ ಭಾರತೀಯತೆಯನ್ನು ಸರ್ವನಾಶ ಮಾಡುವ ಜನಾಂಗ ಸೃಷ್ಟಿಸಬೇಕೆಂಬ ಪ್ರಯತ್ನ ಕೆಲ ಶಕ್ತಿಗಳಿಂದ ನಡೆದಿದೆ. ಹಾಗಾಗಿ ಹೊಸ ಪೀಳಿಗೆಯಿಂದ ಭಾರತದ ರಕ್ಷಣೆಯಾಗಬೇಕು. ಸ್ವಾಮಿ ವಿವೇಕಾನಂದರು, ದಯಾನಂದ ಸರಸ್ವತಿ, ಅರವಿಂದ್ ಘೋಷ್‌ರಂತಹ ಮಹನೀಯರ ಬಗ್ಗೆ ಅಧ್ಯಯನ ಮಾಡಿ ಭಾರತೀಯತೆಯನ್ನು ಅರ್ಥೈಸಿಕೊಂಡು ತಮ್ಮ ವೃತ್ತಿ ಕ್ಷೇತ್ರದಲ್ಲಿ ಪ್ರಯೋಗ ಮಾಡುವ ಪ್ರಯತ್ನ ನಡೆಸಬೇಕೆಂದು ತಿಳಿಸಿದರು.

ವೇದಗಳಲ್ಲಿ, ಯಜ್ಞ, ಹೋಮಗಳು ನಡೆಯುವಲ್ಲಿಯೂ ರಂಗ ಚಟುವಟಿಕೆ ಇರುತ್ತಿತ್ತು ಎನ್ನಲಾಗಿದೆ. ರಾಮಾಯಣ, ಮಹಾಭಾರತದಲ್ಲೂ ರಂಗಭೂಮಿ ಕಾಣಬಹುದು. ರಂಗಭೂಮಿ, ನಟ, ಅಭಿನಯ, ವರ್ಣವಿನ್ಯಾಸ ಸೇರಿದಂತೆ ಪ್ರತಿಯೊಂದು ಅಂಶಗಳನ್ನು ಭರತಮುನಿ ತನ್ನ 'ನಾಟ್ಯಶಾಸ್ತ್ರ' ಕೃತಿಯಲ್ಲಿ ಅಡಕಗೊಳಿಸಿದ್ದಾರೆ. ಅದರ ಆಧಾರದಲ್ಲೇ ಇಂತಹ ನಾಟಕಗಳಾಗಿವೆ. ಪ್ರಾಚೀನ ಸಾಹಿತ್ಯದ ಗಣಿಯಿಂದ ಭಾರತೀಯತೆ ಪ್ರತಿಪಾದಿಸುವ ನಾಟಕಗಳು ರಚನೆಯಾದವು. ಕಾಳಿದಾಸ ಮಹಾಕವಿ ಜಗತ್ತಿನ ಅತೀದೊಡ್ಡ ನಾಟಕಕಾರ. ಭಾರತೀಯ ನಾಟಕಗಳಲ್ಲಿ ಸೃಜನಶೀಲತೆ ಜೊತೆಗೆ ಉತ್ತಮ ಸಂದೇಶದೊಂದಿಗೆ ಭಾರತೀಯತೆ ಉಳಿಸುವ ಪ್ರಯತ್ನ ನಡೆದಿದೆ ಎಂದರು.

ಜನಜೀವನ ಹೇಗಿರಬೇಕೆಂದು ರಾಮಾಯಣ, ಮಹಾಭಾರತ, ಭಾಗವತ ದೃಷ್ಟಾಂತಗಳ ಮೂಲಕ ಒಂದು ಚೌಕಟ್ಟು ನೀಡಿದ್ದಾರೆ. ಇಂದಿಗೂ ಭಕ್ತಿ ಬಹಳ ಪ್ರಬಲವಾಗಿದೆ. ಜಗತ್ತಿಗೆ ಬೆಳಕು ನೀಡುವ ಶಕ್ತಿ ಭಾರತೀಯ ಸಂಸ್ಕೃತಿಗಿದೆ. ಇಸ್ಲಾಂ ಆಕ್ರಮಣದಲ್ಲಿ ದೇವಾಲಯ, ದೇವರ ಮೂರ್ತಿಗಳನ್ನು ಒಡೆಯುವ ಮೂಲಕ ಭಾರತೀಯತೆಗೆ ದೊಟ್ಟ ಕಂಟಕ ಸೃಷ್ಟಿಸಿದರು. ನಂತರದಲ್ಲಿ ಬ್ರಿಟಿಷರು ದೇವಾಲಯ ಒಡೆದರೆ ಸಾಲದು ಮರದ ಬುಡಕ್ಕೆ ಕೊಡಲಿ ಹಾಕಬೇಕೆಂದು ಮೆಕಾಲೆ ಮೂಲಕ ಗುಮಾಸ್ತರನ್ನು ತಯಾರು ಮಾಡುವ ಶಿಕ್ಷಣ ಪದ್ಧತಿಯನ್ನು, ಹಾಗೂ ಪಾದ್ರಿಗಳ ಮೂಲಕ ಮತಾಂತರ ಆರಂಭಿಸಿದರು. ಸ್ವಾತಂತ್ರ್ಯ ನಂತರ ಮೊದಲ ಪ್ರಧಾನಿ ಸೋವಿಯತ್ ರಷ್ಯಾವನ್ನು ಆದರ್ಶಮಯ ದೇಶ ಎಂದು ಬಣ್ಣಿಸಿದರು. ಕಲೆ, ನಾಟಕ, ಶಿಕ್ಷಣ ಹೀಗೆ ಎಲ್ಲಾ ಕ್ಷೇತ್ರದಲ್ಲೂ ಅದು ಪಸರಿಸಿತು. ದೇಶದ ಪ್ರಾಚೀನ ಸಂಸ್ಕೃತಿ, ಪರಂಪರೆಯ ಬಗ್ಗೆ ಕೀಳರಿಮೆ ಮೂಡಿಸುವ ಪ್ರಯತ್ನ ನಡೆಯಿತು. ಜನರ ಮನಸ್ಸು ಕೆಡಿಸುವ ಕೆಲಸವಾಯಿತು ಎಂದು ತಿಳಿಸಿದರು.

ಪ್ರೇಕ್ಷಕರ ಮನಗೆದ್ದ ಸಿದ್ದಿ ಸಮುದಾಯದ ಜಾನಪದ ನೃತ್ಯ



ಮೈಸೂರು, ಡಿ.11(ಎಸ್‌ಪಿಎನ್)–ತಮಿಳುನಾಡಿನ ಬಹುಭಾಷಾ ತಜ್ಞ, ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ ಸುಬ್ರಹ್ಮಣ್ಯ ಭಾರತಿ ಅವರ ಜನ್ಮ ದಿನಾಚರಣೆ ಅಂಗವಾಗಿ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್)ದಲ್ಲಿ ಭಾನುವಾರ ಆಯೋಜಿಸಿದ್ದ 'ಭಾರತೀಯ ಭಾಷಾ ಉತ್ಸವ'ದಲ್ಲಿ ಬುಡಕಟ್ಟು ಸಿದ್ದಿ ಸಮುದಾಯ ಜಾನಪದ ನೃತ್ಯ ಪ್ರೇಕ್ಷಕರ ಗಮನ ಸೆಳೆದವು.

ಕಾರ್ಯಕ್ರಮ ಮುಗಿದ ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ತಂಡದ ಸಂಚಾಲಕಿ ಲಿಲ್ಲಿ ಜಾನಕಿ ಸಿದ್ದಿ, ಯಲ್ಲಾಪುರ ತಾಲೂಕು ಕರುಜಿಲ್ಲಾ 2018ರಲ್ಲಿ ಮೊದಲ ಬಾರಿಗೆ ಮೈಸೂರು ಭಾಷಾ ಸಂಸ್ಥಾನದಲ್ಲಿ ಕಾರ್ಯಕ್ರಮ ನೀಡಲಾಗಿತ್ತು. ತದನಂತರ ಎರಡನೇ ಬಾರಿಗೆ ಅವಕಾಶ ಸಿಗುವುದಿಲ್ಲ ಎಂದುಕೊಂಡಿದ್ದೆ. ಆದರೆ, ಸಂಸ್ಥೆಯ ಮುಖ್ಯಸ್ಥರು, ನಮ್ಮ ತಂಡಕ್ಕೆ ಅವಕಾಶ ನೀಡಿದ್ದಾರೆ. ಅದಕ್ಕೆ ನಮ್ಮ ತಂಡದ ವತಿಯಿಂದ ಚಿರಋಣಿ ಎಂದರು.

ಹಳ್ಳಿಗಾಡಿನಲ್ಲಿ ಹುಟ್ಟಿ ಬೆಳೆದು ನಮ್ಮ ಪೂರ್ವಜರಿಂದ ಬಳಿವಳಿಯಾಗಿ ಬಂದಿರುವ ಈ ಕಲೆಯನ್ನು ಉಳಿಸುವ ನಿಟ್ಟಿನಲ್ಲಿ ಇಂದಿನ ಯುವಕರಿಗೂ ಪರಿಚಯಿಸುವ ಕೆಲಸ ಮಾಡುತ್ತಿದ್ದೇವೆ. ಅಲ್ಲದೆ, ಉತ್ತರ ಕನ್ನಡ ಭಾಗದ ಶುಭ ಸಮಾರಂಭಗಳಿಗೆ ಸ್ಥಳೀಯ ಜನರು ನಮ್ಮ ತಂಡಕ್ಕೆ ಕಾರ್ಯಕ್ರಮ ನೀಡಲು ಅವಕಾಶ ಕಲ್ಪಿಸುತ್ತಾರೆ. ಅದರಲ್ಲೂ ಮೈಸೂರು ಭಾಷಾ ಸಂಸ್ಥಾನದಲ್ಲಿ ಕಾರ್ಯಕ್ರಮ ನೀಡಿದ ಮೇಲೆ ಬೆಂಗಳೂರು, ನವದೆಹಲಿ ಸೇರಿದಂತೆ ಬೇರೆ ನಗರಗಳಲ್ಲಿ ನಡೆಯುವ ಉತ್ಸವಗಳಲ್ಲಿ ನಮ್ಮ ತಂಡಕ್ಕೆ ಅವಕಾಶ ಸಿಗುತ್ತಿದೆ. ಇದಕ್ಕೆ ಇಲ್ಲಿನವರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು ಎಂದು ಎಂದ ತಮ್ಮ ಮನದಾಳ ಅನಿಸಿಕೆ ವ್ಯಕ್ತಪಡಿಸಿದರು.

ಅನಿತಾ ಸಿಲಾ ಸಿದ್ದಿ, ಕ್ಲೋರಿನ ಸಾರಿನ್ ಸಿದ್ದಿ, ಜೋಸ್ಲಿನ ಸಿದ್ಧಿ, ಮಂಗಳ ಪಾವಲ್ ಸಿದ್ದಿ, ಅನುಸೂಯ ಜುಡ ಸಿದ್ದಿ, ಲಲಿತಾ ಬೆಳಿನ್ ಸಿದ್ದಿ, ಜೋಸೆಫಾ ಸಿದ್ದಿ, ಮೋನಿಕಾ ಸಿದ್ದಿ, ತೆರೆಜಾ ಸಿದ್ದಿ ಸೇರಿದಂತೆ ಒಟ್ಟು 10 ಮಂದಿ ನಮ್ಮ ತಂಡದಲ್ಲಿದ್ದೇವೆ ಎಂದು ಮಾಹಿತಿ ನೀಡಿದರು.

ಗುಜರಾತ್ ಸಿಎಂ ಆಗಿ ಭೂಪೇಂದ್ರ ಪಟೇಲ್ ಇಂದು ಪ್ರಮಾಣ ವಚನ

ಗಾಂಧಿನಗರ, ಡಿ.11– ಗುಜರಾತಿನ ನೂತನ ಸಿಎಂ ಆಗಿ ಭೂಪೇಂದ್ರ ಪಟೇಲ್ ನಾಳೆ (ಸೋಮವಾರ) ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಗಾಂಧಿನಗರದ ಹೊಸ ಸಚಿವಾಲಯ ಬಳಿಯ ಹೆಲಿಪ್ಯಾಡ್ ಮೈದಾನದಲ್ಲಿ ಮಧ್ಯಾಹ್ನ 2 ಗಂಟೆಗೆ ನಡೆಯಲಿರುವ ಸಮಾರಂಭದಲ್ಲಿ ಗುಜರಾತಿನ 18ನೇ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರಿಗೆ ರಾಜ್ಯಪಾಲ ಆಚಾರ್ಯ ದೇವ ವ್ರತ್ ಅವರು ಪ್ರಮಾಣ ವಚನ ಬೋಧಿಸಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ಆಡಳಿತವಿರುವ ಇತರ ರಾಜ್ಯಗಳ ಮುಖ್ಯಮಂತ್ರಿಗಳು ಪ್ರಮಾಣ ವಚನ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.ಪಟೇಲ್ ಜೊತೆಗೆ ಕೆಲವು ಹೊಸ ಸಚಿವರು ಕೂಡ ಪ್ರಮಾಣ ವಚನ ಸ್ವೀಕರಿಸುವ ನಿರೀಕ್ಷೆಯಿದೆ.

ಇತ್ತೀಚೆಗೆ ನಡೆದ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ದಾಖಲೆಯ 156 ಸ್ಥಾನಗಳನ್ನು ಗೆಲ್ಲುವ ಮೂಲಕ ಸತತ ಏಳನೇ ಅವಧಿಗೆ ಅಧಿಕಾರಕ್ಕೇರುತ್ತಿದೆ. ಚುನಾವಣಾ ಫಲಿತಾಂಶದ ನಂತರ ಹೊಸ ಸರ್ಕಾರ ರಚನೆಗೆ ದಾರಿ ಮಾಡಿಕೊಡಲು 60 ವರ್ಷದ ಪಟೇಲ್ ಶುಕ್ರವಾರ ತಮ್ಮ ಇಡೀ ಸಂಪುಟದೊಂದಿಗೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು.

'ಸುಪ್ರೀಂ' ನ್ಯಾಯಮೂರ್ತಿ ಹುದ್ದೆಗೇರಿದ ದೀಪಾಂಕರ್ ದತ್ತಾ

ನವದೆಹಲಿ, ಡಿ.11– ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದೀಪಾಂಕರ್ ದತ್ತಾ (57) ಅವರು ಭಾನುವಾರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯ ಹುದ್ದೆಗೇರಿದ್ದಾರೆ. ದತ್ತಾ ಅವರು ಪ್ರಮಾಣವಚನ ಸ್ವೀಕರಿಸಿದ ನಂತರ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 28ಕ್ಕೆ ಏರಿಕೆಯಾಗಲಿದೆ. ಮುಖ್ಯ ನ್ಯಾಯಮೂರ್ತಿ ಹುದ್ದೆಯೂ ಸೇರಿ ಸುಪ್ರೀಂಕೋರ್ಟ್‌ನಲ್ಲಿ 34 ಮಂಜೂರಾತಿ ಹುದ್ದೆಗಳಿವೆ. ನ್ಯಾಯಮೂರ್ತಿ ಯು.ಯು. ಲಲಿತ್ (ನಿವೃತ್ತಿ) ಅವರ ನೇತೃತ್ವದ ಸುಪ್ರೀಂ ಕೋರ್ಟ್ ಕೊಲಿಜಿಯಂ ದತ್ತಾ ಅವರ ಹೆಸರನ್ನು ಕಳೆದ ಸೆಪ್ಟೆಂಬರ್ 26ರಂದು ಈ ಹುದ್ದೆಗೆ ಶಿಫಾರಸು ಮಾಡಿತ್ತು. ದತ್ತಾ ಅವರು 2020ರ ಏಪ್ರಿಲ್‌ನಲ್ಲಿ ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕವಾಗಿದ್ದರು.

ವಿಶೇಷಚೇತನರಿಗೆ ಕೃತಕ ಕಾಲುಗಳ ವಿತರಣೆ



ಮೈಸೂರು, ಡಿ.11–ವಿಶ್ವ ವಿಶೇಷಚೇತನರ ದಿನಾಚರಣೆ ಹಾಗೂ ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ವಿಶೇಷಚೇತನರಿಗೆ ಉಚಿತವಾಗಿ ಕೃತಕ ಕಾಲು ನೀಡಲಾಯಿತು.

ನಗರದ ನಟರಾಜ ಕಲ್ಯಾಣ ಮಂಟಪದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ, ಲಯನ್ಸ್ ಕ್ಲಬ್ ಆಫ್ ಕಾಮಧೇನು, ಲಯನ್ಸ್ ಕ್ಲಬ್ ಆಫ್ ಸಿರಿ, ಲಯನ್ಸ್ ಕ್ಲಬ್ ಆಫ್ ಸ್ಯಾಂಡಲ್‌ವುಡ್ ಹಾಗೂ ಸ್ತ್ರೀಶಕ್ತಿ ಮಹಿಳಾ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಸಿ.ಎನ್. ಮಂಜೇಗೌಡ ಕೃತಕ ಕಾಲುಗಳನ್ನು ವಿತರಿಸಿದರು.

ಈ ವೇಳೆ ಹೊಸಮಠದ ಶ್ರೀ ಚಿದಾನಂದ ಸ್ವಾಮಿ, ಡಾ.ನಾಗರಾಜ್ ವಿ.ಬೈರಿ, ಜೆಡಿಎಸ್ ಮುಖಂಡ ಕೆ.ಆರ್.ಮಿಲ್ ಶಿವಣ್ಣ, ಕ್ಲಬ್ ಅಧ್ಯಕ್ಷ ಗೋಲ್ಡ್ ಸುರೇಶ್, ಡಾ.ಶ್ರೀವಿದ್ಯಾ , ಮಹಾವೀರ ಚಂದ್ ಬನ್ಸಾಲಿ, ಕಾರ್ಯದರ್ಶಿ ಪ್ರಮೀಳಾ, ಆಶಾ ಮಂಜುನಾಥ್, ಲಯನ್ ಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

ಬಹುರೂಪಿಯಲ್ಲಿ ಕರಿಕಂಬಳಿಗೆ ಭಾರೀ ಬೇಡಿಕೆ



ಮೈಸೂರು, ಡಿ.11(ಎಂಟಿವೈ)– ರಂಗಾಯಣದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಹಿನ್ನೆಲೆಯಲ್ಲಿ ಆಯೋಜಿಸಿರುವ ಕರಕುಶಲ ಮೇಳಕ್ಕೆ ಮಳೆ ಕಾಟ ಕಾಡುತ್ತಿದ್ದರೂ, ಕುರಿ ತುಪ್ಪಟದಿಂದ ತಯಾರಿಸಿರುವ ಕರಿ ಕಂಬಳಿ ಹಾಗೂ ಟೋಪಿಗೆ ಎಲ್ಲಿಲ್ಲದ ಬೇಡಿಕೆ ವ್ಯಕ್ತವಾಗುತ್ತಿದೆ.

ಕರಕುಶಲ ಮೇಳಕ್ಕೆ ಹಾಕಿರುವ ಪೆಂಡಾಲ್‌ನಿಂದ ಮಳೆ ನೀರು ಸೋರುತ್ತಿದ್ದು, ಮಳಿಗೆದಾರರು ಕಂಗೆಟ್ಟಿದ್ದಾರೆ. ಮಳಿಗೆದಾರರ ಕೋರಿಕೆ ಮೇರೆಗೆ ಮಳಿಗೆ ಮೇಲ್ಭಾವಣಿಯಿಂದ ಮಳೆ ನೀರು ಸೋರುವಿಕೆಯಿಂದ ಮಳಿಗೆಯಲ್ಲಿರುವ ವಸ್ತುಗಳನ್ನು ರಕ್ಷಣೆಗಾಗಿ ಟಾರ್ಪಾಲ್ ಹಾಕಲಾಗುತ್ತಿದೆ. ಇದರ ನಡುವೆ ಮಳಿಗೆದಾರರು ತಮ್ಮ ಅಮೂಲ್ಯ ವಸ್ತುಗಳನ್ನು ರಕ್ಷಿಸಲು ಪ್ಲಾಸ್ಟಿಕ್ ಕವರ್‌ನಿಂದ ಮುಚ್ಚಿಡುವ ಪ್ರಯತ್ನ ಮಾಡಿಕೊಳ್ಳುತ್ತಿದ್ದಾರೆ. ಇದರ ಬೆನ್ನಲ್ಲೆ ಕಳೆದ ಎರಡು ದಿನಗಳಿಂದ ಮಳೆಗೆ ತೆರೆಯದೇ ಸುಮ್ಮನ್ನಿದ್ದ ರಾಣಿಬೆನ್ನೂರಿನ ಕುರಿ ತುಪ್ಪಟದಿಂದ ತಯಾರಿಸಿದ ವಸ್ತುಗಳ ಮಾರಾಟ ಮಳಿಗೆಯನ್ನು ಭಾನುವಾರ ತೆರೆಯಲಾಗಿತ್ತು.

ಪೂಜಾ ಕಾರ್ಯಕ್ಕೆ ಬಳಸುವ ಕರಿ ಕಂಬಳಿ, ಚಳಿಯಿಂದ ರಕ್ಷಿಸಿಕೊಳ್ಳಲು ತುಪ್ಪಟದಿಂದ ತಯಾರಿಸಿರುವ ಟೋಪಿ, ಕೈಗೆ ಕಟ್ಟುವ ದೃಷ್ಟಿ ದಾರ ಹಾಗೂ ಕಾಲಿಗೆ ಕಟ್ಟುವ ದೃಷ್ಟಿದಾರಕ್ಕೆ ಬೇಡಿಕೆ ಹೆಚ್ಚಾಗಿದೆ. ಅದರಲ್ಲಿ ಹೊದಿಕೆಯಾಗಿ ಬಳಸುವ ಕಂಬಳಿಗೆ ಬೇಡಿಕೆ ವ್ಯಕ್ತವಾಗುತ್ತಿದೆ. ಈ ಸಂಬಂಧ ಕರಿಕಂಬಳಿ ಮಾರಾಟ ಮಳಿಗೆದಾರ ರಾಣಿಬೆನ್ನೂರಿನ ಮೆಡ್ಲೇರಿ ನಿವಾಸಿ ಚಂದ್ರು ಮಾತನಾಡಿ, ನಮ್ಮಲ್ಲಿ ಗುಣಮಟ್ಟದ ಕುರಿ ತುಪ್ಪಟ ಬಳಸಿ ಕೈಮಗ್ಗದ ಮೂಲಕ ತಯಾರಿಸಿರುವ ಕಂಬಳಿ, ಪೂಜಾ ಕಂಬಳಿ, ಶಾಲು, ಮಂಕಿ ಟೋಪಿ, ದೃಷ್ಟಿ ದಾರವನ್ನು ಜನ ಖರಿದಿಸುತ್ತಿದ್ದಾರೆ. ಕಳೆದ ಎರಡು ದಿನಗಳಿಂದ ನಮ್ಮ ಮಳಿಗೆ ತೆರೆದಿರಲಿಲ್ಲ. ಆದರೆ, ಇಂದು ಮಳಿಗೆ ತೆರೆಯುತ್ತಿದ್ದಂತೆ ಜನ ನಮ್ಮಲ್ಲಿರುವ ಗುಣಮಟ್ಟದ ತುಪ್ಪಟದಿಂದ ತಯಾರಿಸಿರುವ ವಸ್ತುಗಳನ್ನು ಖರೀದಿಸುತ್ತಿದ್ದಾರೆ ಎಂದರು.

ಮಳೆಯ ನಡುವೆಯೂ ರಂಗಾಸಕ್ತರ ಮನ ಸೆಳೆದ ಜನಪದೋತ್ಸವ

ಮೈಸೂರು, ಡಿ.11(ಎಸ್‌ಬಿಡಿ)– ಮಳೆಯಿಂದಾಗಿ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಸಂಭ್ರಮ ತಗ್ಗಿತ್ತಾದರೂ ನಾಟಕ ಪ್ರದರ್ಶನ ಹಾಗೂ ಜನಪದೋತ್ಸವವನ್ನು ರಂಗಾಸಕ್ತರು ಸವಿದರು.

ಮಾಂಡೂಸ್ ಚಂಡಮಾರುತ ಪರಿಣಾಮದಿಂದಾಗಿ ಮೂರು ದಿನದಿಂದ ಮಳೆಯಾಗುತ್ತಿದ್ದು, ಬಹುರೂಪಿ ಕರಕುಶಲ, ಪುಸ್ತಕ ಹಾಗೂ ಆಹಾರ ಮಳಿಗೆಗಳು ಸೋರುತ್ತಿವೆ. ಭಾನುವಾರವೂ ಜಿಟಿಜಿಟಿ ಮಳೆಯಾಗಿದ್ದರಿಂದ ಬಹುರೂಪಿಯಲ್ಲಿ ನಿರೀಕ್ಷೆಯಷ್ಟು ಜನ ಕಾಣಿಸಲಿಲ್ಲ. ತಿಂಡಿ–ತಿನಿಸು ಹೊರತುಪಡಿಸಿ ಉಳಿದ ಮಳಿಗೆಗಳಲ್ಲಿ ವ್ಯಾಪಾರ ಕಡಿಮೆ ಇತ್ತು.

ನಾಟಕಕ್ಕೆ ಬಂದಿದ್ದರು: ರಂಗಾಯಣದ ಆವರಣದಲ್ಲಿ ಜನಸಂಖ್ಯೆ ಕಡಿಮೆ ಎನಿಸಿದರೂ ರಂಗವೇದಿಕೆಗಳಲ್ಲಿ ಪ್ರದರ್ಶನಗೊಂಡ ನಾಟಕ ನೋಡಲು ಹೆಚ್ಚು ಜನ ಬಂದಿದ್ದರು. ಗಣಿತಜ್ಞ ಭಾಸ್ಕರಾಚಾರ್ಯ ಜೀವನಾಧಾರಿತ ಕನ್ನಡ ನಾಟಕ 'ಲೀಲಾವತಿ' 'ಭೂಮಿಗೀತ'ದಲ್ಲಿ ಪ್ರದರ್ಶನಗೊಂಡಿತು. ಶಶಿಧರ್ ಡೋಂಗ್ರೆ ರಚನೆಯ ಈ ನಾಟಕವನ್ನು ಪ್ರೊ. ಎಚ್.ಎಸ್.ಉಮೇಶ್ ನಿರ್ದೇಶನದಲ್ಲಿ ಮೈಸೂರಿನ ಕಲಾಸುರುಚಿ ತಂಡದ ಕಲಾವಿದರು ಮನೋಜ್ಞವಾಗಿ ಅಭಿನಯಿಸಿದರು. ಸಂಪತ್ ರಂಗಮಂದಿರ (ಕಿರುರಂಗಮಂದಿರ)ದಲ್ಲಿ ಪ್ರದರ್ಶನಗೊಂಡ 'ಚಂದ್ರಹಾಸ' ಕನ್ನಡ ನಾಟಕಕ್ಕೂ ಉತ್ತಮ ಸ್ಪಂಧನೆ ಸಿಕ್ಕಿತು. ರಾಷ್ಟ್ರಕವಿ ಕುವೆಂಪು ರಚನೆಯ ಈ ನಾಟಕವನ್ನು ಪ್ರಮೋದ್ ಶಿಗ್ಗಾವಿ ವಿನ್ಯಾಸ, ನಿರ್ದೇಶನದಲ್ಲಿ ಸಾಣೇಹಳ್ಳಿಯ ಶ್ರೀ ಶಿವಕುಮಾರ ಕಲಾಸಂಘದ ಕಲಾವಿದರು ಪ್ರದರ್ಶಿಸಿದ ಪರಿಗೆ ನೆರೆದಿದ್ದ ರಂಗಾಸಕ್ತರ ಮೆಚ್ಚುಗೆ ವ್ಯಕ್ತವಾಯಿತು. ಇನ್ನು ಎಸ್.ಮುರುಘ ಭೂಪತಿ ರಚನೆ, ನಿರ್ದೇಶನದಲ್ಲಿ ತಮಿಳುನಾಡಿನ ಮನಲ್‌ಮಾಗುಡಿ ಥಿಯೇಟರ್ ಲ್ಯಾಂಡ್‌ನ ಕಲಾವಿದರು ಅಭಿಯಿಸಿದ 'ಇಡಕಿಣಿ ಕಥಾಯರಥಂ' ತಮಿಳು ನಾಟಕಕ್ಕೂ ಕಲಾಮಂದಿರದಲ್ಲಿ ಶೇ.60ಕ್ಕಿಂತ ಹೆಚ್ಚು ಪ್ರೇಕ್ಷಕರು ನೆರೆದಿದ್ದರು.

ಜನಪದೋತ್ಸವ: ಬಿ.ವಿ.ಕಾರಂತರ ರಂಗಚಾವಡಿಯಲ್ಲಿ ಭಾನುವಾರವೂ ಜಾನಪದ ರಂಗೇರಿತ್ತು. ಮಳೆ ಕಾರಣದಿಂದ ರಂಗವೇದಿಕೆಯಲ್ಲೇ ಪ್ರೇಕ್ಷಕರಿಗೆ ಆಸನ ವ್ಯವಸ್ಥೆ ಮಾಡಲಾಗಿತ್ತು. ಮಂಡ್ಯದ ಶ್ರೀಮತಿ ಸವಿತಾ ಚಿರಕುನ್ನಯ್ಯ ನೇತೃತ್ವದಲ್ಲಿ ಹಲವು ಕಲಾವಿದರು 'ಪೂಜಾ ಕುಣಿತ'ದೊಂದಿಗೆ ನೆರೆದಿದ್ದವರಲ್ಲಿ ಭಕ್ತಿ ಸಂಚಲನ ಉಂಟು ಮಾಡಿದರು. ನಂತರ ಜಾನಪದ ಸಾಧಕ ಡಾ.ಮೈಸೂರು ಗುರುರಾಜ್ ನೇತೃತ್ವದಲ್ಲಿ ನೀಲಗಾರರ ಮೇಳ ಮೇಳೈಸಿತು. ಸಿದ್ದಪ್ಪಾಜಿ ಸ್ಮರಣೆಯೊಂದಿಗೆ ಗಾಯನಯಾನ ಆರಂಭಿಸಿ ಹಲವು ಹಾಡುಗಳನ್ನು ಮನೋಜ್ಞವಾಗಿ ಹಾಡಿದರು.



ಮಂಡ್ಯದ ಸವಿತಾ ಚಿರಕುನ್ನಯ್ಯ ಸಹಕಲಾವಿದರೊಂದಿಗೆ 'ಪೂಜಾ ಕುಣಿತ' ಪ್ರಸ್ತುತಪಡಿಸಿದರು




'ಭೂಮಿಗೀತ' ರಂಗವೇದಿಕೆಯಲ್ಲಿ 'ಲೀಲಾವತಿ' ನಾಟಕ ಪ್ರದರ್ಶನಗೊಂಡಿತು.



ಡಾ.ಮೈಸೂರು ಗುರುರಾಜ್ ನೇತೃತ್ವದಲ್ಲಿ ನೀಲಗಾರರ ಮೇಳ ಮೇಳೈಸಿತು.



ಸಂಪತ್ ರಂಗಮಂದಿರದಲ್ಲಿ ಪ್ರದರ್ಶನಗೊಂಡ 'ಚಂದ್ರಹಾಸ' ನಾಟಕದ ದೃಶ್ಯ.



'ಇಡಕಿಣಿ ಕಥಾಯರಥಂ' ತಮಿಳು ನಾಟಕ ಕಲಾಮಂದಿರದಲ್ಲಿ ಪ್ರದರ್ಶನವಾಯಿತು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ನಾನೇನೂ ನಿಮ್ಮ ಹಿಂದೆ ಬೀಳಲಿಲ್ಲ... ನೀವೇ ನನ್ನ ಹಿಂದೆ ಬಿದ್ದು ಮದುವೆ ಆಗಿದ್ದು... ನೆನಪಿದೆ ತಾನೇ?

ಗಂಡ : ಹೌದೌದು... ನಿಜ... ಬೋನು ಯಾವತ್ತೂ ಇಲಿಯ ಹತ್ತ ಬರೋಲ್ಲ... ಇಲಿನೇ ಬಂದು ಬೋನಿಗೆ ಬೀಳೋದು...

ಮೈಸೂರು ಮಿತ್ರ

ಸೋಮವಾರ, 12 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಾ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

'ಕ್ಷಮೆ' ಮತ್ತು 'ಅಹಂ' ಇವೆರಡೂ ಚಿಕ್ಕ ಪದಗಳು. ಆದರೆ, 'ಕ್ಷಮೆ' ಅನ್ನುವುದು ಅನೇಕ ಸಂಬಂಧಗಳನ್ನು ಉಳಿಸಿದರೆ, 'ಅಹಂ' ಅನ್ನುವುದು ಅನೇಕ ಸಂಬಂಧಗಳನ್ನು ಹಾಳು ಮಾಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಟಿಗೆ ತಕ್ಕ ಕಜ್ಜಾಯ.

ನಿಮ್ಮ ಪತ್ರಗಳು

ಅಮಾನವೀಯತೆ ಮನಸ್ಥಿತಿ ಇರುವವರೆಗೂ ಜಾತಿ ವಿನಾಶವಾಗದು

ಮಾನ್ಯರೆ,

ಪ್ರಪಂಚದ ನಾನಾ ರಾಷ್ಟ್ರಗಳಲ್ಲಿ ಅಮಾನವೀಯತೆ ವಿಕೃತ ಘಟನೆಗಳು ನಡೆಯುವುದನ್ನು ನೋಡುತ್ತಿದ್ದೇವೆ. ಆದರೆ ಜಾತಿ ನಿಂದನೆ ಮಾಡಿ ವಿಕೃತವಾಗಿ ನಡೆದುಕೊಂಡು ಹಲ್ಲೆ ಮಾಡಿ ಅಮಾನವೀಯತೆಯಿಂದ ನಡೆದುಕೊಳ್ಳುವ ವಿಕೃತ ಮನಸಿನ ಮನಗಳು ನಮ್ಮ ಭಾರತ ದೇಶದಲ್ಲಿ ಮಾತ್ರ ಮೌಢ್ಯತೆಯ ಆಚರಣೆಗಳನ್ನು ಸಂಪ್ರದಾಯವಾಗಿ ರೂಢಿ ಮಾಡಿಕೊಂಡಿರುವ ಮನಸ್ಸುಗಳನ್ನು ಏನೆಂದು ಕರೆಯಬೇಕು.

ಚಾಮರಾಜನಗರದ ತಾಲೂಕಿನ ಹೆಗ್ಗೋಠಾರ ಗ್ರಾಮದಲ್ಲಿ ದಲಿತ ಮಹಿಳೆ ಟ್ಯಾಂಕ್‌ನಲ್ಲಿ ನೀರು ಕುಡಿದ ಕಾರಣಕ್ಕೆ ಟ್ಯಾಂಕ್ ನೀರನ್ನು ಖಾಲಿ ಮಾಡಿ ಗೋಮೂತ್ರ ದಿಂದ ಸ್ವಚ್ಛ ಮಾಡಿದ ಘಟನೆ ಮಾಸುವ ಮುನ್ನ ಬೈಕ್ ಓವರ್‌ಟೇಕ್ ಮಾಡಿದ ಎಂಬ ಕಾರಣಕ್ಕೆ ಯುವಕನನ್ನು ಮರಕ್ಕೆ ಕಟ್ಟಿ ನಾಲ್ಕು ಜನ ಹಲ್ಲೆ ಮಾಡಿದ ಘಟನೆ. ಈ ಘಟನೆಯಿಂದ ಮನ ನೊಂದು ಯುವಕ ಆತ್ಮಹತ್ಯೆ ಮಾಡಿಕೊಂಡಿರುವ ಅಮಾನವೀಯತೆ ಘಟನೆ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಬೇವಹಳ್ಳಿ ಗ್ರಾಮದಲ್ಲಿ ನಡೆದಿದೆ.

ಎಲ್ಲರೂ ಒಂದೇ ಎಲ್ಲರೂ ಸಮಾನರು ಎಂದು ಘಂಟಾಘೋಷವಾಗಿ ಬೊಬ್ಬೆ ಹೊಡೆಯುತ್ತಿರುವ ನಾಯಕರೇ ಹಲವಾರು ಸ್ಥಳಗಳಲ್ಲಿ ವಿಷ ಬೇರಿನಂತೆ ಜಾತಿ ಬೀಡು ಬಿಟ್ಟಿದೆ. ಭಕ್ತಿಯಿಂದ ಕೈ ಮುಗಿಯುವುದಕ್ಕೂ ದಿಗ್ಬಂಧನ, ದಲಿತ ಕೇರಿಗೆ ಉತ್ಸವ ಹೋಗಿದ್ದಕ್ಕೆ ಘರ್ಷಣೆಯಂತಹ ನೀಚ ಕೃತ್ಯಗಳು ದಿನ ನಿತ್ಯ ಒಂದಲ್ಲ ಒಂದು ಸ್ಥಳದಲ್ಲಿ ನಡೆಯುತ್ತಲೇ ಇರುತ್ತವೆ. ಜೀವ ಇಲ್ಲದೆ ಇರುವ ಸಮಸ್ಯೆಗಳ ಬಗ್ಗೆ ಹೋರಾಟ ಮಾಡುವ ಬದಲು ಅಮಾನವೀಯವಾಗಿ ಅಮಾನುಷವಾಗಿ ನಡೆಯುವ ಘಟನೆ ಸ್ಥಳಗಳಲ್ಲಿಗೆ ಹೋಗಿ ಹೋರಾಟ ಮಾಡುವ ಮೂಲಕ ನೊಂದ ಜೀವ ಇರುವ ಜೀವಿಗಳಿಗೆ ಆತ್ಮಸ್ಥೈರ್ಯವನ್ನು ತುಂಬುವ ಕೆಲಸವನ್ನು ಮಾಡುವಂತಾಗಲಿ.

ಜಾತಿ ವಿನಾಶ. ಅಸಮಾನತೆ ವಿರುದ್ಧ, ಮೇಲು ಕೀಳು ಶ್ರೇಣಿಕೃತಗಳ ವಿರುದ್ಧ ಹೋರಾಟ ಮಾಡಿದ ಮಹನೀಯರ ಹುಟ್ಟಿದ ನಾಡಲ್ಲಿ ಅವರನ್ನು ಪೂಜಿಸುವ ಕೆಲವರಿಂದ ಮಾಡುವ ಈ ಕೃತ್ಯಗಳು. ಮಹನೀಯರಿಗೆ ಮಾಡಿದ ಅಪಮಾನ. ದಲಿತರು ಎಂದರೆ ಯಾಕಿಷ್ಟು ಕ್ರೂರತ್ವದ ಮನಸ್ಥಿತಿ ನಡೆ ಪ್ರಕೃತಿ ಎಲ್ಲರನ್ನೂ ಸಮಾನವಾಗಿ ಸ್ವೀಕರಿಸಿ ಪ್ರಕೃತಿ ವಿರೋಧವಾಗಿ ಮಾಡುವ ಈ ನೀಚ ಕೃತ್ಯಗಳು ಹೇಸಿಗೆ ಹುಟ್ಟಿಸುತ್ತವೆ. ಎಲ್ಲ ದೇಶಗಳು ಭಾರತದತ್ತ ತಿರುಗಿ ನೋಡುತ್ತಿವೆ ಎನ್ನುವಾಗ ಈ ಕೃತ್ಯಗಳನ್ನು ನೋಡುವುದಿಲ್ಲವೆ! ಸರ್ವರಿಗೂ ಸಮಬಾಳು ಸರ್ವರೂ ಸಮಾನರು ಆಗುವುದು ಯಾವಾಗ!?

– ಕಂಗಾಣಿಸೋಮು ಪಿ.ಸಿ, ಕ್ಯಾತಮಾರನಹಳ್ಳಿ, ಮೈಸೂರು

ದೇಶದಲ್ಲಿ ಬಲಿಷ್ಠ ಪ್ರತಿಪಕ್ಷಗಳ ಅಗತ್ಯವಿದೆ

ಮಾನ್ಯರೆ,

ಪ್ರಜಾಪ್ರಭುತ್ವ ದೇಶದಲ್ಲಿ ಸದೃಢ ಆಡಳಿತ ಪಕ್ಷ ಎಷ್ಟು ಅಗತ್ಯವಾಗಿರುತ್ತದೆಯೊ, ಅದೇ ತರಹ ಸದೃಢ ಪ್ರತಿಪಕ್ಷ ಅವಶ್ಯಕವಾಗಿ ಬೇಕಾಗಿರುತ್ತದೆ. ಪ್ರಸ್ತುತ ನಮ್ಮ ದೇಶದಲ್ಲಿ ಬಲಿಷ್ಠ ಪ್ರತಿಪಕ್ಷಗಳ ಕೊರತೆಯಿದೆ. ಭಾರತೀಯ ಜನತಾ ಪಕ್ಷ ದೇಶದ ಕೆಲವು ರಾಜ್ಯಗಳನ್ನು ಹೊರತುಪಡಿಸಿ ಉಳಿದೆಲ್ಲಡೆ ತನ್ನ ಛಾಪು ಮೂಡಿಸುವಲ್ಲಿ ಯಶಸ್ವಿಯಾಗಿದೆ.

ದೇಶದ ಅತ್ಯಂತ ಹಳೆಯ ಪಕ್ಷವಾದ ಕಾಂಗ್ರೆಸ್ ಕೆಲವು ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದು, ಭವಿಷ್ಯದಲ್ಲಿ ಕಾಂಗ್ರೆಸ್ ಪಕ್ಷದ ಸ್ಥಾನವನ್ನು ಆಪ್ ಅದ್ಮಿ ಪಕ್ಷ ತುಂಬುವ ಸಾಧ್ಯತೆ ಹೆಚ್ಚಾಗಿದೆ. ಆಡಳಿತ ಪಕ್ಷದ ಕೆಲಸ ಕಾರ್ಯಗಳ ಮೇಲೆ ಕಾವಲುಗಾರನಂತೆ ಸದಾ ಎಚ್ಚರಿಕೆ ವಹಿಸಿ, ಆಡಳಿತ ಪಕ್ಷದ ತಪ್ಪುಗಳನ್ನು ತಿದ್ದುವುದು ಪ್ರತಿಪಕ್ಷಗಳ ಮುಖ್ಯ ಕಾರ್ಯವಾಗಿದ್ದು, ಪ್ರಸ್ತುತ ಭಾರತದಲ್ಲಿ ಕ್ರಿಯಾಶೀಲ ಪ್ರತಿಪಕ್ಷಗಳ ಕೊರತೆ ಎದ್ದು ಕಾಣುತ್ತಿದೆ.

ಕಾಂಗ್ರೆಸ್ ಪಕ್ಷವು ಕೇವಲ ವೈಯಕ್ತಿಕ ವಿಷಯಗಳನ್ನು ಕುರಿತು ಜನರ ಮುಂದೆ ಪ್ರಚಾರ ಮಾಡುವುದನ್ನು ಬಿಟ್ಟು ಕ್ರಿಯಾಶೀಲ ಪ್ರತಿಪಕ್ಷದಂತೆ ಕೇಂದ್ರ ಸರ್ಕಾರ ಯಾವ ಕ್ಷೇತ್ರದಲ್ಲಿ ವಿಫಲವಾಗಿದೆ ಎಂಬುದನ್ನು ಜನರ ಮುಂದೆ ಇಡುವಲ್ಲಿ ಸೋತಿದೆ.

ಇತ್ತೀಚೆಗೆ ನಡೆದ ಗುಜರಾತ್ ಚುನಾವಣೆಯಲ್ಲಿ ಅತ್ಯಂತ ಕಳಪೆ ಪ್ರದರ್ಶನ ಮಾಡಿದ ಕಾಂಗ್ರೆಸ್ ಪಕ್ಷ ಚುನಾವಣಾ ತಂತ್ರಗಾರಿಕೆಯಲ್ಲಿ ತುಂಬಾ ಹಿಂದೆ ಬಿದ್ದಿರುವುದನ್ನು ಗಮನಿಸಬಹುದಾಗಿದೆ. ಹಿಮಾಲಯ ಪ್ರದೇಶದ ಚುನಾವಣೆಯನ್ನು ಗೆದ್ದಿರುವುದು ಕಾಂಗ್ರೆಸ್ ಪಕ್ಷಕ್ಕೆ ಚೈತನ್ಯ ನೀಡುವ ಸಾಧ್ಯತೆಯಿದ್ದು, ವಿಷಯಗಳನ್ನು ಜನತೆಯ ಮುಂದೆ ತೆಗೆದುಕೊಂಡು ಚುನಾವಣಾ ಎದುರಿಸಿದರೆ ರಾಜಕೀಯ ಪಕ್ಷಗಳಿಗೆ ಅನುಕೂಲವಾಗಿರುತ್ತದೆ.

ರಾಷ್ಟ್ರೀಯತೆ, ನಿರುದ್ಯೋಗ, ಆರ್ಥಿಕತೆ, ಧರ್ಮ, ಮೂಲ ಸೌಕರ್ಯಗಳ ಅಭಿವೃದ್ಧಿ, ಕುಡಿಯುವ ನೀರಿನ ಯೋಜನೆ, ಪ್ರಜೆಗಳ ರಕ್ಷಣೆ, ಭಯೋತ್ಪಾನೆ ಇನ್ನೂ ಮುಂತಾದ ಜ್ವಲಂತ ಸಮಸ್ಯೆಗಳ ಬಗ್ಗೆ ಪ್ರತಿಯೊಂದು ರಾಜಕೀಯ ಪಕ್ಷಗಳಿಗೆ ಸ್ಪಷ್ಟವಾದ ನಿಲುವು ಹೊಂದಿರಬೇಕು.

ದೇಶದ ಅಭಿವೃದ್ಧಿಗೆ ಕ್ರಿಯಾಶೀಲ ಪ್ರತಿಪಕ್ಷದ ಅವಶ್ಯಕವಾಗಿದ್ದು, ಅಗ ಮಾತ್ರ ರಾಜಕೀಯ ಪಕ್ಷಗಳು ತಮ್ಮ ಜವಾಬ್ದಾರಿ ಸರಿಯಾಗಿ ನಿರ್ವಹಿಸುತ್ತವೆ.

– ರಾಸುಮ ಭಟ್, ಚಿಕ್ಕಮಗಳೂರು.

ದೆಹಲಿಯಲ್ಲಿ ಬಿಜೆಪಿಗೆ ಶಾಕ್ ನೀಡಿದ ಎಎಪಿ

ಮಾನ್ಯರೆ,

ಇತ್ತೀಚೆಗೆ ದೆಹಲಿ ಮಹಾನಗರ ಪಾಲಿಕೆಯ ಫಲಿತಾಂಶ ಪ್ರಕಟವಾಗಿದ್ದು, ಬಿಜೆಪಿಯನ್ನು ಸೋಲಿಸಿ 134 ಸ್ಥಾನಗಳನ್ನು ಗೆಲ್ಲುವ ಮೂಲಕ ಎಎಪಿ ಗೆಲುವಿನ ನಗೆಯನ್ನು ಬೀರಿ, ಬಿಜೆಪಿಯ 15 ವರ್ಷಗಳ ಆಡಳಿತಕ್ಕೆ ಬ್ರೇಕ್ ಹಾಕಿದೆ.


"ಡೆಲ್ಲಿಯಲ್ಲೇ ಉಳಿದವರು ಡೆಲ್ಲಿಯನ್ನೇ ಗೆಲ್ಲದೆ ಕಳೆದುಕೊಂಡಿದ್ದಾರೆ"....!!??, ಈ ಮುಖಭಂಗವನ್ನು ಬಿಜೆಪಿ ಅನುಭವಿಸಿದೆ, ಪದೇ ಪದೆ ಮೋದಿಗೆ ಎಎಪಿ ಭಯಂಕರ ಸೆಡ್ಡನ್ನು ಹೊಡೆಯುತ್ತಿದೆ, ಈಗಾಗಲೇ ದೆಹಲಿಯನ್ನು ಎರಡು ಬಾರಿ ವಿಧಾನಸಭೆಯಲ್ಲಿ ಗೆದ್ದು ಹಾಗೂ ಪಂಜಾಬ್‌ನಲ್ಲೂ ಆಡಳಿತವನ್ನು ನಡೆಸುತ್ತಿರುವ ಎಎಪಿ, ಇದೇ ಮೊದಲ ಬಾರಿ ದೆಹಲಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಕಮಾಲ್ ಮಾಡಿದೆ.

ಬಿಜೆಪಿಯ ಘಟಾನುಘಟಿ ರಾಷ್ಟ್ರ ನಾಯಕರಾದ ರಾಜನಾಥ್‌ಸಿಂಗ್, ಪಿಯುಷ್ ಗೋಯಲ್ ಇನ್ನಿತರರ ನಡುವೆ ಈ ಚುನಾವಣೆಯಲ್ಲಿ ಹಣಾಹಣಿ ಉಂಟಾಗಿದ್ದು, ಗೆಲ್ಲಲೇಬೇಕೆಂಬ ಅಬ್ಬರದ ಪ್ರಚಾರ ಮಾಡಿ, ಬಿಜೆಪಿಯ ಹಠಕ್ಕೆ ಎಎಪಿಯು ಮರ್ಮಾಘಾತವನ್ನು ನೀಡಿದೆ.

ಈಗಾಗಲೇ ದೆಹಲಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವ ಎಎಪಿ ದೆಹಲಿ ಜನರ ದಿಲ್ ಗೆದ್ದಿದೆ ಎಂದೇ ಹೇಳಬಹುದು, ಎಎಪಿಯು ಬಿಜೆಪಿಯ ಆಡಳಿತ ವಿರೋಧಿ ಅಲೆಯನ್ನು ಸಮರ್ಪಕವಾಗಿ ಬಳಸಿಕೊಂಡು, ದೆಹಲಿ ಪಾಲಿಕೆಯ ಗದ್ದುಗೆಯನ್ನು ಏರಿರುವುದು ರಣರೋಚಕವಾಗಿದೆ, ಈ ರೀತಿಯ ಎಎಪಿಯ ಒಂದೊಂದೇ ಗೆಲುವುಗಳು ಬಿಜೆಪಿಗೆ ಎಚ್ಚರಿಕೆ ಗಂಟೆಯಾಗಿದೆ, ಇವೆಲ್ಲವನ್ನು ಗಮನಿಸುತ್ತಿದ್ದರೆ ಮುಂದಿನ ದಿನಗಳಲ್ಲಿ ಎಎಪಿಯು ರಾಷ್ಟ್ರೀಯ ಪಕ್ಷವಾಗುತ್ತಾ ಎಂಬ ಚಿಂತೆ ಬಿಜೆಪಿಯನ್ನು ಕಾಡುತ್ತಿದೆ.

– ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು.

ವರಕವಿಗೆ ಅಕ್ಷರ ನಮನ



ಕನ್ನಡ ಸಾಹಿತ್ಯ ಎಂಬ ಸಾಗರದಲ್ಲಿ ಒಬ್ಬರಿಗಿಂತ ಒಬ್ಬರು ಭಿನ್ನವಾದ, ಒಬ್ಬರಿಗಿಂತ ಒಬ್ಬರು ವಿಭಿನ್ನವಾದ ಸಾಹಿತಿಗಳು ಇದ್ದಾರೆ. ಒಬ್ಬರನ್ನು ಮತ್ತೊಬ್ಬರೊಂದಿಗೆ ಹೋಲಿಕೆ ಮಾಡುವುದೇ ತಪ್ಪು ಎಂಬ ಭಾವನೆ ನನದು.ಕಥೆ, ಕವನ, ಕಾದಂಬರಿ ವಸ್ತು ಒಂದೇ ಆದರೂ ಭಾವ ಬೇರೆ ಬೇರೆ. ಕುವೆಂಪು ಅವರಂತೆ ಬೇಂದ್ರೆ ಅವರಾಗಲೀ, ಎಸ್.ಎಲ್.ಭೈರಪ್ಪ ಅವರಂತೆ ಯು.ಆರ್. ಅನಂತಮೂರ್ತಿಯವರಾಗಲೀ ಬರೆಯಲಿಲ್ಲ. ಅದರರ್ಥ ಅವರು ಶ್ರೇಷ್ಠ, ಇವರು ಕನಿಷ್ಠರೆಂದಲ್ಲ ಅವರವರ ಕ್ಷೇತ್ರದಲ್ಲಿ ಅವರವರೇ ಶ್ರೇಷ್ಠರು. ಅಂತಹ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಜಾನಪದ ಗರಡಿಯಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ ಬೆಂದರೆ ಬೇಂದ್ರೆಯಾಗುವೆ ಎನ್ನುವಷ್ಟರ ಮಟ್ಟಿಗೆ ಬಡತನದ ಬೇಗೆಯ ಬೆಂಕಿಯಲ್ಲಿ ಅರಳಿದ ಹೂ ಎಂದರೆ ಅದು ದತ್ತಾತ್ರೇಯ ರಾಮಚಂದ್ರ ಬೇಂದ್ರೆ.

ದ.ರಾ.ಬೇಂದ್ರೆ ಎಂದೇ ಕನ್ನಡ ಸಾಹಿತ್ಯದಲ್ಲಿ ಜನಪ್ರಿಯರಾದ ಕವಿಗಳು.ದಕ್ಷಿಣ ಕರ್ನಾಟಕದಲ್ಲಿ ಕುವೆಂಪು ಹೇಗೆ ಪ್ರಸಿದ್ಧರಾಗಿದ್ದರೋ ಹಾಗೆಯೇ ಉತ್ತರ ಕರ್ನಾಟಕದಲ್ಲಿ ದ.ರಾ.ಬೇಂದ್ರೆ ಅವರು ಪ್ರಸಿದ್ಧರಾಗಿದ್ದರು. ಮುಂದೆ ಇವರಿಬ್ಬರೂ ಇಡೀ ಕರ್ನಾಟಕದ ತುಂಬೆಲ್ಲಾ ಮನೆ ಮಾತಾಗುವಂತೆ ಬೆಳೆದು ಬಂದದ್ದು ಸಾಹಿತ್ಯ ಕ್ಷೇತ್ರದಲ್ಲಿ ಅಚ್ಚಳಿಯದ ಹೆಸರಾಗಿ ಉಳಿದದ್ದು ಇತಿಹಾಸವಾಗಿ ಉಳಿದಿದೆ.

ಬೇಂದ್ರೆ ಹೆಸರೇ ಹೇಳುವಂತೆ ಬಡತನದ ಬೇಗೆಯಲ್ಲಿ ಬೆಂದು 'ಬಡತನ ಸಿರಿತನ ಕಡೇ ತನಕ ಉಳಿದಾವೇನ್' ಎಂದು ಬಡತನವನ್ನು ಮೆಟ್ಟಿ ನಿಂತು' ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೇ ನೀಡುವೆನು ರಸಿಕ ನಿನಗೆ' ಎಂದು ಕಾವ್ಯ ರಚಿಸಿ ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗಿ ನಿಂತ ಹಿರಿಮೆ ದ.ರಾ.ಬೇಂದ್ರೆ ಅವರಿಗೆ ಸಲ್ಲುತ್ತದೆ. ಹುಟ್ಟಿದ ಒಂಬತ್ತು ಮಕ್ಕಳಲ್ಲಿ ಆರು ಮಕ್ಕಳನ್ನು ಕಳೆದುಕೊಂಡರೂ 'ನರಬಲಿ' ಎಂಬ ಕವನವನ್ನು ಬರೆದು ಆರು ತಿಂಗಳ ಸೆರೆವಾಸ ಅನುಭವಿಸಿ ಬಂದು ಮತ್ತೆ ಕೆಲಸವಿಲ್ಲದೇ ನಿರುದ್ಯೋಗವನ್ನು ಅನುಭವಿಸಿ, ಮತ್ತೆ ಉದ್ಯೋಗ ಪಡೆದು ಜೀವನ ಸಾಗಿಸಿದ ಮಹಾನ್ ಚೇತನ, ಬಡತನದಲ್ಲಿ ಬೆಂದು ಬೆಂದು ಬೇಂದ್ರೆಯಾಗಿ ನಿಂತ ಅವರ ವ್ಯಕ್ತಿತ್ವವನ್ನು ಆಗಿನ ಕಾಲದಲವರಷ್ಟೇ ಅಲ್ಲ ಈಗಿನ ಯುವಜನಾಂಗವು ಮೆಚ್ಚುವಂತದ್ದು.

ಬೇಂದ್ರೆ ಅವರ ಕವನಗಳು ಇತರರಿಗಿಂತ ಭಿನ್ನವಾದವುಗಳು ಅವುಗಳನ್ನು ಕವನದೊಳಗಿನಾಳದಲ್ಲಿ ಇಳಿದು ಅರ್ಥಮಾಡಿಕೊಂಡರಷ್ಟೇ ಅವು ಮತ್ತಷ್ಟು, ಮಗದಷ್ಟು ಆಪ್ತವಾಗುವಂತಹವು.ಎಲ್ಲೋ ಕೇಳಿ ತಿಳಿದ ಮಾಹಿತಿ – ಬೇಂದ್ರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದ ದಿನಗಳವು.ಯಾವುದೋ ಕಾರ್ಯಕ್ರಮದಲ್ಲಿ ಬೇಂದ್ರೆ ಅವರನ್ನು ಸನ್ಮಾನಿಸಿ ಮಾತನಾಡಲು ಹೇಳಿದಾಗ ಬೇಂದ್ರೆ ಅವರು ಒಂದು ಮಾತನ್ನು ಹೇಳಿದರಂತೆ.

ನನ್ನ 'ನಾಕುತಂತಿ' ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ಕೊಟ್ಟಿದ್ದಾರೆ. ಬಹುಶಃ ಕವನಗಳು ಯಾರಿಗೂ ಅರ್ಥವಾಗಿಲ್ಲ, ಅದಕ್ಕೆ ಬಹುಮಾನ ಕೊಟ್ಟಿರಬೇಕು ಎಂದು ನಗೆ ಚಟಾಕಿ ಹಾರಿಸಿದರಂತೆ. ಈ ಮಾತು ಅಕ್ಷರಶಃ ಸತ್ಯ.ಬೇಂದ್ರೆ ಅವರ ಕೆಲವೊಂದು ಕವನಗಳನ್ನು ಅರ್ಥಮಾಡಿಕೊಳ್ಳಲು ವಿಶೇಷವಾದ ಸಾಮರ್ಥ್ಯ ಬೇಕಾಗುತ್ತದೆ. ಈ ಮಾತು ಹೇಳಲು ಬಲವಾದ ಎರಡು ಕಾರಣಗಳಿವೆ. ಒಮ್ಮೆ ಬೇಂದ್ರೆ ಅವರು ಬರೆದ ಕವನವೇ ಅವರು ಓದುವಾಗ ಪಠ್ಯವಾಗಿತ್ತು. ಆಗ ಅವರ ಗುರುಗಳು ಪದ್ಯದ ಅರ್ಥವನ್ನು ಹೇಳುವಾಗ ಬೇಂದ್ರೆ ಅವರು ಎದ್ದು ನಿಂತು ನಾನು ಈ ಅರ್ಥದಲ್ಲಿ ಬರೆದಿಲ್ಲ ಎಂದರಂತೆ. ಆಗ ಅವರ ಗುರುಗಳು ನೀನು ಯಾವ ಅರ್ಥದಲ್ಲಿ ಬರೆದಿದ್ದೀಯಾ ಅನ್ನೋದು ಮುಖ್ಯವಲ್ಲ, ನಮಗೇನು ಅರ್ಥವಾಗಿರುವುದೋ ಆ ಅರ್ಥದಲ್ಲಿ ಹೇಳ್ತಾ ಇರೋದು ಅಂದರಂತೆ, ಬೇಂದ್ರೆ ಅವರೇ ಈ ಪ್ರಸಂಗವನ್ನು ನೆನಪಿಸಿಕೊಂಡಿದ್ದಾರೆ.

1) ಬೇಂದ್ರೆ ಅವರ ಪ್ರಸಿದ್ಧ ಕವನಗಳಲ್ಲಿ 'ನೀ ಹೀಂಗ ನೋಡಬ್ಯಾಡ' ನನ್ನ ಕವನವು ಒಂದು. ಈ ಕವನವನ್ನು ಓದಿದ ಕೆಲವರು ಇದನ್ನು ಪ್ರೇಮಗೀತೆ ಎಂದು ಗ್ರಹಿಸಿದ್ದಾರೆ. ಕೆಲವು ಸಿನಿಮಾಗಳಲ್ಲಿ ಇದೇ ಸಾಲುಗಳನ್ನು ಪ್ರೇಮಗೀತೆಯನ್ನಾಗಿಯೂ ಬಳಸಿದ್ದಾರೆ (ಅಂಬಿ – ಆದಿತ್ಯ ಅಭಿನಯದ ಚಲನಚಿತ್ರ, ಸಾಹಿತ್ಯ – ವಿ.ನಾಗೇಂದ್ರ ಪ್ರಸಾದ್ – ನಿರ್ದೇಶನ – ವಿ.ನಾಗೇಂದ್ರ ಪ್ರಸಾದ್) ಕವನದ ಪಲ್ಲವಿ ಹೀಗಿದೆ;

'ನೀ ಹೀಂಗ ನೋಡಬ್ಯಾಡ ನನ್ನ ನೀ ಹೀಂಗ ನೋಡಿದರ ನನ್ನ ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ....'

ವಾಸ್ತವದಲ್ಲಿ ಇದು ಒಂದು ಶೋಕಗೀತೆ. ತಮ್ಮ ಮಗುವಿಗೆ ಕಾಯಿಲೆ. ಔಷಧಿ ತರಲು ಬೇಂದ್ರೆ ಅವರ ಹತ್ತಿರ ಹಣವಿಲ್ಲ. ಮಡದಿಯ ಮಾತನ್ನು ಮೀರಲಾಗದೇ ಹೊರಹೋಗಿ ಮನೆಗೆ ಹಿಂದಿರುಗಿ ಬರುವಷ್ಟರಲ್ಲಿ ಮಗು ತೀರಿಕೊಂಡಿದೆ.ಬೇಂದ್ರೆ ಅವರ ಮಡದಿ ಕೋಪದ ಕಣ್ಣೋಟದಿಂದ ಬೇಂದ್ರೆ ಅವರನ್ನು ನೋಡಿದಾಗ ಆ ಕಣ್ಣೋಟವನ್ನು ಎದುರಿಸಲಾಗದೇ ಬರೆದ ಕವನ ಇದಾಗಿದೆ. ಕವನದ ಹಿನ್ನೆಲೆ ತಿಳಿಯದೇ ಕವನವನ್ನು ವಿಮರ್ಶೆ ಮಾಡಿದರೆ ಈ ತರ ಅಭಾಸ ಉಂಟಾಗುತ್ತದೆ.

ಮೇಲೆ ತಿಳಿಸಿದ ಕಾರಣಗಳೆರಡು ಬೇಂದ್ರೆ ಅವರ ಕವನಗಳ ಹಿನ್ನೆಲೆ ತಿಳಿಯದೇ ಅರ್ಥಮಾಡಿಕೊಳ್ಳಲು ಹೊರಟಾಗ ಆಗುವ ಅಭಾಸಗಳನ್ನು ತಿಳಿಸುತ್ತವೆ..

(ಬೇಂದ್ರೆ ಅವರು ಕವನಗಳನ್ನು ಬರೆಯುವುದರಲ್ಲಿ ಎತ್ತಿದ ಕೈ. ಅವರನ್ನು ಅಷ್ಟು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ಆ ಕವನಗಳನ್ನು ಒಮ್ಮೆ, ಮತ್ತೊಮ್ಮೆ, ಮಗದೊಮ್ಮೆ ಓದಿ ಗ್ರಹಿಸಿಕೊಂಡಾಗ ಮಾತ್ರ ಕವನ ಮತ್ತಷ್ಟು, ಮಗದಷ್ಟು ಆಪ್ತವಾಗಿ ಕಾಡುವಂತೆ ಇರುತ್ತದೆ.ಅಂತಹ ಒಂದು ಕವನವೇ

ನಾನು ಬಡವಿ ಆತ ಬಡವ
ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು

ಅದಕು ಇದಕು ಎದಕು – ಇಲ್ಲಿ ದಂಪತಿಗಳಿಗೆ ಪರಸ್ಪರ ಇರಬೇಕಾದ ಬಾಂಧವ್ಯ, ಪ್ರೀತಿ, ನಂಬಿಕೆಗಳನ್ನು ತಿಳಿಸಲಾಗಿದೆ. ನಾನು ಬಡವಿ, ಆತ ಕೂಡ ಬಡವ ಆದರೆ ನಮ್ಮ ಪ್ರೀತಿಗೆ ಬಡತನವಿಲ್ಲ. ಪ್ರೀತಿಯನ್ನೇ ನಮ್ಮ ಬದುಕನ್ನಾಗಿ ಮಾಡಿಕೊಂಡಿದ್ದೇವೆ. ಬಡತನ ನಮ್ಮ ಪ್ರೀತಿಗೆ ಅಡ್ಡಿಯಾಗಲಾರದು. ಆ ಬಡತನವನ್ನೇ ನಮ್ಮ ಪ್ರೀತಿಯನ್ನಾಗಿ ಬಳಸಿಕೊಂಡಿದ್ದೇವೆ ಎಂಬ ಉದಾತ್ತ ತತ್ವ ಇದರಲ್ಲಿದೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಇಂದಿನ ಆಧುನಿಕ ಯುಗದಲ್ಲಿ ಚಿನ್ನ ತಂದುಕೊಟ್ಟರಷ್ಟೇ ಪ್ರೀತಿ, ಮನೆ ಮಾಡಿದರಷ್ಟೇ ಗೌರವ, ಸೈಟ್ ಕೊಂಡರಷ್ಟೇ ಆದರ್ಶ ಸಂಸಾರ ಇಲ್ಲದಿದ್ರೆ ನಿಮ್ಮ ಪ್ರೀತಿ ಏನು ಮಹಾ ! ಎಂದು ಹಣದ, ಆಸ್ತಿಯ ಲೆಕ್ಕಾಚಾರದಲ್ಲಿ ಪ್ರೀತಿ, ಗೌರವ ತೋರಿಸುವವರಿಗೆ ಈ ಪದ್ಯಭಾಗ ನಿಜವಾದ ಪ್ರೀತಿಗೆ ಬಡತನ ಅಡ್ಡಿಯಾಗಲಾರದೆಂದು ಆ ಬಡತನವನ್ನೇ ಬಳಸಿಕೊಂಡು ನಾವು ಸುಖವಾಗಿರುವೆವು ಎಂದು ತಿಳಿಸುವ ಮೂಲಕ ಆದರ್ಶ ಸಂಸಾರದ ಚಿತ್ರಣವನ್ನು ಇಲ್ಲಿ ನೀಡಲಾಗಿದೆ. ಇಲ್ಲಿಯ ಅದಕು ಇದಕು ಎದಕು ಎಂಬ ಸಾಲುಗಳು ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಚರ್ಚೆಗೆ ಒಳಗಾಗಿದೆ. ಅದಕು ಇದಕು ಎದಕು ಅಂದರೆ ಏನು ಎಂಬ ಪ್ರಶ್ನೆಗಳಿಗೆ ತಮ್ಮದೇ ಆದ ವ್ಯಾಖ್ಯಾನಗಳನ್ನು ಅನೇಕರು ನೀಡಿದ್ದಾರೆ. ಒಟ್ಟಿನಲ್ಲಿ ಒಂದು ಸಾಲು ಹೆಚ್ಚು ಚರ್ಚೆಗೆ ಒಳಗಾಗಿರುವಂತದ್ದು ಸಾಧನೆಯೇ ಸರಿ ಎನ್ನಬಹುದು.

ಹತ್ತಿರಿರಲಿ ದೂರವಿರಲಿ
ಅವನೆ ರಂಗಸಾಲೆ
ಕಣ್ಣು ಕಟ್ಟುವಂಥ ಮೂರ್ತಿ

ಕಿವಿಗೆ ಮೆಚ್ಚಿನೋಲೆ – ಈ ಪದ್ಯಭಾಗದಲ್ಲಿ ನೆಚ್ಚಿನ ಗಂಡ ಅಥವಾ ಪ್ರಿಯಕರ ಹತ್ತಿರ ಇದ್ದರೂ, ದೂರವಿದ್ದರೂ ಅವರ ನಡುವೆ ಇರುವ ಪ್ರೀತಿಗೇನು ಪರಿಣಾಮ ಬೀರಲಾರದು.ಅವನೇ ಅವಳ ಪಾಲಿಗೆ ತನ್ನನ್ನು ಕುಣಿಸುವ ರಂಗಸಾಲೆ ಇದ್ದಂತೆ. ಅವನ ಕಣ್ಣು ಕಟ್ಟುವಂಥ ಮೂರ್ತಿ ಅಂದರೆ ಕಣ್ಣುಗಳಲ್ಲಿ ಬಂಧಿಸಿಡುವಷ್ಟು ಪ್ರೀತಿಯನ್ನು ತೋರಿಸುತ್ತಿದ್ದಾನೆ ಎಂದೋ ಅಥವಾ ಅವನ ಕಣ್ಣುಗಳಲ್ಲಿ ನನ್ನ ಮೇಲಿರುವ ಅವನಿಗಿರುವ ಅಗಾಧವಾದ ಪ್ರೀತಿ ಕಾಣುತ್ತಿದೆ ಎಂಬ ಉದಾತ್ತ ಕಲ್ಪನೆ ಇಲ್ಲಿದೆ.ಅವನು ಪ್ರೀತಿಯಿಂದ ನುಡಿಯುವ ಮಾತುಗಳೇ ನನ್ನ ಕಿವಿಗೆ ಮೆಚ್ಚಿನ ಓಲೆಯಂತೆ ಅಂದರೆ ಪ್ರೀತಿಯಿಂದ ಮೆಚ್ಚಿ ಮಾತನಾಡಿಸಿದರೆ ಖುಷಿ ಪಡಿಸಿದರೆ ಅದೇ ನನ್ನ ಪಾಲಿಗೆ ಮೆಚ್ಚಿನ ಓಲೆ ಇದ್ದ ಹಾಗೆ ಎಂದು ಹೇಳಿದ್ದಾರೆ. ಪ್ರಸ್ತುತ ದಿನದಲ್ಲಿ ಪ್ರೀತಿಯಿಂದ ಮಾತನಾಡುವವರೇ ಇಲ್ಲ. ಎಲ್ಲದಕ್ಕೂ ಲೆಕ್ಕಾಚಾರವೇ ಮುಖ್ಯವಾಗಿದೆ. ನಾನು ಅವರೊಂದಿಗೆ ಮಾತನಾಡಿದರೆ ಏನು ಉಪಯೋಗ ಎಂಬ ಲೆಕ್ಕಾಚಾರವೇ ಮನೆ ಮಾಡಿರುವ ಇಂದಿನ ದಿನಗಳಲ್ಲಿ ಲಕ್ಷ ಲಕ್ಷ ಹಣವಿದ್ದು ಪ್ರೀತಿ ತೋರದಿದ್ದರೆ? ಪ್ರೀತಿಯಿಂದ ಮಾತನಾಡಿಸುವ ಜೀವ ಇಲ್ಲದಿದ್ದರೆ? ಏನಿದ್ರರೇನು ಉಪಯೋಗ? ಉಪಯೋಗದ ದೃಷ್ಟಿಯಿಂದ ಮಾತನಾಡುವ ಜನರಿಗೆ ಚಾಟಿ ಬೀಸುವಂತಿದೆ ಈ ಸಾಲುಗಳು. ನಿಜವಾದ ಪ್ರೀತಿ ಮಾಡುವವರಿಗೆ ಪ್ರೀತಿಯಿಂದ ಮಾತನಾಡಿಸುವ ಜೀವ ಜೊತೆಗಿದ್ದರೆ ಸಾಕು ಅದೇ ಅವಳ ಪಾಲಿಗೆ ಚಿನ್ನದ, ಮೆಚ್ಚಿನ ಓಲೆ ಇದ್ದಂತೆ ಎಂದು ಹೇಳುವ ಮೂಲಕ ನಿಜವಾದ ಪ್ರೀತಿಯ ಮಹತ್ವವನ್ನು ಸಾರಿದ್ದಾರೆ.

ಚಳಿಗೆ ಬಿಸಿಲಿಗೊಂದೆ ಹದ
ಅವನ ಮೈಯ ಮುಟ್ಟೆ
ಅದೇ ಗಳಿಗೆ ಮೈಯು ತುಂಬಾ

ನನಗೆ ನವಿರು ಬಟ್ಟೆ – ಚಳಿಗಾಲವೇ ಆಗಲಿ, ಬೇಸಿಗೆ ಕಾಲವೇ ಆಗಲಿ ನನಗೆ ಪ್ರೀತಿ ಎಂಬ ನವಿರಾದ ಬಟ್ಟೆಯನ್ನು ಕೊಟ್ಟು ಬೆಚ್ಚಗಿನ ಹಿತವನ್ನು ನೀಡುವನೆಂಬ ಭಾವ ಇಲ್ಲಿದೆ. ಇಲ್ಲಿ ಬೇಸಿಗೆ ಕಾಲ, ಚಳಿಗಾಲ ಎನ್ನುವುದನ್ನು ಕಷ್ಟವೇ ಆಗಲೀ, ಸುಖವೇ ಬರಲಿ ಪ್ರೀತಿಯಿಂದ ನೋಡಿಕೊಳ್ಳುವನು ಕಷ್ಟಕ್ಕೆ ಕುಗ್ಗದೇ ಸುಖಕ್ಕೆ ಹಿಗ್ಗದೇ ಎರಡನ್ನೂ ಸಮಾನವಾಗಿ ಸಹಿಸಿಕೊಂಡು ಹೋಗುವಂತಹ ಜೀವನ ನಮ್ಮದೆಂಬ ಭಾವನೆ ಇಲ್ಲಿದೆ. ಇವತ್ತಿನ ದಿನದಲ್ಲಿ ಕಷ್ಟ ಬಂದರೆ ನೀನ್ಯಾರೋ ನಾನ್ಯಾರೋ ಎಂದು, ಸುಖದಲ್ಲಿ ಮಾತ್ರ ನಿನ್ನೊಂದಿಗೆ ನಾನಿರುವೆ ಎಂಬ ಲೆಕ್ಕಾಚಾರದಲ್ಲಿ ಬದುಕುವ ಇಂದಿನವರಿಗೆ ನಿಜವಾದ ಪ್ರೀತಿಯ ಸಂದೇಶವನ್ನು ಸಾರಿದಂತಿದೆ ಈ ಸಾಲುಗಳು.

ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳಬಂದಿ

ಕೆನ್ನೆ ತುಂಬಾ ಮುತ್ತು – ಇಲ್ಲಿ ತಾನು ಪ್ರೀತಿಸುವ ಗಂಡ / ಪ್ರಿಯಕರ ಕೊಟ್ಟ ವಸ್ತುವಾಗಲೀ, ಒಡವೆಯಾಗಲೀ ಅದು ಮತ್ಯಾರಿಗೂ ತಿಳಿಯದು ನನಗೆ ಅವನಿಗೆ ಮಾತ್ರ ಗೊತ್ತು ಎಂದು, ನನ್ನ ತೋಳುಗಳನ್ನು ಹಿಡಿದು ನಿನ್ನೊಂದಿಗೆ ನಾನಿರುವೆ ಎಂದು ನೀಡುವ ಭರವಸೆಯೇ ನನ್ನ ಪಾಲಿಗೆ ತೋಳಬಂದಿಯಂತೆ, ಆತ ಪ್ರೀತಿಯಿಂದ ಕೊಡುವ ಸಿಹಿ ಚುಂಬನವೇ ಸಾಕು ಮತ್ತೇನೂ ಬೇಡವೆಂದು ತಿಳಿಸುವ ಭಾವ ಇಲ್ಲಿದೆ. ಅಂದರೆ ನಿಜವಾದ ಪ್ರೀತಿಗೆ ಒಡವೆಯ ಆಸೆಯಾಗಲೀ ಆಭರಣಗಳ ಬಗೆಗೆ ವ್ಯಾಮೋಹವಾಗಲೀ ಇರುವುದಿಲ್ಲ. ಪ್ರೀತಿಯಿಂದ ನೋಡಿಕೊಳ್ಳುವನಿದ್ದರೆ ಪ್ರೀತಿಯಿಂದ ಮಾತನಾಡಿದರೆ ಸಾಕು ಒಡವೆಯ, ಆಭರಣಗಳ ಅವಶ್ಯಕತೆಗಳಿಲ್ಲ ಎಂದು ಇಲ್ಲಿ ತಿಳಿಸಲಾಗಿದೆ. ಹಣದ, ಆಭರಣಗಳ ಲೆಕ್ಕಾಚಾರದಿಂದ ಪ್ರೀತಿಯನ್ನು ಅಳೆಯಲಾಗದೆಂಬ ಉನ್ನತವಾದ ಆದರ್ಶವನ್ನು ಇಲ್ಲಿ ತಿಳಿಸಲಾಗಿದೆ.

ಕುಂದು–ಕೊರತೆ ತೋರಲಿಲ್ಲ
ಬೇಕು ಹೆಚ್ಚಿಗೇನು?
ಹೊಟ್ಟೆಗಿತ್ತ ಜೀವ ಫಲವ

ತುಟಿಗೆ ಹಾಲು ಜೇನು – ಕೊನೆಯ ಈ ಪದ್ಯಭಾಗದಲ್ಲಿ ಬಡತನ ಎಂಬುದು ನಮ್ಮ ಪ್ರೀತಿಗೇನು ಕೊರತೆ ಮಾಡಲಿಲ್ಲ ಎಂದು ಹೇಳುವ ಮೂಲಕ ನಿಜವಾದ ಪ್ರೀತಿಗೆ ಬಡತನದಲ್ಲಿರುವ ಕೊರತೆಯಾಗಲೀ, ಅಗತ್ಯ ವಸ್ತುಗಳಾಗಲೀ ಇಲ್ಲ ಬಡತನದಿಂದ ನೆಮ್ಮದಿ ಇಲ್ಲ ಎಂಬ ಬೇಸರಿಕೆಯಾಗಲೀ ಎಲ್ಲಿಯೂ ಕಾಣುವುದಿಲ್ಲ ಅಲ್ಲೆಲ್ಲಾ ನಿಷ್ಕಲ್ಮಶವಾದ ಪ್ರೀತಿ ಮಾತ್ರ ಕಾಣಿಸುತ್ತದೆ ಎನ್ನುವ ಮೂಲಕ ಪ್ರೀತಿಯಲ್ಲಿ ಕೊರತೆಯನ್ನು ಹುಡುಕಬೇಡಿ ಎಂದು ತಿಳಿಸಲಾಗಿದೆ. ಕೊನೆಯ ಎರಡು ಸಾಲುಗಳಲ್ಲಿ ಅವನ (ಗಂಡನ) ಪ್ರೀತಿಯ ಫಲ ಹೊಸ ಜೀವದ ಸೃಷ್ಟಿಗೆ ಕಾರಣವಾಗಿದೆ ಎಂದು ತುಟಿಗೆ ಹಾಲು ಜೇನು ಅಂದರೆ ಸಂತೋಷ, ಸಂಭ್ರಮ ವನ್ನು ನೀಡಿದೆ ಎಂದು ತಿಳಿಸಲಾಗಿದೆ. ಇಲ್ಲಿ ಬಡತನದಲ್ಲಿ ಕೊರತೆ ಕಾಣದೇ ಪ್ರೀತಿಯ ಪ್ರತಿಫಲವನ್ನು ಪಡೆದ ಸಾರ್ಥಕತೆಯನ್ನು ತಿಳಿಸುವ ಮೂಲಕ ಮುಗ್ಧ ಪ್ರೇಮದ ಸಾಕ್ಷಾತ್ಕಾರವನ್ನು ವೈಭವೀಕರಿಸಿ ತಿಳಿಸಲಾಗಿದೆ.

ಇಡೀ ಕವನ ಶ್ರೇಷ್ಠವಾದ ಪರಸ್ಪರ ಪ್ರೀತಿಸುವ ಗಂಡ – ಹೆಂಡತಿಯ / ಪ್ರೇಮಿಗಳ ನಡುವೆ ಇರಬೇಕಾದ ಅಥವಾ ಇರಬಹುದಾದ ಅನ್ಯೋನ್ಯತೆಯನ್ನು ತಿಳಿಸಿ ಮತ್ತಷ್ಟು ಆಳವಾಗಿ ಇಳಿದು ನೋಡಿದಾಗ ಮಗದಷ್ಟು ಸಂಗತಿಗಳನ್ನು ತಿಳಿಸುವ ಶೈಲಿಯಲ್ಲಿ ಬರೆಯಲಾಗಿದೆ ಎನ್ನಬಹುದು.

ಬೇಂದ್ರೆ ಅವರ ವಿಶೇಷತೆಗೆ ಸಾಕ್ಷಿ ಈ ಪ್ರಸಂಗಗಳು

i) ಕವಿಗೆ ಕವಿ ಮುನಿವಂ ಎಂಬ ನಾಣ್ಣುಡಿಯನ್ನು ನಿಜ ಮಾಡಿದಂತೆ ಒಂದು ಗಾಳಿ ಸುದ್ದಿ ಹಬ್ಬಿರುತ್ತದೆ. ಕುವೆಂಪು ಅವರಿಗೂ ಬೇಂದ್ರೆ ಅವರಿಗೂ ಪರಸ್ಪರ ಎಲ್ಲವೂ ಸರಿ ಇಲ್ಲವಂತೆ. ಕುವೆಂಪು ಕಂಡರೆ ಬೇಂದ್ರೆ ಅವರಿಗೆ, ಬೇಂದ್ರೆ ಕಂಡರೆ ಕುವೆಂಪು ಅವರಿಗೆ ಆಗೊಲ್ಲ ಎಂಬ ಮಾತು ಎಲ್ಲೆಡೆ ಚರ್ಚೆಯಲ್ಲಿದ್ದ ದಿನಗಳಂತೆ. ಹೀಗಿರುವಾಗ ಒಮ್ಮೆ ಕಾರ್ಯಕ್ರಮವೊಂದರಲ್ಲಿ ಕುವೆಂಪು, ಬೇಂದ್ರೆ ಒಂದೇ ವೇದಿಕೆಯಲ್ಲಿದ್ದರು. ಕಾರ್ಯಕ್ರಮ ಮುಗಿಯಿತು. ಪತ್ರಕರ್ತರೊಬ್ಬರು ಕುವೆಂಪು, ಬೇಂದ್ರೆ ಇಬ್ಬರನ್ನೂ ಒಟ್ಟಿಗೆ ನಿಲ್ಲಿ ಭಾವಚಿತ್ರ ತೆಗೆಯುವೆ ಎಂದರಂತೆ. ಇಬ್ಬರೂ ನಿಂತರು.ಆ ಪತ್ರಕರ್ತ ಇಬ್ಬರನ್ನೂ ಇನ್ನಷ್ಟು ಹತ್ತಿರ ನಿಲ್ಲಿ ಎಂದು ಕಿಚಾಯಿಸಿದನಂತೆ. ಆಗ ಬೇಂದ್ರೆ ಅವರು ನಾವು ಯಾವಾಗಲೂ ಹತ್ತಿರವೇ ಇರುವೆವು ನೀವೇ ನಮ್ಮಿಬ್ಬರ ನಡುವೆ ಭೇದಭಾವ ತಂದು ದೂರ ನಿಲ್ಲಿಸಿರುವಿರಿ ಎಂದು ಹೇಳಿ ಆ ಪತ್ರಕರ್ತನಿಗೆ ಪಾಠ ಕಲಿಸಿದರಂತೆ. ವಾಸ್ತವದಲ್ಲಿ ಬೇಂದ್ರೆ ಅವರಿಗಾಗಲೀ, ಕುವೆಂಪು ಅವರಿಗಾಗಲೀ ಯಾವುದೇ ಬಗೆಯ ವೈಮನಸ್ಸು ಇರಲಿಲ್ಲ.

ii) ಯಾರೋ ಒಬ್ಬರು ಬೇಂದ್ರೆ ಅವರನ್ನು ಕೇಳಿದ್ರಂತೆ ಅಲ್ಲಾ ಅಜ್ಜ ಇಷ್ಟು ಚೆನ್ನಾಗಿ ಪದ್ಯ ಹೇಗೆ ಬರೆಯುವಿರಿ ಎಂದು ಆಗ ಬೇಂದ್ರೆ ಕೊಟ್ಟ ಉತ್ತರ ಸೊಗಸಾಗಿದೆ. ನಾನು ಚೆನ್ನಾಗಿ ಪದ್ಯ ಬರೆಯೊದಿಲ್ಲೋ ತಮ್ಮ ಕನ್ನಡ ಭಾಷೆ ಅಷ್ಟು ಚೆನ್ನಾಗಿದೆ ಅದರಿಂದ ಪದ್ಯವೂ ಚೆನ್ನಾಗಿದೆ ಅಂದ್ರಂತೆ.

iii) ಒಮ್ಮೆ ಬೇಂದ್ರೆ ಅವರ ಚಪ್ಪಲಿ ಕಿತ್ತುಹೋಗಿತ್ತು. ಅಲ್ಲೇ ಇದ್ದ ಚಮ್ಮಾರನ ಅಂಗಡಿಯಲ್ಲಿ ಹೋಗಿ ಚಪ್ಪಲಿ ಹೊಲಿಯಲು ಕೊಟ್ಟಾಗ ಅಲ್ಲಿದ್ದ ವ್ಯಕ್ತಿ ಅಜ್ಜ ಬಹಳ ಬಿಸಿಲಿದೆ ನೆರಳಲ್ಲಿ ಕುಂದ್ರಿ ಅಂದನಂತೆ. ಬೇಂದ್ರೆ ಅವರು ನೆರಳಿನಲ್ಲಿ ಕುಳಿತು ಚಪ್ಪಲಿ ಹೊಲಿಯುತ್ತಿದ್ದಾತನಿಗೆ ಛತ್ರಿ ಹಿಡಿದ್ರಂತೆ. ಇದ್ಯಾಕ್ರೀ ಅಜ್ಜ ಅಂದಿದ್ದಕ್ಕೆ ಬಿಸಿಲು ನನಗೇ ಮಾತ್ರನಾ ಇರೋದು ನಿನಗಿಲ್ಲೇನು? ನಿನಗೂ ಬಿಸಿಲಿನ ಬೇಗೆ ತಟ್ಟಬಾರದಲ್ವ! ಅದಕ್ಕಾಗಿ ಕೊಡೆ ಹಿಡಿದೆ ಎಂದರಂತೆ ಈ ಪ್ರಸಂಗ ಬೇಂದ್ರೆ ಅವರ ಮಾನವೀಯತೆಯ, ಉನ್ನತವಾದ ಆದರ್ಶಕ್ಕೆ ಹಿಡಿದ ಕೈಕನ್ನಡಿ ಎನ್ನಬಹುದು. ಬೇಂದ್ರೆ ಅವರನ್ನು ಅವರ ಸಾಹಿತ್ಯವನ್ನು ಹಿಂದಿನ ಕಾಲದವರಾಗಲೀ, ಇಂದಿನ ಕಾಲದವರಾಗಲೀ ಮರೆಯಲು ಸಾಧ್ಯವಿಲ್ಲ.

ಶಬ್ದ ಗಾರುಡಿಗ, ವರಕವಿ, ಯುಗದ ಕವಿ, ಈ ಭುವನದ ಭಾಗ್ಯ, ನಮ್ಮಕನ್ನಡ ಸಾಹಿತ್ಯದ ಹೆಮ್ಮೆಯ ಕವಿ, ಜನಪದ ತತ್ವವನ್ನು ಸಾರಿದ ಮಹಾನ್ ಕವಿ.

● ರಾಘವೇಂದ್ರ ಸಿ.ಎಸ್.
ಮೊ. 9036389640

ಶ್ರೀಕಾಂತ ಮಹಿಳಾ ಪ.ಪೂ. ಕಾಲೇಜಿನಲ್ಲಿ ಹೃದಯಕ್ಕೆ ಸಂಬಂಧಿಸಿದ ವಿಷಯ ವಿಶೇಷ ಉಪನ್ಯಾಸ



ಮೈಸೂರು, ಡಿ.11–ನಗರದ ಅಗ್ರಹಾರದಲ್ಲಿರುವ ಶ್ರೀಕಾಂತ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಹೃದಯಕ್ಕೆ ಸಂಬಂಧಿಸಿದ ವಿಷಯ ಹಾಗೂ ಹದಿಹರೆಯದ ಸಮಸ್ಯೆಗಳ ಕುರಿತು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಉಪ ನಿರ್ದೇಶಕರಾದ, ಹೃದಯತಜ್ಞ ಡಾ.ಶ್ಯಾಂ ಪ್ರಸಾದ್ ಶೆಟ್ಟಿಯವರು ಜ್ಯೋತಿ ಬೆಳಗಿಸಿ, ಮಾತನಾಡುತ್ತಾ, ಇಂದು ಆಧುನಿಕ ಜೀವನ ಶೈಲಿಯಿಂದಾಗಿ ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳು ಹೆಚ್ಚು ಕಂಡುಬರುತ್ತಿದೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿರುವ ಹೃದಯದ ತೊಂದರೆಗಳು, ಹೃದಯಾಘಾತಗಳು ಭಯ ಉಂಟು ಮಾಡುತ್ತಿದೆ. ಮಧ್ಯ ವಯಸ್ಕರಲ್ಲಿಯೇ ಕಂಡು ಬರುತ್ತಿರುವ ಈ ಕಾಯಿಲೆಗೆ ಬಹಳ ಮುಖ್ಯ ಕಾರಣ ಜೀವನಶೈಲಿ ಮತ್ತು ಪದ್ಧತಿ. ಬಹಳ ಮುಖ್ಯವಾಗಿ ಯುವಕರಲ್ಲಿ ಕಂಡುಬರುತ್ತಿರುವ ದುರಭ್ಯಾಸಗಳೇ ಅವರನ್ನು ಅನಾರೋಗ್ಯಕ್ಕೆ ದೂಡುತ್ತಿದೆ. ಇದನ್ನು ಅರ್ಥಮಾಡಿಕೊಳ್ಳುವಲ್ಲಿ ಯುವಕರು ವಿಫಲರಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಹೃದಯ ಕಾಯಿಲೆಯು ಧೂಮಪಾನ, ಮದ್ಯಪಾನ, ಸಕ್ಕರೆ ಕಾಯಿಲೆ, ಅಧಿಕ ಬೊಜ್ಜು, ಒತ್ತಡದ ಜೀವನ, ವ್ಯಾಯಾಮ ಮಾಡದೇ ಇರುವುದು, ಆಹಾರ ಪದ್ಧತಿಯಿಂದಾಗಿ ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಯು ಹೆಚ್ಚಾಗುತ್ತಿದೆ. ಈ ಮೇಲಿನ ಎಲ್ಲ ಅಂಶಗಳನ್ನು ಯುವಕರು ಮನಸ್ಸು ಮಾಡಿದರೆ ಜೀವನ ಶೈಲಿಯನ್ನು ಹಾಗೂ ಆಹಾರ ಪದ್ಧತಿಯನ್ನು ಬದಲಾಯಿಸಿಕೊಂಡು, ಸಮತೋಲನದ ಆರೋಗ್ಯದೊಂದಿಗೆ ಜೀವನ ನಡೆಸಬಹುದೆಂದು ತಿಳಿಸಿದರು. ಪ್ರತಿ ಆರು ತಿಂಗಳಿಗೊಮ್ಮೆಯಾದರೂ ಯುವಕರು ತಮ್ಮ ಆರೋಗ್ಯವನ್ನು ತಪಾಸಣೆಗೆ ಒಳಪಡಿಸುವುದು ಬಹಳ ಮುಖ್ಯ ಎಂದು ಕಿವಿಮಾತು ಹೇಳಿದರು.

ಪಿಜ್ಜಾ, ಬರ್ಗರ್‌ಗಳ ಆಹಾರ ಖಾದ್ಯಗಳು ಇಂದಿನ ಮಕ್ಕಳಿಗೆ ಅತೀ ಪ್ರಿಯವಾಗಿರುವ ಆಹಾರ ಪದಾರ್ಥಗಳಾಗಿವೆ. ಜೊತೆಗೆ ಸಾಫ್ಟ್ ಡ್ರಿಂಕ್ಸ್ ಮತ್ತು ಎನರ್ಜಿ ಡ್ರಿಂಕ್ಸ್‌ಗೆ ಮೊರೆ ಹೋಗುವ ಮಕ್ಕಳಿಗೆ ಅದರಿಂದ ಅವರ ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮಗಳ ಅರಿವಿರುವುದಿಲ್ಲ. ಆದ್ದರಿಂದ ಇಂದಿನ ಯುವಕ–ಯುವತಿಯರು ಜಂಕ್ ಫುಡ್‌ಗಳಿಂದ ದೂರವಿದ್ದು, ನಾರಿನಾಂಶವಿರುವ ಸೊಪ್ಪು, ತರಕಾರಿ, ಹಣ್ಣು ಮೊಳಕೆ ಕಾಳುಗಳನ್ನು ಉಪಯೋಗಿಸಿದಾಗ ಆರೋಗ್ಯದಿಂದ ಸದೃಢರಾಗಲು ಸಹಕಾರಿ ಎಂದು ಅಭಿಪ್ರಾಯಿಸಿದರು.

ಕಾರ್ಯಕ್ರಮದಲ್ಲಿ ಅರವಳಿಕೆ ತಜ್ಞರಾದ ಡಾ.ಅರ್ಚನಾ ಮಾತನಾಡಿ, ಇಂದು ಶಾಲಾ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಇದರಿಂದ ಹೊರ ಬರಬೇಕಾದರೆ ನಿಯಮಿತ ಆಹಾರ, ಧ್ಯಾನ, ಯೋಗ ಅತ್ಯವಶ್ಯಕ. ಹದಿಹರೆಯದ ಹೆಣ್ಣು ಮಕ್ಕಳೂ ಕೂಡ ಆಸೆಗಳಿಗೆ ಒಳಗಾಗದೇ, ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಿದರು.

ವೇದಿಕೆಯಲ್ಲಿ ಅರವಳಿಕೆ ತಜ್ಞರಾದ ಡಾ.ಸಾರಿಕಾ ಎಂ.ಶೆಟ್ಟಿ, ಕಾಲೇಜಿನ ಪ್ರಾಂಶುಪಾಲರಾದ ವಿ.ಸುಬ್ಬಲಕ್ಷ್ಮಿ, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಸೋಮಶೇಖರ್, ದೈಹಿಕ ಶಿಕ್ಷಣ ವಿಭಾಗದ ಚಂದ್ರು, ಆಂಗ್ಲಭಾಷಾ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ರಮ್ಯ, ಉಪನ್ಯಾಸಕಿ ಶ್ವೇತಾ ಉಪಸ್ಥಿತರಿದ್ದರು.

ಇತಿಹಾಸ ಪುರುಷರ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ: ಕೆ.ಮರಿಗೌಡ



ಮೈಸೂರು, ಡಿ.11–ಮೈಸೂರಿನ ಕೆ.ಆರ್.ಮಿಲ್ ಕಾಲೋನಿಯಲ್ಲಿ 535ನೇ ಕನಕ ಜಯಂತಿ ಕಾರ್ಯಕ್ರಮ, ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ, ಐಪಿಎಸ್ ಶೇಖರ್‌ರವರಿಗೆ ಸನ್ಮಾನ ಸಮಾರಂಭ ನಡೆಯಿತು. ಸಮಾರಂಭ ಉದ್ಘಾಟಿಸಿ ಮಾತನಾಡಿದ ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಕನಕದಾಸರು ಶ್ರೇಷ್ಠದಾಸರು, ಸಂತರೂ ಆಗಿದ್ದು, ಜಗತ್ತಿನ ಮಾನವತಾವಾದಿ ಕೂಡ ಆಗಿದ್ದಾರೆ. ಅವರು 15ನೇ ಶತಮಾನದಲ್ಲಿದ್ದ ಅಸ್ಪೃಶ್ಯತೆ, ಅಂಧಕಾರ, ಸಂಪ್ರದಾಯ ಇವುಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಿ, ಮೇಲು–ಕೀಳು ಎಂಬ ಭಾವನೆಯನ್ನು ಹೋಗಲಾಡಿಸಲು ವಚನಗಳ ಮೂಲಕ, ಕವಿತೆಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ ಮಹಾನ್ ವ್ಯಕ್ತಿ ಎಂದರು.

ಇವರು ಬರೆದ ರಾಮಧ್ಯಾನಚರಿತೆ, ನಳಚರಿತ್ರೆ ಮೋಹನ ತರಂಗಿಣಿ, ಮತ್ತು ಹರಿಭಕ್ತಸಾರ ಇಂತಹ ನಾಟಕಗಳ ಮೂಲಕ ಜನರಲ್ಲಿ ಭಕ್ತಿ–ಪ್ರೀತಿ, ಆತ್ಮವಿಶ್ವಾಸ ಹಾಗೂ ಎಲ್ಲರೂ ಒಂದೇ ಎಂಬ ಭಾವನೆಯನ್ನು ತರುವಲ್ಲಿ ಯಶಸ್ವಿಯಾದ ಮಹಾ ಸಂತರು. ಅವರ ಸಂದೇಶಗಳು ಪ್ರಸ್ತುತದಲ್ಲೂ ಕೂಡ ಜೀವಂತವಾಗಿದ್ದು, ನಾವೆಲ್ಲರೂ ಅವರ ಆದರ್ಶ ಮತ್ತು ತತ್ವಗಳನ್ನು ಪಾಲಿಸಬೇಕು. ಯಾವುದೇ ಜಾತಿ ಯಾವುದೇ ವರ್ಗದವರು ಕೂಡ ನಾವೆಲ್ಲರೂ ಒಂದೇ ಎಂಬ ಭಾವನೆಗಳನ್ನು ತರುವಂತಹ ವ್ಯವಸ್ಥೆಯನ್ನು ಹೊಂದಬೇಕು. ಆಗ ಮಾತ್ರ ಇಂತಹ ಮಹಾನ್ ವ್ಯಕ್ತಿಯ ಜಯಂತಿಯನ್ನು ಆಚರಿಸಿದರೆ ಅದಕ್ಕೆ ಒಂದು ಸಾರ್ಥಕತೆ ಮತ್ತು ಫಲ ಬರುತ್ತದೆ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಕುರುಬ ಸಂಘದ ರಾಜ್ಯ ಅಧ್ಯಕ್ಷರಾದ ಸುಬ್ರಮಣ್ಯ, ಜಿಲ್ಲಾ ಪಂಚಾಯತಿ ಸದಸ್ಯ ಬಿರಿಹುಂಡಿ ಬಸವಣ್ಣ, ಐಪಿಎಸ್ ಅಧಿಕಾರಿ ಶೇಖರ್, ಕೆಆರ್ ಮಿಲ್ ಮಹಾದೇವ್ ಕುಮಾರಸ್ವಾಮಿ ಲಕ್ಷ್ಮಿ ಶಂಕರ್ ಕಿರಣ್ ಸಿದ್ದಲಿಂಗಪುರ ಸೋಮಣ್ಣ ದಿವಾಕರ್ ಚಾಮುಂಡೇಶ್ವರಿ ಬ್ಲಾಕ್ ಅಧ್ಯಕ್ಷರಾದ ಸತೀಶ್ ಕುಮಾರ್, ಸಂಜಯ್ ಕಿಶೋರ್ ವಿಶ್ವನಾಥ್ ಮುಂತಾದವರು ಉಪಸ್ಥಿತರಿದ್ದರ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಿಶ್ವ ಮಣ್ಣು ದಿನಾಚರಣೆ, ರಾಗಿ ಬೆಳೆಯ ಕ್ಷೇತ್ರೋತ್ಸವ



ಮೈಸೂರು, ಡಿ.11– ಮೈಸೂರಿನ ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿವಿ ವಿಸ್ತರಣಾ ಶಿಕ್ಷಣ ಘಟಕ, ಮೈಸೂರು ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ ಸಂಯುಕ್ತಾಶ್ರದಲ್ಲಿ ಹುಣಸೂರು ತಾಲೂಕಿನ ಸಿರಿಯೂರು ಗ್ರಾಮದಲ್ಲಿ ವಿಶ್ವ ಮಣ್ಣು ದಿನಾಚರಣೆ ಮತ್ತು ರಾಗಿ ಬೆಳೆಯ ಕ್ಷೇತ್ರೋತ್ಸವ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಬೆಂಗಳೂರಿನ ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ ಮಾತನಾಡಿ, ಎಕರೆಗೆ 14–15 ಕ್ವಿಂಟಾಲ್ ಇಳುವರಿ ನೀಡುವ ಹೊಸ ರಾಗಿ ತಳಿ ಎಂಎಲ್–322 ಅನ್ನು ರೈತರು ಹೆಚ್ಚಾಗಿ ಬೆಳೆಯಬೇಕು. ಇದರಿಂದ ರಾಗಿಯ ಉತ್ಪಾದನೆ ಹೆಚ್ಚಾಗುತ್ತದೆ ಎಂದು ಸಲಹೆ ನೀಡಿದರು.

ಮಣ್ಣಿನ ಆರೋಗ್ಯದ ಬಗ್ಗೆ ರೈತರು ಗಮನ ಹರಿಸಬೇಕು. ಅದರಲ್ಲೂ ಪೋಷಕಾಂಶ ಭದ್ರತೆ ಕಾಪಾಡುವುದು ಮುಖ್ಯವಾಗಿದೆ. ರೈತ ಸ್ನೇಹಿ ಸಂಶೋಧನೆ, ಸಾವಯವ ಕೃಷಿ, ಮಣ್ಣಿನ ಸವಕಳಿ, ಅರಣ್ಯ ಕೃಷಿ, ಬೆಳೆ ಪರಿವರ್ತನೆ ಹೀಗೆ ಹಲವಾರು ವಿಷಯಗಳನ್ನು ತಿಳಿಸಿದರಲ್ಲದೆ ಏಕಬೆಳೆ ಪದ್ಧತಿ ಮತ್ತು ಸಮಗ್ರ ಕೃಷಿ ಪದ್ಧತಿ ಅಳವಡಿಕೆಯಿಂದ ರೈತರು ತಮ್ಮ ಆದಾಯವನ್ನು ದ್ವಿಗುಣಗೊಳಿಸಬಹುದೆಂದು ತಿಳಿಸಿದರು.

ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣಗೌಡ, ಮುಳ್ಳೂರು ಗ್ರಾಪಂ ಅಧ್ಯಕ್ಷೆ ವಿಜಯಲಕ್ಷ್ಮಿ ಮಹದೇವರಾಜ್, ಸದಸ್ಯ ತಾರಾ ಬಸವರಾಜು, ಎಸ್.ಬಿ.ಕೃಷ್ಣೇಗೌಡ, ತಾಲ್ಲೂಕು ಸಹ ಸಂಶೋಧನಾ ನಿರ್ದೇಶಕರ ಡಾ.ಎನ್.ಶಿವಕುಮಾರ್, ವಿಶೇಷ ಅಧಿಕಾರಿ ಡಾ.ಮಧುಸೂದನ್, ಡಾ.ವೈ.ಎನ್.ಶಿವಲಿಂಗಯ್ಯ, ಡಾ.ಸಿದ್ದಯ್ಯ, ಡಾ.ಜಿ.ಹೆಚ್.ಯೋಗೇಶ್ ಮತ್ತಿತರರಿದ್ದರು.

ಜೆಎಸ್‌ಎಸ್ ಎಫ್‌ಎಂ ರೇಡಿಯೋ ಕೇಂದ್ರದಲ್ಲಿ ಡಿ.14ರಂದು ಮೇಯರ್ ಫೋನ್ ಇನ್

ಮೈಸೂರು, ಡಿ.11(ಆರ್‌ಕೆಬಿ)– ಮೈಸೂರು ನಗರಪಾಲಿಕೆಯ ಸೇವೆಗಳು ಮತ್ತು ಅಭಿವೃದ್ಧಿ ವಿಚಾರಗಳಿಗೆ ಸಂಬಂಧಿಸಿದಂತೆ ಮೈಸೂರು ಜೆಎಸ್‌ಎಸ್ 91.2 ಎಫ್‌ಎಂ ರೇಡಿಯೋ ಕೇಂದ್ರದಲ್ಲಿ ಡಿ.14ರಂದು ಬೆಳಗ್ಗೆ 11.30ರಿಂದ ಮಧ್ಯಾಹ್ನ 12.30ರವರೆಗೆ ಮೇಯರ್ ಶಿವಕುಮಾರ್ ಅವರೊಂದಿಗೆ ನೇರ ಸಂದರ್ಶನ ಫೋನ್ ಕಾರ್ಯಕ್ರಮ ಆಯೋಜಿಸಲಾಗಿದೆ.



ಮೈಸೂರಿನ ಜನತೆ ತಮ್ಮ ಯಾವುದೇ ಕುಂದು ಕೊರತೆ, ಇನ್ನಿತರೆ ವಿಚಾರಗಳ ಬಗ್ಗೆ ದೂರವಾಣಿ ಸಂಖ್ಯೆ 8296725912 ಅಥವಾ 0821–2546563 ಸಂಖ್ಯೆಗೆ ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.



ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಧರ್ಮಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್ ಅವರ ಹುಟ್ಟು ಹಬ್ಬವನ್ನು ಅವರ ಭೀಮಸದನ ನಿವಾಸದಲ್ಲಿ ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿಗಳ ಬಳಗದಿಂದ ಆಚರಿಸಲಾಯಿತು. ಈ ವೇಳೆ ಶಾಸಕ ಬಿ. ಹರ್ಷವರ್ಧನ್, ಮುಖಂಡ ಪಿ.ನಂದ ಕುಮಾರ್, ಪ್ರಕಾಶಕರಾದ ಭರತ್ ರಾಮಸ್ವಾಮಿ, ಡಿ. ವೆಂಕಟರಾಜು, ಹಿರಿಯ ಆಪ್ತ ಸಹಾಯಕರಾದ ಎಚ್.ಜಿ ರಮೇಶ್, ಸಿ ಎ ಗಿರೀಶ್, ವಕೀಲೆ ಪ್ರೇಮಕುಮಾರಿ, ಪ್ರಜ್ವಲ್ ಶಶಿ, ಸತೀಶ್ ಮತ್ತಿತರರು ಉಪಸ್ಥಿತರಿದ್ದರು.



ಡಾಗ್ಸ್ ಪ್ರೊಟೆಕ್ಷನ್ ಟ್ರಸ್ಟ್ ಮತ್ತು ನಗರ ಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಸಹಭಾಗಿತ್ವದಲ್ಲಿ ಭಾನುವಾರ ಹೆಬ್ಬಾಳು ಬಸವನಗುಡಿ ದೇವಸ್ಥಾನದ ಆವರಣದಲ್ಲಿ ಬೀದಿ ನಾಯಿಗಳು ಮತ್ತು ಸಾಕು ನಾಯಿಗಳಿಗೆ ಉಚಿತವಾಗಿ ಆಂಟಿ ರೇಬೀಸ್ ಲಸಿಕಾ ಶಿಬಿರವನ್ನು ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಟ್ರಸ್ಟ್‌ನ ಪದಾಧಿಕಾರಿಗಳೊಂದಿಗೆ ಪೈಲ್ವಾನ್ ಶ್ರೀನಿವಾಸ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ರವೀಶ್ ಶ್ರೀನಿವಾಸ್, ಯುವ ಮುಖಂಡ ದರ್ಶನ್ ಉಪಸ್ಥಿತರಿದ್ದರು.

ಹೃದಯಾಘಾತದಿಂದ ರಾಜ್ಯಪಾಲ ಗೆಹ್ಲೋಟ್ ಕಾರು ಚಾಲಕ ಸಾವು

ಸ್ವಲ್ಪದರಲ್ಲೇ ತಪ್ಪಿದ ಅನಾಹುತ

ಬೆಂಗಳೂರು, ಡಿ.11– ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರ ಕಾರು ಚಾಲಕ ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ದೇವನಹಳ್ಳಿ ಬಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶನಿವಾರ ತಡರಾತ್ರಿ ನಡೆದಿದೆ.



ರವಿಕುಮಾರ್ ಎಸ್.ಕಾಳೆ ಮೃತಪಟ್ಟ ದುರ್ದೈವಿ. ಮಧ್ಯರಾತ್ರಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಾಜ್ಯಪಾಲರನ್ನು ಕರೆದೊಯ್ಯಲು ಚಾಲಕ ರವಿಕುಮಾರ್ ಬಂದಿದ್ದರು.

ರಾಜ್ಯಪಾಲರನ್ನು ಕಾರಿನಲ್ಲಿ ಕರೆದೊಯ್ಯಲು ಸಿದ್ದತೆ ಮಾಡಿಕೊಳ್ಳುವ ವೇಳೆ ರವಿಕುಮಾರ್ ಅವರಿಗೆ ಎದೆ ನೋವು ಕಾಣಿಸಿಕೊಂಡಿದೆ. ಈ ವೇಳೆ ಹೃದಯಾಘಾತವೂ ಆಗಿದೆ. ಕೂಡಲೇ ಅವರನ್ನು ಆ್ಯಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯುವ ಪ್ರಯತ್ನಗಳು ನಡೆಸಲಾಗಿತ್ತು. ಆದರೆ, ಅಷ್ಟರಲ್ಲಾಗಲೇ ಕೊನೆಯುಸಿರೆಳೆದಿದ್ದಾರೆ. ಘಟನೆಯ ಬಳಿಕ ರಾಜ್ಯಪಾಲರು ಹೆಚ್ಚುವರಿ ವಾಹನ ಬಳಸಿಕೊಂಡು ರಾಜ್ಯಭವನಕ್ಕೆ ತೆರಳಿದರು. ರಾಜ್ಯಪಾಲರು ನಿಗದಿತ ಸಮಯಕ್ಕಿಂತ ಬೇಗ ಆಗಮಿಸಿದ್ದರೆ, ರವಿಕುಮಾರ್ ಅವರೇ ಕಾರು ಏರಿದ್ದರೆ ದೊಡ್ಡ ಅನಾಹುತವಾಗುತ್ತಿತ್ತು.

ಸಿದ್ದರಾಮಯ್ಯರ ಸ್ಪರ್ಧಿಸುವ ಕ್ಷೇತ್ರದ ಬಗ್ಗೆ ಪ್ರತಾಪ್ ಸಿಂಹಗೇಕೆ ಚಿಂತೆ?

ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ

ಮೈಸೂರು, ಡಿ.11– ಸಿದ್ದರಾಮಯ್ಯ ಅವರು ಸ್ಪರ್ಧಿಸುವ ಕ್ಷೇತ್ರದ ಬಗ್ಗೆ ಸಂಸದ ಪ್ರತಾಪ್ ಸಿಂಹ ಅವರಿಗೇಕೆ ಚಿಂತೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘ ಪ್ರಶ್ನಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಸಂಸದ ಪ್ರತಾಪ್ ಸಿಂಹ ಅವರೇ ನಿಮಗೇಕೆ ಸಿದ್ದರಾಮಯ್ಯ ಅವರ ಕ್ಷೇತ್ರದ ಬಗ್ಗೆ ಚಿಂತೆ. ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ಎಲ್ಲಿ ಚುನಾವಣೆಗೆ ನಿಲ್ಲುತ್ತೇನೆ ಅಂದರೂ ಜನ ಸ್ವಾಗತಿಸುತ್ತಿದ್ದಾರೆ. ನಿಮಗೆ ಹಾಗೆ ಯಾರಾದರೂ ಕರೆಯುತ್ತಿದ್ದಾರೆಯೇ? ಸಿದ್ದರಾಮಯ್ಯ ಅವರು ಸ್ಪರ್ಧಿಸುವ ಕ್ಷೇತ್ರದಲ್ಲಿ ನಿಮಗೆ ವೋಟು ಸಹ ಇಲ್ಲ, ಭ್ರಮೆಯಲ್ಲಿ ಏಕೆ ಮಾತನಾಡುತ್ತೀರಿ? ಮುಂದಿನ ಚುನಾವಣೆಯಲ್ಲಿ ನಿಮಗೆ ಪಕ್ಷದಿಂದ ಟಿಕೆಟ್ ಸಿಗುತ್ತದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ ಎಂದು ತಿರುಗೇಟು ನೀಡಿದ್ದಾರೆ. ಸಿಎಂ ಬೊಮ್ಮಾಯಿ ಅವರು ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸಿಯಾಗಿದೆ ಎಂದು ಪೊಳ್ಳು ಭರವಸೆ ನೀಡುತ್ತಿದ್ದಾರೆ. ಕೇಂದ್ರ ಸರ್ಕಾರ ಇನ್ನೂ ಇದಕ್ಕೆ ಸಮ್ಮತಿ ಸೂಚಿಸಿಲ್ಲ. ಸಂಸದರು ತಮಗೆ ನಿಜವಾಗಿ ಸಾಮರ್ಥ್ಯವಿದ್ದರೆ ಸದನದಲ್ಲಿ ಮೀಸಲಾತಿ ಬಗ್ಗೆ ದನಿ ಎತ್ತಲಿ ಎಂದು ಕುಟುಕಿದ್ದಾರೆ.



ಎಸ್.ಸಿ.ಯಲ್ಲಿ 101 ಜಾತಿಗಳಿವೆ, ಎಸ್‌ಟಿ ಸಮುದಾಯದಲ್ಲಿ 52 ವಿವಿಧ ಪಂಗಡಗಳಿದ್ದಾವೆ. ಇವರೆಲ್ಲರನ್ನೂ ಒಂದಡೆ ತರಬೇಕು, ಒಡೆದು ಆಳುವ ಪ್ರಯತ್ನ ಆಗಬಾರದು. ಮೀಸಲಾತಿ ಹೆಚ್ಚಳ ನಾವೇ ಮಾಡಿದ್ದೇವೆ ಎಂದು ಬೊಮ್ಮಾಯಿ ಅವರು ಹೇಳಿಕೊಂಡು ತಿರುಗುತ್ತಿದ್ದಾರೆ. ಆದರೆ ಇದಕ್ಕೆ ನಾಂದಿ ಹಾಡಿದ್ದು ಸಿದ್ದರಾಮಯ್ಯ ಅವರ ನೇತೃತ್ವ ಸರ್ಕಾರ. ಎಲ್ಲಿಯವರೆಗೆ ಅಸ್ಪೃಶ್ಯತೆ ಇರುತ್ತದೆಯೋ ಅಲ್ಲಿಯ ತನಕ ಮೀಸಲಾತಿ ಇರಲೇಬೇಕು ಎಂದು ಸಿದ್ದರಾಮಯ್ಯ ಅವರ ಕಾಲದಲ್ಲೇ ಶೇ.24.1 ಅನುದಾನ ಮೀಸಲಿಡಬೇಕು ಎಂದು ತೀರ್ಮಾನ ಮಾಡಲಾಗಿತ್ತು. ಅದಕ್ಕೆ 30 ಸಾವಿರ ಕೋಟಿ ಹಣವನ್ನೂ ಮೀಸಲಿಡಲಾಗಿತ್ತು. ಆದರೆ ಬಿಜೆಪಿ ಸರ್ಕಾರ ಆ ಕಾನೂನನ್ನೇ ಗಾಳಿಗೆ ತೂರಿದೆ ಎಂದಿದ್ದಾರೆ.

ಮೈಸೂರು ಸಂಸ್ಥಾನದಲ್ಲಿ ಮಂಡ್ಯ ಜಿಲ್ಲೆ ಅಭಿವೃದ್ಧಿಯಾಗಿತ್ತು

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ್



ಮದ್ದೂರು, ಡಿ.11– ಮೈಸೂರು ಸಂಸ್ಥಾನದಲ್ಲಿ ಮಂಡ್ಯ ಜಿಲ್ಲೆ ಸಾಕಷ್ಟು ಅಭಿವೃದ್ಧಿ ಹೊಂದುವ ಮೂಲಕ ರಾಜ್ಯಕ್ಕೆ ಮಾದರಿಯಾಗಿತ್ತು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವಥ್ ನಾರಾಯಣ್ ತಿಳಿಸಿದರು.

ಪಟ್ಟಣದ ಶಿವಪುರದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ನಾಡಪ್ರಭು ಕೆಂಪೇಗೌಡ ಅಭಿಮಾನಿ ಬಳಗ, ತಾಲೂಕು ಬಿಜೆಪಿ ಘಟಕ ಮತ್ತು ಬಿಜೆಪಿ ಮುಖಂಡ ಎಸ್.ಪಿ.ಸ್ವಾಮಿ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ಜನಾಭಿನಂದನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಂಡ್ಯ ಜಿಲ್ಲೆ ಅಂದರೆ ಇಂಡಿಯಾ ಎನ್ನುವುದನ್ನು ಸಾಬೀತು ಪಡಿಸಿದ್ದು, ಸದೃಢವಾಗಿ ಬೆಳೆದಿರುವ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಕಾರ್ಯಯೋಜನೆ ರೂಪಿಸಿ ಮತ್ತಷ್ಟು ಅಭಿವೃದ್ಧಿ ಕೈಗೊಳ್ಳಲು ಸರ್ಕಾರ ಮುಂದಾಗಿದೆ ಎಂದರು.

ನಾಡಪ್ರಭು ಕೆಂಪೇಗೌಡರ ಕಾರ್ಯಯೋಜನೆಗಳು ಇಂದಿಗೂ ಪ್ರಸ್ತುತ. ಅವರನ್ನು ಪ್ರತಿನಿತ್ಯ ಸ್ಮರಿಸಬೇಕು. ಇಡೀ ವಿಶ್ವಕ್ಕೆ ಸಂದೇಶ ಸಾರಿದ ಕೆಂಪೇಗೌಡರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವ ಕಾರ್ಯಕ್ಕೆ ನಮ್ಮ ಸರ್ಕಾರ ಮುಂದಾಗಿದೆ ಎಂದರು.

ಸರ್ದಾರ್ ವಲ್ಲಭ ಬಾಯಿ ಪಟೇಲ್, ಡಾ.ಬಿ.ಆರ್.ಅಂಬೇಡ್ಕರ್, ಮಹಾತ್ಮ ಗಾಂಧಿಜಿ ಅವರ ಪುತ್ಥಳಿ ನಿರ್ಮಿಸಿದ ಶಿಲ್ಪಿ ರಾಮ್ ಸುತಾರ್ ಅವರಿಂದ 108 ಅಡಿಯಲ್ಲಿ ಕೆಂಪೇಗೌಡರ ಕಂಚಿನ ಪ್ರತಿಮೆಯನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿರ್ಮಿಸಿ ವಿಶ್ವ ದಾಖಲೆ ಮೆರೆದಿದ್ದು ಇದು ಯಾವುದೇ ದೇಶದಲ್ಲಿಲ್ಲ ಎಂದರು.

ರಾಜ್ಯಾದ್ಯಂತ ಮಣ್ಣು (ಮೃತ್ತಿಕೆ) ಸಂಗ್ರಹಕ್ಕೆ 16 ರಥ ಯಾತ್ರೆಗಳಿಂದ 22 ಸಾವಿರ ಕಿಮೀ ಸಂಚರಿಸಿ 3.60 ಕೋಟಿ ಜನರ ಸಮ್ಮುಖದಲ್ಲಿ ಕೆಂಪೇಗೌಡರ ಪ್ರಗತಿಯ ಸಂಕೇತ ಬೃಹತ್ ಪ್ರತಿಮೆಯನ್ನು ಪ್ರಧಾನಿ ಮೋದಿ ಅನಾವರಣಗೊಳಿಸಿರುವುದು ನಮ್ಮ ಸಮುದಾಯದ ಸೌಭಾಗ್ಯವೆಂದರು.

ಶೈಕ್ಷಣಿಕ, ಸಾಮಾಜಿಕ, ಕೈಗಾರಿಕಾ ಹಾಗೂ ಎಲ್ಲ ಕ್ಷೇತ್ರಗಳ ಅಭಿವೃದ್ಧಿ ಹೊಂದುವ ಕಂಬ ಸದುದ್ದೇಶದಿಂದ ಹಲವಾರು ಯೋಜನೆಗಳನ್ನು ಕೈಗೊಂಡಿದ್ದು, ಜಿಲ್ಲೆ ಹಲವಾರು ಸವಾಲು ಮತ್ತು ಸಮಸ್ಯೆಗಳನ್ನು ಎದುರಿಸುತ್ತಿದ್ದು ಭರವಸೆಯ ಇಚ್ಛಾಶಕ್ತಿ, ಬದ್ಧತೆಗಳಿಂದ ಮಂಡ್ಯ ಜಿಲ್ಲೆ ಅಭಿವೃದ್ಧಿಗೆ ಪಣತೊಟ್ಟಿರುವುದಾಗಿ ತಿಳಿಸಿದರು.

ಬಿಜೆಪಿ ಮುಖಂಡ ಎಸ್.ಪಿ.ಸ್ವಾಮಿ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಕೊಪ್ಪ ವೃತ್ತದಿಂದ ಸಚಿವರನ್ನು ತೆರೆದ ವಾಹನದ ಮೂಲಕ ಸಾಂಸ್ಕೃತಿಕ ಕಲಾ ತಂಡಗಳೊಟ್ಟಿಗೆ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು.

ಪುಷ್ಪಾರ್ಚನೆ: ನಾಡಪ್ರಭು ಕೆಂಪೇಗೌಡರ ಪುತ್ಥಳಿಗೆ ಸಚಿವ ಅಶ್ವಥ್ ನಾರಾಯಣ್ ಸೇರಿದಂತೆ ಗಣ್ಯರು ಪುಷ್ಪನಮನ ಸಲ್ಲಿಸಿದರು.

ಉಪನ್ಯಾಸ: ನಿವೃತ್ತ ಪ್ರಾಂಶುಪಾಲ ಸಿ.ರಾಜು ಹಾಗೂ ಟಿ.ರಾಜಣ್ಣ ಕೆಂಪೇಗೌಡರ ಕುರಿತು ವಿಶೇಷ ಉಪನ್ಯಾಸ ನೀಡಿದರು. ಬಳಿಕ ಕೆಂಪೇಗೌಡ ಪುತ್ಥಳಿ ನಿರ್ಮಾಣಕ್ಕೆ ಹಗಲಿರುಳು ಶ್ರಮಿಸಿದ ಸಚಿವ ಅಶ್ವಥ್ ನಾರಾಯಣ್‌ರನ್ನು ಒಕ್ಕಲಿಗರ ಸಂಘದ ಪದಾಧಿಕಾರಿಗಳು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಎಸ್.ಪಿ.ಮಹದೇವು, ಜಿಪಂ ಮಾಜಿ ಸದಸ್ಯರಾದ ಎಸ್.ಎಲ್.ಕೃಷ್ಣೇಗೌಡ, ಬೋರಯ್ಯ ಗ್ರಾಪಂ ಅಧ್ಯಕ್ಷರಾದ ಅನಿಲ್ ಕುಮಾರ್, ನಂದೀಶ್ ಗೌಡ, ಶಂಕರೇಗೌಡ, ಮಹೇಶ್, ಮುಖಂಡರಾದ ಅಶೋಕ್ ಜಯರಾಂ, ಡಾ.ಇಂದ್ರೇಶ್, ಹನುಮಂತೇಗೌಡ, ಮನುಕುಮಾರ್, ರಘು, ತಾಪಂ. ಮಾಜಿ ಸದಸ್ಯ ಚಿಕ್ಕಮರಿಯಪ್ಪ, ಶಿವರಾಮು ಇತರರಿದ್ದರು.

ಅವಧಿಗೂ ಮೊದಲೇ ಚುನಾವಣೆ ನಡೆಯಲ್ಲ

ಮದ್ದೂರು, ಡಿ.11– ರಾಜ್ಯದಲ್ಲಿ ಅವಧಿಗೂ ಮೊದಲೇ ಚುನಾವಣೆ ನಡೆಯುವುದಿಲ್ಲ. ಅವಧಿಗೆ ಸರಿಯಾಗಿ ಚುನಾವಣೆ ನಡೆಯಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವಥ್ ನಾರಾಯಣ್ ತಿಳಿಸಿದರು.

ಪಟ್ಟಣದ ಶಿವಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ನಿಗದಿತ ಅವಧಿಯಲ್ಲೇ ಮುಂಬರುವ ವಿಧಾನಸಭಾ ಚುನಾವಣೆ ನಡೆಯಲಿದ್ದು ಅವಧಿಗೂ ಮೊದಲು ನಡೆಯುವುದಿಲ್ಲವೆಂದು ಸ್ಪಷ್ಟಪಡಿಸಿದರು.

ಸಚಿವ ಸಂಪುಟ ಪುನರ್ ರಚನೆಗೆ ಮುಖ್ಯಮಂತ್ರಿಗಳು ವರಿಷ್ಠರ ಜೊತೆ ಚರ್ಚಿಸಿದ್ದು, ಪಕ್ಷದ ಹೈಕಮಾಂಡ್ ಸೂಕ್ತ ಸಮಯದಲ್ಲಿ ನಿರ್ಧಾರ ಕೈಗೊಳ್ಳಲಿದೆ. ಬಳಿಕ ಸಚಿವ ಸಂಪುಟ ಪುನರ್ ರಚನೆ ಮಾಡುವುದಾಗಿ ತಿಳಿಸಿದರು.

ಕಾಂಗ್ರೆಸ್ ನೆಲೆ ಇಲ್ಲದ ಪಕ್ಷ, ನಾಯಕರೇ ನೆಲೆ ಇಲ್ಲದಂತಾಗಿದ್ದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರ ಹುಡುಕಾಟದಲ್ಲೇ ತೊಡಗಿದ್ದು ಕೊನೆಗೆ ಯಾವ ಕ್ಷೇತ್ರದಲ್ಲಿ ಸ್ಪರ್ಧೆ ಮಾಡುತ್ತಾರೋ ಕಾದು ನೋಡಬೇಕಾಗಿದೆ ಎಂದು ವ್ಯಂಗ್ಯವಾಡಿದರು. ವಿಶ್ವನಾಥ್ ಹಾಗೂ ಸಿದ್ದರಾಮಯ್ಯ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು ಸಿದ್ದರಾಮಯ್ಯ ಹಾಗೂ ವಿಶ್ವನಾಥ್ ನಡುವೆ ವ್ಯತ್ಯಾಸವಿದ್ದು ಅವರ ವೈಯಕ್ತಿಕ ಸಂಬಂಧಗಳು ಏನು ಅಂತ ಗೊತ್ತಿಲ್ಲ. ಈಗಾಗಲೇ ವಿಶ್ವನಾಥ್ ಅವರು ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಹೋಗಿದ್ದು, ಈಗ ಬಿಜೆಪಿಗೆ ಆಗಮಿಸಿದ್ದು ನಮ್ಮ ನಾಯಕರಾಗಿ ಪಕ್ಷದಲ್ಲಿದ್ದಾರೆ ಎಂದರು.

ಸಮಯ ಬಂದಾಗ ಸಾಮಾಜಿಕವಾಗಿ ಮಾತನಾಡುವ ಸಂದರ್ಭದಲ್ಲಿ ಅದಕ್ಕೆ ರಾಜಕೀಯ ಬಣ್ಣ ಕೊಡುವುದು ಬೇಡ ವಿಶ್ವನಾಥ್ ಕಾಂಗ್ರೆಸ್ ಸೇರುವ ಬಗ್ಗೆ ತಮಗೆ ಗೊತ್ತಿಲ್ಲ ಅವರು ನಮ್ಮ ಪಕ್ಷದಲ್ಲಿದ್ದು ಪಕ್ಷದ ಸಿದ್ಧಾಂತಕ್ಕೆ ಸಂಪೂರ್ಣ ಬದ್ಧರಾಗಿರುತ್ತಾರೆಂದರು.

ಸಂಸದೆ ಸುಮಲತಾ ಅವರು ಅಪಾರ ಜನಮನ್ನಣೆ ಹೊಂದಿದ್ದು, ಪಕ್ಷೇತರರಾಗಿ ಸ್ಪರ್ಧಿಸಿ ಜಯಗಳಿಸಿದ್ದಾರೆ. ಅವರನ್ನು ಬಿಜೆಪಿ ಪಕ್ಷಕ್ಕೆ ಈಗಾಗಲೇ ಆಹ್ವಾನಿಸಿರುವುದಾಗಿ ಅವರ ನಿರ್ಧಾರದ ಮೇಲೆ ಮುಂದಿನ ಭವಿಷ್ಯ ಕಾದು ನೋಡುವಂತೆ ಹೇಳಿದರು.

ಮರಕ್ಕೆ ಆಟೋ ಡಿಕ್ಕಿ: ಚಾಲಕ ಸಾವು

ಭಾರತೀನಗರ, ಡಿ.11– ನಿಯಂತ್ರಣ ತಪ್ಪಿದ ಆಟೋ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸಾವನ್ನಪ್ಪಿರುವ ಘಟನೆ ಶನಿವಾರ ರಾತ್ರಿ ಮದ್ದೂರು ತಾಲೂಕಿನ ಅಂಬರಹಳ್ಳಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ನವೀನ್ ಕುಮಾರ್(32) ಸಾವನ್ನಪ್ಪಿದವರು. ವೃತ್ತಿಯಲ್ಲಿ ಆಟೋ ಚಾಲಕನಾಗಿದ್ದ ಈತ ಶನಿವಾರ ರಾತ್ರಿ ಮದ್ದೂರಿನಿಂದ ಸ್ವಗ್ರಾಮಕ್ಕೆ ಆಗಮಿಸುತ್ತಿದ್ದರು. ಈ ವೇಳೆ ಮಳೆ ಹೆಚ್ಚಾದ ಕಾರಣ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದ್ದಾರೆ. ಇದರಿಂದ ತೀವ್ರ ಗಾಯಗೊಂಡ ನವೀನ್ ಕುಮಾರ್‌ನನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಣುಬಿಗಿದ ಸ್ಥಿತಿಯಲ್ಲಿ ಯುವಕನ ಶವ ಪತ್ತೆ

ಕಿಕ್ಕೇರಿ, ಡಿ.11– ಇಲ್ಲಿಗೆ ಸಮೀಪದ ಉದ್ದಿನಮಲ್ಲನ ಹೊಸೂರು ಗ್ರಾಮದ ಹೊರವಲಯದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಯುವಕನ ಶವ ಪತ್ತೆಯಾಗಿದೆ.



ಗ್ರಾಮದ ನಿವಾಸಿ ಕುಮಾರ್ ಪುತ್ರ ಸಚಿನ್(21) ಸಾವನ್ನಪ್ಪಿದವರು. ಟ್ರಾಕ್ಟರ್ ಚಾಲಕನಾಗಿ ಕಾರ್ಯ ನಿರ್ವಹಿಸುತ್ತಿದ್ದ ಈತ ಶುಕ್ರವಾರ ರಾತ್ರಿ ಸ್ನೇಹಿತನ ಹುಟ್ಟುಹಬ್ಬಕ್ಕೆಂದು ಕಿಕ್ಕೇರಿಗೆ ಆಗಮಿಸಿದ್ದ. ಆದರೆ ಶನಿವಾರ ಬೆಳಗ್ಗೆ ಗ್ರಾಮದ ಹೊರವಲಯದ ಜಮೀನಿನಲ್ಲಿದ್ದ ಮರದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಸಚಿನ್ ಶವ ಪತ್ತೆಯಾಗಿದೆ. ಮೃತರ ಚಿಕ್ಕಪ್ಪ ಶಿವಕುಮಾರ್ ಜಮೀನಿಗೆ ಹೋದಾಗ ಪ್ರಕರಣ ಬೆಳಕಿಗೆ ಬಂದಿದ್ದು, ಕಿಕ್ಕೇರಿ ಪೊಲೀಸ್ ಠಾಣೆಗೆ ಇದೊಂದು ಅಸಹಜ ಸಾವು. ಈ ಬಗ್ಗೆ ಸೂಕ್ತ ತನಿಖೆ ಕೈಗೊಳ್ಳುವಂತೆ ದೂರು ನೀಡಿದ್ದಾರೆ.

ಮಕ್ಕಳಲ್ಲಿ ಮಹಾತ್ಮರು, ಹುತಾತ್ಮರ ಬಗ್ಗೆ ಅರಿವು ಮೂಡಿಸಿ

ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು ಸಲಹೆ



ಚಿನಕುರಳಿ, ಡಿ.11– ಇಂಗ್ಲೀಷ್ ಮಾಧ್ಯಮದ ಶಾಲಾ ಮಕ್ಕಳಿಗೆ ಕಡ್ಡಾಯವಾಗಿ ಕನ್ನಡ ಕಲಿಸಬೇಕು. ಜೊತೆಗೆ ಅವರಲ್ಲಿ ರಾಷ್ಟ್ರಾಭಿಮಾನ ಬೆಳೆಸಿ ದೇಶದ ಮಹಾತ್ಮರು, ಹುತಾತ್ಮರ ಬಗ್ಗೆ ಅರಿವು ಮೂಡಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು ಸಲಹೆ ನೀಡಿದರು.

ಗ್ರಾಮದ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ 2 ದಿನಗಳ ಕಾಲ ನಡೆದ ಸಂಸ್ಕೃತಿ ಸುರಭಿ ಶಾಲಾ ವಾರ್ಷಿಕೋತ್ಸವ ಸಮಾರೋಪದಲ್ಲಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಕೆಲಸ ಮಾಡುತ್ತಿದೆ. ಶಿಕ್ಷಕರು ಗ್ರಾಮೀಣ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಹುಟ್ಟುಹಾಕುವ ಕೆಲಸ ಮಾಡಬೇಕು. ಮಕ್ಕಳಲ್ಲಿ ಹೊಸ ಆಲೋಚನೆಗಳನ್ನು ಬೆಳೆಸಬೇಕು ಎಂದರು.

ಪ್ರಸ್ತುತ ಇಂಗ್ಲೀಷ್ ಭಾಷಾ ಜ್ಞಾನ ಅತಿಮುಖ್ಯ. ಶಾಲೆಗಳಲ್ಲಿ ಮಕ್ಕಳಿಗೆ ಇಂಗ್ಲೀಷ್ ಕಲಿಸುವುದರ ಜೊತೆಗೆ ಮಕ್ಕಳಿಗೆ ಕಡ್ಡಾಯವಾಗಿ ಕನ್ನಡ ಭಾಷೆ ಕಲಿಸಬೇಕು. ಇದರೊಂದಿಗೆ ರಾಷ್ಟ್ರದ ಬಗ್ಗೆ ತಿಳಿಸಿಕೊಡಬೇಕು. ಅಲ್ಲದೇ ನಾವು ತಂದೆ ತಾಯಿಯನ್ನು ಹೇಗೆ ಮರೆಯುವುದಿಲ್ಲವೋ ಅದೇ ರೀತಿ ನಮ್ಮ ರಾಷ್ಟ್ರದ ಉಳಿವಿಗಾಗಿ ಹೋರಾಡಿದ ಮಹಾತ್ಮರು, ಹುತಾತ್ಮರ ಮರೆಯಬಾರದು ಎಂದು ಸಲಹೆ ನೀಡಿದರು.

ಶಾಸಕ ಸಿ.ಎಸ್.ಪುಟ್ಟರಾಜು ಪುತ್ರ ಸಿ.ಪಿ.ಶಿವರಾಜು ಅವರು ಸಜ್ಜನಿಕೆಯ ವ್ಯಕ್ತಿತ್ವ ರೂಢಿಸಿಕೊಂಡಿದ್ದಾರೆ. ಶಿಕ್ಷಣ ಸಂಸ್ಥೆಯನ್ನು ಉತ್ತಮ ರೀತಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಶಾಸಕರ ಪುತ್ರನಾಗಿದ್ದರೂ ಸಹ ಸ್ವಲ್ಪವೂ ಅಹಂ ಇಲ್ಲ, ಎಲ್ಲರನ್ನು ನಯ ವಿನಯದಿಂದ ಮಾತನಾಡಿಸುತ್ತಾರೆ. ನಾಯಕನಾದವರಿಗೆ ಇರಬೇಕಾದ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ಶಿವರಾಜು ಅವರಿಗೆ ಮುಂದಿನ ದಿನಗಳಲ್ಲಿ ಭವಿಷ್ಯದ ನಾಯಕನಾಗುವ ಎಲ್ಲಾ ಗುಣಗಳಿವೆ ಎಂದು ಬಣ್ಣಿಸಿದರು.

ಸಂಸ್ಥೆ ಅಧ್ಯಕ್ಷ, ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಗ್ರಾಮೀಣ ಮಕ್ಕಳಿಗೆ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕು ಎನ್ನುವ ಉದ್ದೇಶದಿಂದ ಶಿಕ್ಷಣ ಸಂಸ್ಥೆ ತೆರೆದಿದ್ದೇನೆ. ಮಕ್ಕಳು ಉತ್ತಮವಾದ ಶಿಕ್ಷಣ ಕಲಿತು ವಿದ್ಯಾವಂತರಾದರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳ ಬಹುದು ಎಂದರು.

ಮಕ್ಕಳ ಸರ್ವತೋಮುಖ ಪ್ರಗತಿಗೆ ಪೂರಕವಾಗಿ ಶಿಕ್ಷಣ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗೆ ಒತ್ತುಕೊಟ್ಟು ಶಿಕ್ಷಣ ಕಲಿಸಲಾಗುತ್ತಿದೆ. ಜತೆಗೆ ಅಮೇರಿಕಾ ವಿವಿಯೊಂದಿಗೆ ವಿದ್ಯಾರ್ಥಿ ವಿನಿಮಯಕ್ಕೆ ಒಪ್ಪಂದ ಮಾಡಿಕೊಂಡು ಮಕ್ಕಳಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ನೀಡುವ ಕೆಲಸ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಎಲ್‌ಕೆಜಿಯಿಂದ ಸ್ನಾತಕೋತ್ತರ ಪದವಿವರೆಗೂ ಒಂದೇ ಸೂರಿನಡಿ ಶಿಕ್ಷಣ ನೀಡಬೇಕು ಎನ್ನುವ ಗುರಿ ಹೊಂದಲಾಗಿದೆ ಎಂದರು. ಈ ವೇಳೆ 1 ರಿಂದ 9ನೇ ತರಗತಿವರೆಗೆ ಅಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಶಾಸಕ ಸಿ.ಎಸ್.ಪುಟ್ಟರಾಜು ಬಹುಮಾನ ವಿತರಿಸಿದರು. ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು ಅವರನ್ನು ಅಭಿನಂದಿಸಲಾಯಿತು.

ಶಾಲಾ ಮಕ್ಕಳಿಂದ ಹಲವು ಸಾಂಸ್ಕೃತಿಕ ಕಾರ್ಯಕ್ರಮ ಮೂಡಿಬಂದವು. ಮಕ್ಕಳ ನೃತ್ಯ ಪ್ರದರ್ಶನ ಕಂಡು ಪೋಷಕರು ಸಂಭ್ರಮಿಸಿದರು. ಕಾಂತರ ಚಿತ್ರದ ಹಾಡಿಗೆ ಮಕ್ಕಳಿಂದ ಮೂಡಿಬಂದ ನೃತ್ಯ ಎಲ್ಲರ ಮೆಚ್ಚುಗೆ ಪಡೆಯಿತು. ಇದೇ ವೇಳೆ ಎಸ್‌ಟಿಜಿ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮಗಳ ಕಿರುಹೊತ್ತಿಗೆಯನ್ನು ಎಡಿಸಿ ನಾಗರಾಜು ಬಿಡುಗಡೆ ಮಾಡಿದರು.

ಈ ಸಂದರ್ಭ ಜಿಪಂ ಮಾಜಿ ಸದಸ್ಯೆ ನಾಗಮ್ಮ ಪುಟ್ಟರಾಜು, ಎಸ್‌ಟಿಜಿ ಸಂಸ್ಥೆ ಸಿಇಓ ಸಿ.ಪಿ.ಶಿವರಾಜು, ಕಾರ್ಯದರ್ಶಿ ಸಿ.ಹರೀಶ್, ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಆರ್.ಧನ್ಯಕುಮಾರ್, ಪ್ರಾಂಶುಪಾಲೆ ಮಾಚಮ್ಮ, ಆಡಳಿತಾಧಿಕಾರಿ ನಿವೇದಿತ ನಾಗೇಶ್, ಪಿಆರ್‌ಓ ಗೋಪಾಲ್ ಸೇರಿದಂತೆ ಹಲವರಿದ್ದರು.

ಆರೋಪಿ ಯುವಕನ ಬಂಧಿಸಿದ ಇನ್ಸ್‌ಪೆಕ್ಟರ್ ಸೇರಿ 8 ಮಂದಿ ಪೊಲೀಸರ ವಿರುದ್ಧ ಎಫ್‌ಐಆರ್

ಶ್ರೀರಂಗಪಟ್ಟಣ, ಡಿ.11– ಹನುಮ ಜಯಂತಿ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ನಡೆದ ಸಂಕೀರ್ತನಾ ಯಾತ್ರೆ ವೇಳೆ ಮುಸ್ಲಿಂಮರ ಮೇಲಿನ ಹಸಿರು ಬಾವುಟ ಕಿತ್ತು ಕೇಸರಿ ಬಾವುಟ ಹಾರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವಕನನ್ನು ಬಂಧಿಸಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಸೇರಿದಂತೆ 8 ಮಂದಿ ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಯುವಕನನ್ನು ಪೊಲೀಸರು ಬಂಧಿಸಿದ ಕ್ರಮ ಖಂಡಿಸಿ ಶನಿವಾರ ರಾತ್ರಿ ಹಿಂದೂ ಸಂಘಟನೆಗಳ ಕಾರ್ಯಕರ್ತರು ಪೊಲೀಸ್ ಠಾಣೆ ಎದುರು ಅಹೋರಾತ್ರಿ ಪ್ರತಿಭಟನೆ ನಡೆಸಿ, ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದರು. ಎಸ್ಪಿ ಯತೀಶ್ ಅವರು ಆಗಮಿಸಿ ಸಮಾಧಾನ ಪಡಿಸಿದರಾದರೂ ಅದಕ್ಕೆ ಸ್ಪಂದಿಸದ ಪ್ರತಿಭಟನಾಕಾರರು ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದ್ದರು. ಪೊಲೀಸರ ವಿರುದ್ಧ ಕ್ರಮಕ್ಕೆ ಎಸ್ಪಿ ಒಪ್ಪಿದ ನಂತರ ಹಿಂದೂ ಜಾಗರಣಾ ವೇದಿಕೆ ಸಂಚಾಲಕ ನವೀನ್ ಕುಮಾರ್ ದೂರು ಸಲ್ಲಿಸಿ, ಯುವಕನ್ನು ಬಂಧಿಸಿದ ವೇಳೆ ಪೊಲೀಸರು ಆತನಿಗೆ ಮತ್ತು ಮನೆಯವರಿಗೆ ಪ್ರಾಣ ಬೆದರಿಕೆ ಹಾಕಿದ್ದರು. ಹಾಗೂ ಯುವಕನ್ನು ಠಾಣೆಗೆ ಕರೆತಂದು ಹಲ್ಲೆ ನಡೆಸಿದ್ದರು ಎಂದು ಆರೋಪಿಸಿದ್ದರು. ಇನ್ಸ್‌ಪೆಕ್ಟರ್ ಪ್ರಕಾಶ್, ಸಿಬ್ಬಂದಿಗಳಾದ ಉಮೇಶ್, ಪ್ರಕಾಶ್, ಕೃಷ್ಣ, ವಿಜಯ್, ಶರತ್, ಹರೀಶ್, ಮಂಜುನಾಥ್ ಮತ್ತು ರಾಘವೇಂದ್ರ ವಿರುದ್ಧ ಶ್ರೀರಂಗಪಟ್ಟಣ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 506, 504, 448, 295ಎ, 323ರ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪಿಎಸಿಎಸ್ ವಾಣಿಜ್ಯ ಸಂಕೀರ್ಣ ಉದ್ಘಾಟನೆ




ಪಿರಿಯಾಪಟ್ಟಣ, ಡಿ.11– ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ವಾಣಿಜ್ಯ ಸಂಕೀರ್ಣವನ್ನು ಶಾಸಕ ಕೆ.ಮಹದೇವ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ರೈತರು ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸಿದರೇ ಮಾತ್ರ ಸಂಘದ ಬೆಳವಣಿಗೆ ಸಾಧ್ಯ. ಈ ಸಾಲಿನಲ್ಲಿ ಸಂಘದಿಂದ 13.5 ಕೋಟಿ ರೂ. ಸಾಲ ವಿತರಿಸಿದ್ದು, 14 ಲಕ್ಷ ರೂ. ಲಾಭದಲ್ಲಿ ಮುನ್ನಡೆಯುತ್ತಿದೆ ಎಂದರು.

ಈ ವೇಳೆ ಸಂಘದ ಅಧ್ಯಕ್ಷ ಪಿ.ಕೆ.ಕುಮಾರ್ ಉಪಾಧ್ಯಕ್ಷ ಕರಿ ನಾಯಕ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರವೀಣ್ ಕುಮಾರ್, ಪುರಸಭೆ ಅಧ್ಯಕ್ಷ ಮಹೇಶ್, ಮೈಮುಲ್ ನಿರ್ದೇಶಕ ರಾಜೇಂದ್ರ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ ತಾಪಂ ಮಾಜಿ ಸದಸ್ಯ ರಂಗಸ್ವಾಮಿ, ಪುರಸಭೆಯ ಮಾಜಿ ಅಧ್ಯಕ್ಷ ಮಂಜುನಾಥ್ ಸಿಂಗ್, ಮುಖಂಡರಾದ ರಾಮಚಂದ್ರ, ರಾಜು, ರಫೀಕ್, ಪುರಸಭಾ ಸದಸ್ಯರಾದ ನಳಿನಿಗೌಡ, ಭಾರತಿ ಸಂಸ್ಥೆ ಸದಸ್ಯರಾದ ಪ್ರಭು ಕುಮಾರ್, ರಮೇಶ್, ಸೇರಿದಂತೆ ಹಲವರಿದ್ದರು.

ಮುಳ್ಳೂರು ಶಾಲೆಯಲ್ಲಿ ತಿರಂಗಾ ಯಾತ್ರಾ ಕಾರ್ಯಕ್ರಮ



ಸರಗೂರು, ಡಿ.11– ತಾಲೂಕಿನ ಮುಳ್ಳೂರು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾರತ ಸೇವಾದಳದಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ತಿರಂಗಾ ಯಾತ್ರಾ ಕಾರ್ಯಕ್ರಮ ನಡೆಯಿತು.

ಎಸ್‌ಡಿಎಂಸಿ ಅಧ್ಯಕ್ಷ ಮಂಜುನಾಥ್ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ರಾಷ್ಟ್ರಧ್ವಜ ಹಿಡಿಯಲು ಭಾರತೀಯರಾದ ನಾವು ಯಾವಾಗಲೂ ಹೆಮ್ಮೆ ಪಡಬೇಕು. ನಮ್ಮ ಧ್ವಜಕ್ಕೆ ನಾವು ತೋರುವ ನಿಷ್ಠೆ ಸ್ವಾತಂತ್ರ್ಯದ ದೊಡ್ಡ ಸಂಕೇತವಾಗಿದೆ ಎಂದರು. ಕಾರ್ಯಕಮದಲ್ಲಿ ಗ್ರಾಪಂ ಅಧ್ಯಕ್ಷ ಗೋವಿಂದಾಚಾರ್, ಜಿಲ್ಲಾ ಭಾರತ ಸೇವಾದಳ ಅಧ್ಯಕ್ಷ ನರಸಿಂಹಸ್ವಾಮಿ, ಎಸ್‌ಡಿಎಂಸಿ ಉಪಾಧ್ಯಕ್ಷ ನಾಗರಾಜು, ಸದಸ್ಯರಾದ ಮಹೇಶ್, ದೇವಮ್ಮ, ಸುರೇಶ್, ಶಿವನಂಜಮ್ಮ, ಜಿಲ್ಲಾ ವಲಯ ಸಂಘಟನಾಧಿಕಾರಿ ಈರಯ್ಯ, ಶೇಷಾಚಲ ಹಾಗೂ ಶಾಲಾ ಮುಖ್ಯಶಿಕ್ಷಕಿ ಹೆಚ್.ಬಿ.ಜ್ಯೋತಿ, ಸಹಶಿಕ್ಷಕರಾದ ಸ್ವಾಮಿ, ನೇತ್ರ, ಗೀತಾ, ಅತಿಥಿ ಶಿಕ್ಷಕರಾದ ಅಕ್ಕಮಹದೇವಮ್ಮ, ಸೌಂದರ್ಯ, ಶ್ರೀಕಂಠ, ಹಳೇ ವಿದ್ಯಾರ್ಥಿಗಳಾದ ಮುರುಳಿ, ಕುಮಾರ್, ನಾಗರಾಜು ಸೇರಿದಂತೆ ಮಕ್ಕಳು ಇದ್ದರು.



ಹುಣಸೂರು ತಾಲೂಕಿನ ದೊಡ್ಡೇಗೌಡನಕೊಪ್ಪಲು ಗ್ರಾಮದಲ್ಲಿ ನಡೆದ ಕನಕ ಜಯಂತಿಯನ್ನು ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು. ಈ ವೇಳೆ ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಕುನ್ನೇಗೌಡ, ಮಾಜಿ ಜಿಪಂ ಸದಸ್ಯ ಸುರೇಂದ್ರ, ಟಿಎಪಿಸಿಎಂಎಸ್ ಅಧ್ಯಕ್ಷ ಕೆಂಪೇಗೌಡ, ನಿರ್ದೇಶಕರಾದ ಗೋವಿಂದೇಗೌಡ, ಜ್ಯೋತಿ, ಮುಖಂಡರಾದ ವಿಜಯ, ಸಂತೋಷ ಸೇರಿದಂತೆ ಇತರರಿದ್ದರು.

ಕಾಂಗ್ರೆಸ್ ಅಭ್ಯರ್ಥಿಗಳ ಸಂಭಾವ್ಯ ಪಟ್ಟಿ ಸಿದ್ಧ

ಒಂದನೇ ಪುಟದಿಂದ

ಸಂಭಾವ್ಯ ಪಟ್ಟಿಯಲ್ಲಿ ವರುಣಾ ಕ್ಷೇತ್ರದಲ್ಲಿ ಮಾತ್ರ ಸಿದ್ದರಾಮಯ್ಯ ಹೆಸರನ್ನು ನಮೂದಿಸಲಾಗಿದೆ. ನಂಜನಗೂಡಿಗೆ ಧ್ರುವನಾರಾಯಣ ಹಾಗೂ ತಿ.ನರಸೀಪುರಕ್ಕೆ ಡಾ. ಹೆಚ್.ಸಿ.ಮಹದೇವಪ್ಪ ಪುತ್ರ ಸುನಿಲ್ ಬೋಸ್ ಹೆಸರು ಅಂತಿಮಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇನ್ನುಳಿದಂತೆ ಮೈಸೂರಿನ ಕೆ.ಆರ್. ಕ್ಷೇತ್ರಕ್ಕೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಎನ್.ಆರ್.ಗೆ ಶಾಸಕ ತನ್ವೀರ್ ಸೇಠ್, ಚಾಮರಾಜದಲ್ಲಿ ಮಾಜಿ ಶಾಸಕ ವಾಸು ಇಲ್ಲವೇ ಕೆ.ಹರೀಶ್‌ಗೌಡ, ವರುಣಾಗೆ ಸಿದ್ದರಾಮಯ್ಯ ಇಲ್ಲವೇ ಅವರ ಪುತ್ರ ಡಾ.ಯತೀಂದ್ರ ಹೆಸರು ಸಂಭವನೀಯ ಪಟ್ಟಿಯಲ್ಲಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹಾಲಿ ಶಾಸಕ ಜಿ.ಟಿ.ದೇವೇಗೌಡರ ವಿರುದ್ಧ ಸಿದ್ದರಾಮಯ್ಯ ಆಪ್ತ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಪಿರಿಯಾಪಟ್ಟಣಕ್ಕೆ ಮಾಜಿ ಶಾಸಕ ವೆಂಕಟೇಶ್, ಕೆ.ಆರ್.ನಗರಕ್ಕೆ ರವಿಶಂಕರ್, ಹೆಚ್.ಡಿ.ಕೋಟೆಗೆ ಶಾಸಕ ಅನಿಲ್ ಚಿಕ್ಕಮಾದು ಹೆಸರು ಪಟ್ಟಿಯಲ್ಲಿದೆ.

ಚಾಮರಾಜನಗರ ಜಿಲ್ಲೆಯ ಚಾಮರಾಜನಗರಕ್ಕೆ ಶಾಸಕ ಪುಟ್ಟರಂಗಶೆಟ್ಟಿ, ಹನೂರಿಗೆ ಶಾಸಕ ನರೇಂದ್ರ, ಗುಂಡ್ಲುಪೇಟೆಗೆ ದಿವಂಗತ ಹೆಚ್.ಎಸ್. ಮಹದೇವಪ್ರಸಾದ ಪುತ್ರ ಗಣೇಶ್‌ಪ್ರಸಾದ್, ಕೊಳ್ಳೇಗಾಲದಲ್ಲಿ ಮಾಜಿ ಶಾಸಕರಾದ ಜಯಣ್ಣ ಇಲ್ಲವೇ ಬಾಲರಾಜ್ ಹೆಸರನ್ನು ನಮೂದಿಸಲಾಗಿದೆ.

ಕೊಡಗಿನ ವಿರಾಜಪೇಟೆಗೆ ಎ.ಕೆ.ಸುಬ್ಬಯ್ಯ ಪುತ್ರ ಎ.ಎಸ್.ಪೊನ್ನಣ್ಣ, ಮಡಿಕೇರಿ ಕ್ಷೇತ್ರಕ್ಕೆ ಚಂದ್ರಮೌಳಿ, ಮಂಥರ್‌ಗೌಡ ಇಲ್ಲವೇ ಜಿ.ವಿಜಯ ಈ ಮೂವರಲ್ಲಿ ಒಬ್ಬರನ್ನು ಅಂತಿಮಗೊಳಿಸಲಾಗುವುದು.

ಮಂಡ್ಯ ಜಿಲ್ಲೆಯ ಮಂಡ್ಯ ಕ್ಷೇತ್ರಕ್ಕೆ ಗಣಿಗ ರವಿ ಇಲ್ಲವೇ ಡಾ. ಕೃಷ್ಣ, ಮದ್ದೂರಿಗೆ ಎಸ್.ಎಂ.ಕೃಷ್ಣ ಅವರ ಸಹೋದರನ ಪುತ್ರ ಗುರುಚರಣ್, ಮಳವಳ್ಳಿಗೆ ಮಾಜಿ ಶಾಸಕ ನರೇಂದ್ರಸ್ವಾಮಿ, ಮೇಲುಕೋಟೆಗೆ ವೈದ್ಯಕೀಯ ಸಂಘದ ಮಾಜಿ ಅಧ್ಯಕ್ಷ ಡಾ. ರವೀಂದ್ರ, ಶ್ರೀರಂಗಪಟ್ಟಣಕ್ಕೆ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ, ಕೆ.ಆರ್.ಪೇಟೆಗೆ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ವಿಜಯ ರಾಮೇಗೌಡ ಹಾಗೂ ಕಿಕ್ಕೇರಿ ಸುರೇಶ್ ಹೆಸರನ್ನು ನಮೂದಿಸಲಾಗಿದ್ದು, ನಾಗಮಂಗಲ ಟಿಕೆಟ್ ಮಾಜಿ ಸಚಿವ ಎನ್.ಚೆಲುವರಾಯಸ್ವಾಮಿ ಅವರಿಗೆ.

ಹಾಸನ ಜಿಲ್ಲೆಯಲ್ಲಿ ಹಾಸನಕ್ಕೆ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಬಿ.ಪಿ.ಮಂಜೇಗೌಡ ಇಲ್ಲವೇ ರಂಗಸ್ವಾಮಿ, ಅರಸೀಕೆರೆಗೆ ಜೆಡಿಎಸ್‌ನ ಹಾಲಿ ಶಾಸಕ ಶಿವಲಿಂಗೇಗೌಡ, ಬೇಲೂರಿಗೆ ಗಂಡಸಿ ಶಿವರಾಂ ಇಲ್ಲವೇ ಕೃಷ್ಣೇಗೌಡ, ಸಕಲೇಶಪುರಕ್ಕೆ ಮುರಳಿ ಮೋಹನ್, ಅರಕಲಗೂಡು ಕ್ಷೇತ್ರಕ್ಕೆ ಜೆಡಿಎಸ್‌ನ ಹಾಲಿ ಶಾಸಕ ಎ.ಟಿ.ರಾಮಸ್ವಾಮಿ ಕಾಂಗ್ರೆಸ್ ಸೇರ್ಪಡೆಯಾದರೆ ಅವರಿಗೇ ಟಿಕೆಟ್ ಇಲ್ಲದಿದ್ದರೆ ಕೃಷ್ಣೇಗೌಡ, ಶ್ರವಣಬೆಳಗೊಳಕ್ಕೆ ಎಂಎಲ್‌ಸಿ ಗೋಪಾಲಸ್ವಾಮಿ ಇಲ್ಲವೇ ವಿಜಯ ಲಲಿತ್ ರಾಘವ್ ಹೆಸರುಗಳಿವೆ ಎಂದು ಮೂಲಗಳು ಹೇಳಿವೆ.

ಇನ್ನುಳಿದಂತೆ ಬೆಂಗಳೂರು ನಗರದ ಗಾಂಧಿನಗರ–ದಿನೇಶ್ ಗುಂಡೂರಾವ್, ಬ್ಯಾಟರಾಯನಪುರ–ಕೃಷ್ಣಬೈರೇಗೌಡ, ಸರ್ವಜ್ಞನಗರ–ಕೆ.ಜೆ.ಜಾರ್ಜ್, ಬಿಟಿಎಂ ಲೇಔಟ್– ರಾಮಲಿಂಗಾರೆಡ್ಡಿ, ಜಯನಗರ –ಸೌಮ್ಯಾ ರೆಡ್ಡಿ, ಪುಲಿಕೇಶಿನಗರ–ಅಖಂಡ ಶ್ರೀನಿವಾಸ್ ಮೂರ್ತಿ, ಹೆಬ್ಬಾಳ–ಬೈರತಿ ಸುರೇಶ್, ಮಲ್ಲೇಶ್ವರಂ–ರಶ್ಮಿ ರವಿಕಿರಣ್/ಅನೂಪ್ ಹೆಗಡೆ, ರಾಜಾಜಿನಗರ –ಎಂಎಲ್ ಸಿ.ಪುಟ್ಟಣ್ಣ /ಬಿಬಿಎಂಪಿ ಮಾಜಿ ಉಪ ಮೇಯರ್ ಪುಟ್ಟರಾಜು/ಸಾರಾ ಗೋವಿಂದ್/ಎಸ್.ನಾರಾಯಣ್, ಸಿ.ವಿ.ರಾಮನ್ ನಗರ–ಮಾಜಿ ಮೇಯರ್ ಸಂಪತ್ ರಾಜ್, ಮಹಾಲಕ್ಷ್ಮಿ ಲೇಔಟ್–ನಾರಾಯಣಸ್ವಾಮಿ / ಜೆ.ಸಿ.ಚಂದ್ರಶೇಖರ್, ವಿಜಯನಗರ –ಎಂ.ಕೃಷ್ಣಪ್ಪ, ಗೋವಿಂದರಾಜನಗರ – ಪ್ರಿಯಕೃಷ್ಣ, ಆರ್.ಆರ್.ನಗರ –ಕುಸುಮಾ ಹನುಮಂತರಾಯಪ್ಪ, ಪದ್ಮನಾಭನಗರ–ರಘುನಾಥ್ ನಾಯ್ಡು/ಸಂಜಯ್‌ಗೌಡ, ಬೆಂಗಳೂರು ದಕ್ಷಿಣ –ಆರ್.ಕೆ.ರಮೇಶ್ / ಸುಷ್ಮಾ ರಾಜಗೋಪಾಲ್, ಬೊಮ್ಮನಹಳ್ಳಿ–ನಿರ್ಮಾಪಕ ಉಮಾಪತಿಗೌಡ, ಮಹದೇವಪುರ–ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್/ಆನಂದ್, ಕೆ.ಆರ್.ಪುರಂ – ಡಿ.ಕೆ.ಮೋಹನ್ ಬಾಬು / ನಾರಾಯಣಸ್ವಾಮಿ, ಯಲಹಂಕ – ಚಂದ್ರಪ್ಪ / ನಾಗರಾಜು

ಬೆಂಗಳೂರು ಗ್ರಾಮಾಂತರ: ನೆಲಮಂಗಲ–ಶ್ರೀನಿವಾಸ್, ದೇವನಹಳ್ಳಿ –ಕೆ.ಹೆಚ್.ಮುನಿಯಪ್ಪ/ಎ.ಸಿ.ಶ್ರೀನಿವಾಸ್/ಆನಂದ್‌ಕುಮಾರ್, ಆನೇಕಲ್ – ಶಾಸಕ ಶಿವಣ್ಣ, ದೊಡ್ಡಬಳ್ಳಾಪುರ – ಶಾಸಕ ವೆಂಕಟರಮಣಯ್ಯ, ಹೊಸಕೋಟೆ – ಶರತ್ ಬಚ್ಚೇಗೌಡ.

ತುಮಕೂರು ಜಿಲ್ಲೆ: ತುಮಕೂರು ನಗರ–ಅತೀಕ್ ಅಹ್ಮದ್ / ರಫಿಕ್ ಅಹ್ಮದ್, ತುಮಕೂರು ಗ್ರಾಮಾಂತರ–ರವಿ /ಸೂರ್ಯ ಮುಕುಂದರಾಜು, ಕೊರಟಗೆರೆ–ಡಾ.ಜಿ.ಪರಮೇಶ್ವರ್, ಮಧುಗಿರಿ–ಕೆ.ಎನ್.ರಾಜಣ್ಣ, ಗುಬ್ಬಿ –ಶ್ರೀನಿವಾಸ್(ಶಾಸಕ), ಕುಣಿಗಲ್–ರಂಗನಾಥ್(ಶಾಸಕ), ಚಿಕ್ಕನಾಯಕನ ಹಳ್ಳಿ – ಸುರೇಶ್ ಬಾಬು / ಸಿಎಂ ಧನಂಜಯ್, ತಿಪಟೂರು – ಷಡಕ್ಷರಿ / ಮಾಜಿ ಡಿವೈಎಸ್ಪಿ ಲೋಕೇಶ್, ತುರುವೇಕೆರೆ – ಬೆಮೆಲ್ ಕಾಂತರಾಜು (ಮಾಜಿ ಎಂಎಲ್ಸಿ), ಶಿರಾ – ಜಯಚಂದ್ರ(ಮಾಜಿ ಶಾಸಕ), ಪಾವಗಡ –ಶಾಸಕ ವೆಂಕಟರಮಣ್ಣ ಪುತ್ರ ವೆಂಕಟೇಶ್.

ಚಿತ್ರದುರ್ಗ ಜಿಲ್ಲೆ: ಚಿತ್ರದುರ್ಗ – ರಘು ಆಚಾರ್(ಮಾಜಿ ಎಂಎಲ್ಸಿ), ಹೊಳಲ್ಕೆರೆ – ಹೆಚ್. ಆಂಜನೇಯ (ಮಾಜಿ ಸಚಿವ), ಹೊಸದುರ್ಗ – ಬಿ.ಜಿ.ಗೋವಿಂದಪ್ಪ (ಮಾಜಿ ಶಾಸಕ), ಹಿರಿಯೂರು – ಸುಧಾಕರ್ (ಮಾಜಿ ಶಾಸಕ), ಚಳ್ಳಕೆರೆ – ರಘು ಮೂರ್ತಿ (ಶಾಸಕ), ಮೊಳಕಾಲ್ಮೂರು – ಯೋಗೇಶ್ ಬಾಬು / ಉಗ್ರಪ್ಪ(ಮಾಜಿ ಸಂಸದ).

ದಾವಣಗೆರೆ ಜಿಲ್ಲೆ: ದಾವಣಗೆರೆ ದಕ್ಷಿಣ–ಶಾಮನೂರು ಶಿವಶಂಕರಪ್ಪ, ಇಲ್ಲವೇ ಕುಟುಂಬ ಸದಸ್ಯರು, ದಾವಣಗೆರೆ ಉತ್ತರ–ಎಸ್.ಎಸ್.ಮಲ್ಲಿಕಾರ್ಜುನ್ (ಮಾಜಿ ಸಚಿವ), ಜಗಳೂರು–ಹೆಚ್.ಪಿ.ರಾಜೇಶ್ (ಮಾಜಿ ಶಾಸಕ), ಮಾಯಕೊಂಡ–ದುಗ್ಗಪ್ಪ, ಬಸವರಾಜು, ಸವಿತಾ ಮಲ್ಲೇಶನಾಯ್ಕ, ಹರಿಹರ –ರಾಮಪ್ಪ(ಶಾಸಕ), ದೇವೇಂದ್ರಪ್ಪ, ನಾಗೇಂದ್ರಪ್ಪ, ಹೊನ್ನಾಳಿ– ಶಾಂತನಗೌಡ, ಹೆಚ್.ಬಿ.ಮಂಜಪ್ಪ, ಚನ್ನಗಿರಿ–ವಡ್ನಾಳ್ ರಾಜಣ್ಣ, ತಮ್ಮ ಅಶೋಕ್.

ಬಳ್ಳಾರಿ, ವಿಜಯನಗರ ಜಿಲ್ಲೆ: ಬಳ್ಳಾರಿ ನಗರ – ನಾರಾ ಭರತ್ ರೆಡ್ಡಿ / ದಿವಾಕರ್ ಬಾಬು, ಬಳ್ಳಾರಿ ಗ್ರಾಮಾಂತರ – ನಾಗೇಂದ್ರ (ಶಾಸಕ), ಸಂಡೂರು – ತುಕಾರಾಂ (ಶಾಸಕ), ಕೂಡ್ಲಿಗಿ – ನಾಗರಾಜು / ಶ್ರೀನಿವಾಸ್, ಕಂಪ್ಲಿ – ಗಣೇಶ್ (ಶಾಸಕ), ಹಗರಿಬೊಮ್ಮನಹಳ್ಳಿ – ಭೀಮಾನಾಯ್ಕ್ (ಶಾಸಕ), ಹೊಸಪೇಟೆ – ಗವಿಯಪ್ಪ / ರಾಜಶೇಖರ್ ಹಿಟ್ನಾಳ್, ಘೋರ್ಪಡೆ, ಹರಪನಹಳ್ಳಿ – ಲತಾ ಮಲ್ಲಿಕಾರ್ಜುನ್ / ವೀಣಾ ಮಹಾಂತೇಶ್, ಸಿರಗುಪ್ಪ – ಬಿ.ಎಂ.ನಾಗರಾಜು, ಮುರುಳಿಕೃಷ್ಣ.

ದಕ್ಷಿಣ ಕನ್ನಡ: ಬಂಟ್ವಾಳ – ರಮಾನಾಥ್ ರೈ (ಮಾಜಿ ಸಚಿವ), ಪುತ್ತೂರು –ಶಂಕುಂತಲಾ ಶೆಟ್ಟಿ (ಮಾಜಿ ಶಾಸಕಿ), ಮೂಡಬಿದರೆ–ಮಿಥುನ್ ರೈ /ರಾಜಶೇಕರ್ ಕೊಟ್ಯಾನ್, ಸುಳ್ಯ–ಡಾ.ರಘು, ಮಂಗಳೂರು ಉತ್ತರ–ಮೊಯಿನುದ್ದೀನ್ ಬಾವ, ಪ್ರತಿಬಾ ಕುಳಾಯಿ, ಮಂಗಳೂರು – ಐವಾನ್ ಡಿಸೋಜ / ಜೆ.ಆರ್.ಲೊಬೋ, ಉಲ್ಲಾಳ – ಯು.ಟಿ.ಖಾದರ್(ಮಾಜಿ ಸಚಿವ), ಬೆಳ್ತಂಗಡಿ – ರಕ್ಷಿತ್ ಶಿವರಾಂ, ವಸಂತ ಬಂಗೇರ.

ಉಡುಪಿ: ಉಡುಪಿ – ಕೃಷ್ಣಮೂರ್ತಿ ಆಚಾರ್ / ದಿನೇಶ್ ಹೆಗಡೆ, ಬೈಂದೂರು – ಗೋಪಾಲ ಪೂಜಾರಿ, ಕುಂದಾಪುರ – ಪ್ರತಾಪ್ ಚಂದ್ರ ಶೆಟ್ಟಿ, ಕಾಪು – ವಿನಯ್ ಕುಮಾರ್ ಸೊರಕೆ.

ಉತ್ತರಕನ್ನಡ: ಶಿರಸಿ–ನಿವೇದಿತ್ ಆಳ್ವಾ/ಭೀಮಣ್ಣಾ ನಾಯಕ್, ಯಲ್ಲಾಪುರ –ವಿ.ಎಸ್.ಪಾಟೀಲ್, ಕಾರವಾರ –ಸತೀಶ್ ಸೈಲ್, ಕುಮಟಾ –ಶಾರದ ಮೋಹನ್ ಶೆಟ್ಟಿ/ಮಂಜುನಾಥ್‌ಪ್ರಸಾದ್, ಹಳಿಯಾಳ– ಆರ್.ವಿ.ದೇಶಪಾಂಡೆ.

ಬೆಳಗಾವಿ: ಖಾನಾಪುರ–ಅಂಜಲಿ ನಿಂಬಾಳ್ಕರ್, ಬೆಳಗಾವಿ ಗ್ರಾಮೀಣ –ಲಕ್ಷ್ಮೀ ಹೆಬ್ಬಾಳ್ಕರ್, ಬೆಳಗಾವಿ ಉತ್ತರ–ಫಿರೋಜ್ ಶೇಠ್, ಬೆಳಗಾವಿ ದಕ್ಷಿಣ–ಇನ್ನೂ ನಿಗದಿಯಾಗಿಲ್ಲ. ಸವದತ್ತಿ–ಉದಯ್ ಕುಮಾರ್ / ಸತೀಶ್ ಜಾರಕಿಹೊಳಿ, ಬೈಲಹೊಂಗಲ–ಮಹಾಂತೇಶ್ ಕೌಜಲಗಿ, ಕಾಗವಾಡ –ರಾಜುಕಾಗೆ, ಅಥಣಿ –ಗಜಾನನ ಮಂಗ್ಸೂಳಿ, ಚಿಕ್ಕೋಡಿ ಸದಲಗ –ಗಣೇಶ್ ಹುಕ್ಕೇರಿ, ಹುಕ್ಕೇರಿ–ಎ.ಬಿ.ಪಾಟೀಲ್, ಗೋಕಾಕ್ – ಅಶೋಕ್ ಪೂಜಾರಿ, ರಾಯಭಾಗ –ಸೆಲ್ವಕುಮಾರ್ /ಶ್ಯಾಂ ಘಾಟ್ಗೆ, ರಾಮದುರ್ಗ – ಅಶೋಕ್ ಪಟ್ಟಣ್, ಅರಬಾವಿ–ಅರವಿಂದ ದಳವಾಯಿ, ಯಮಕನಮರಡಿ – ಸತೀಶ್ ಜಾರಕಿಹೊಳಿ / ಪುತ್ರಿ ಪ್ರಿಯಾಂಕ, ನಿಪ್ಪಾಣಿ – ಕಾಕಾ ಸಾಹೇಬ್ ಪಾಟೀಲ್, ಕಿತ್ತೂರು – ಡಿ.ಬಿ.ಇನಾಂದಾರ್.

ಬಾಗಲಕೋಟೆ: ಬಾಗಲಕೋಟೆ – ಹೆಚ್.ವೈ.ಮೇಟಿ, ರಕ್ಷಿತಾ ಈಟಿ, ಬಾಯಕ್ಕ ಮೇಟಿ/ಡಾ.ದೇವರಾಜ್ ಪಾಟೀಲ್, ಮುಧೋಳ – ಆರ್.ಬಿ. ತಿಮ್ಮಾಪೂರ, ತೇರದಾಳ – ಉಮಾಶ್ರೀ, ಹುನಗುಂದ – ವಿಜಯಾನಂದ ಕಾಶಪ್ಪ, ಬೀಳಗಿ–ಜೆ.ಟಿ.ಪಾಟೀಲ್, ಎಸ್.ಆರ್.ಪಾಟೀಲ್, ಜಮಖಂಡಿ – ಆನಂದ್ ನ್ಯಾಮಗೌಡ, ಬಾದಾಮಿ – ದೇವರಾಜ್ ಪಾಟೀಲ್ / ಚಿಮ್ಮನಕಟ್ಟಿ, ಇಂಡಿ – ಯಶವಂತರಾಯಗೌಡ ಪಾಟೀಲ್, ಬಾವನ ಬಾಗೇವಾಡಿ–ಶಿವಾನಂದ ಪಾಟೀಲ್/ ಸಂಯುಕ್ತ ಪಾಟೀಲ್, ಬಬಲೇಶ್ವರ – ಎಂ.ಬಿ.ಪಾಟೀಲ್, ನಾಗಠಾಣ – ಕಾಂತಾ ನಾಯಕ್/ ರಾಜು ಅಲಗೂರ, ಸಿಂದಗಿ–ಅಶೋಕ್ ಮನಗೂಳಿ, ದೇವರಹಿಪ್ಪರಗಿ –ಶರಣಪ್ಪ ಸುಣಗಾರ್/ ಎಸ್.ಆರ್.ಪಾಟೀಲ್, ಮುದ್ದೇಬಿಹಾಳ –ಸಿ.ಎಸ್.ನಾಡಗೌಡ, ವಿಜಯಪುರ – ಎಂಆರ್‌ಟಿ/ಮುಕಬುಲ್ ಭಗವಾನ್, ಬೀದರ್ ದಕ್ಷಿಣ –ಅಶೋಕ್ ಖೇಣಿ, ಬೀದರ್ –ರಹೀಂ ಖಾನ್, ಬಾಲ್ಕಿ– ಈಶ್ವರ್ ಖಂಡ್ರೆ, ಬಸವಕಲ್ಯಾಣ –ವಿಜಯ್ ಸಿಂಗ್, ಹುಮ್ನಾಬಾದ್ – ರಾಜಶೇಖರ್‌ಪಾಟೀಲ್, ಔರಾದ್ –ಭೀಮರಾವ್ ಶಿಂಧೆ, ಕಲಬುರಗಿ ನಗರ –ಖನಿಜಾ ಫಾತಿಮಾ, ಕಲಬುರಗಿ ಗ್ರಾಮೀಣ –ವಿಜಯ್ ಕುಮಾರ್, ಚಿತ್ತಾಪುರ –ಪ್ರಿಯಾಂಕ್, ಜೇವರ್ಗಿ –ಅಜಯ್ ಸಿಂಗ್, ಅಫ್ಜಲಪುರ –ಎಂ.ವೈ.ಪಾಟೀಲ್, ಆಳಂದ – ಬಿ.ಆರ್.ಪಾಟೀಲ್, ಚಿಂಚೋಳಿ –ಸುಭಾಷ್ ರಾಥೋಡ್, ಸೇಡಂ –ಶರಣಪ್ರಕಾಶ್ ಪಾಟೀಲ್.

ಯಾದಗಿರಿ: ಯಾದಗಿರಿ–ಮಾಜಿ ಸಚಿವ ಡಾ.ಮಾಲಕರೆಡ್ಡಿ ಪುತ್ರಿ, ಸುರಪುರ–ರಾಜಾ ವೆಂಕಟಪ್ಪ ನಾಯಕ, ರಾಯಚೂರು–ರವಿ ಭೋಸರಾಜು / ಎನ್.ಎಸ್.ಬೋಸರಾಜು, ಗ್ರಾಮೀಣ –ಬಸನಗೌಡ ದದ್ದಲ್, ದೇವದುರ್ಗ – ಬಿ.ವಿ.ನಾಯಕ್, ಸಿಂಧನೂರು – ಬಸನಗೌಡ ಬಾದರ್ಲಿ/ ಹಂಪನಗೌಡ ಬಾದರ್ಲಿ, ಲಿಂಗಸುಗೂರು– ಡಿ.ಎಸ್.ಹೊಲಗೇರಿ, ಮಸ್ಕಿ – ತುರುವಿಹಾಳ, ಮಾನ್ವಿ – ಹಂಪಯ್ಯ ನಾಯಕ್.

ಕೊಪ್ಪಳ: ಕೊಪ್ಪಳ – ರಾಘವೇಂದ್ರ ಹಿಟ್ನಾಳ್, ಕನಕಗಿರಿ – ಶಿವರಾಜ್ ತಂಗಡಗಿ, ಕುಷ್ಟಗಿ–ಅಮರೇಗೌಡ, ಯಲಬುರ್ಗಾ –ರಾಯರೆಡ್ಡಿ, ಗಂಗಾವತಿ –ಇಕ್ಬಾಲ್ ಅನ್ಸಾರಿ. **ಗದಗ:** ಗದಗ–ಹೆಚ್.ಕೆ.ಪಾಟೀಲ್, ರೋಣ –ಜಿ.ಎಸ್.ಪಾಟೀಲ್, ನರಗುಂದ–ಬಿ.ಆರ್.ಯಾವಗಲ್/ ಸಂಗಮೇಶ್ ಕೊಳ್ಳಿ, ಶಿರಹಟ್ಟಿ –ರಾಮಕೃಷ್ಣ ದೊಡ್ಮನಿ, ನವಲಗುಂದ –ಕೋನರೆಡ್ಡಿ, ಹಾವೇರಿ–ರುದ್ರಪ್ಪ ಲಮಾಣಿ, ಹಾನಗಲ್ –ಶ್ರೀನಿವಾಸ್ ಮಾನೆ, ಶಿಗ್ಗಾಂವಿ– ಸೋಮಣ್ಣ ಬೇವಿನಮರದ/ ಅಜ್ಜಂಪೀರ್ ಖಾದ್ರಿ, ಹಿರೆಕೆರೂರು ಯು.ಬಿ.ಬಣಕಾರ್, ರಾಣೆಬೆನ್ನೂರು – ಕೋಳಿವಾಡ, ಆರ್.ಶಂಕರ್.

ಧಾರವಾಡ: ಹುಬ್ಬಳ್ಳಿ ಪೂರ್ವ–ಪ್ರಸಾದ್ ಅಬ್ಬಯ್ಯ, ಹುಬ್ಬಳ್ಳಿ ಸೆಂಟ್ರಲ್ – ಇಸ್ಮಾಯಲ್ ತಮಟಗಾರ, ಹುಬ್ಬಳ್ಳಿ ಪಶ್ಚಿಮ – ದೀಪಕ್ ಚಿಂಚೋರೆ/ ಕೀರ್ತಿ ಮೊರೆ, ಕಲಘಟಕಿ –ಸಂತೋಷ್ ಲಾಡ್/ ನಾಗರಾಜ್ ಛಬ್ಬಿ, ಕುಂದಗೋಳ – ಕುಸುಮಾ ಶಿವಳ್ಳಿ, ಧಾರವಾಡ ಗ್ರಾಮೀಣ–ವಿನಯ್/ ವಿಜಯ್ ಕುಲಕರ್ಣಿ. **ಶಿವಮೊಗ್ಗ:** ಶಿವಮೊಗ್ಗ ಸಿಟಿ – ಪ್ರಸನ್ನಕುಮಾರ್, ಶಿವಮೊಗ್ಗ ಗ್ರಾಮೀಣ – ಪಲ್ಲವಿ, ನಾರಾಯಣಸ್ವಾಮಿ/ ಶ್ರೀನಿವಾಸ್

ಭದ್ರಾವತಿ –ಸಂಗಮೇಶ್, ಸಾಗರ – ಬೇಳೂರು ಗೋಪಾಲಕೃಷ್ಣ, ಸೊರಬ –ಮಧು ಬಂಗಾರಪ್ಪ, ತೀರ್ಥಹಳ್ಳಿ –ಕಿಮ್ಮನೆ ರತ್ನಾಕರ್, ಶಿಕಾರಿಪುರ –ಗೋಣಿ ಮಹಾಂತೇಶ್. **ಚಿಕ್ಕಮಗಳೂರು:** ಚಿಕ್ಕಮಗಳೂರು – ಗಾಯತ್ರಿ ಶಾಂತೇಗೌಡ/ ವಿಜಯಕುಮಾರ್, ಶೃಂಗೇರಿ– ರಾಜೇಗೌಡ, ಕಡೂರು – ವೈ.ಎಸ್.ವಿ.ದತ್ತಾ/ ಆನಂದ್, ತರಿಕೇರೆ – ಗೋಪಿಕೃಷ್ಣ/ ಶ್ರೀನಿವಾಸ್, ಮೂಡಿಗೆರೆ – ಮೋಟಮ್ಮ, ನಯನಾ ಮೋಟಮ್ಮ.

ಕೋಲಾರ: ಕೆಜಿಎಫ್ – ರೂಪಾ ಶಶಿಧರ್, ಬಂಗಾರಪೇಟೆ – ನಾರಾಯಣಸ್ವಾಮಿ, ಶ್ರೀನಿವಾಸಪುರ – ರಮೇಶ್ ಕುಮಾರ್, ಮುಳಬಾಗಿಲು – ನಾರಾಯಣಸ್ವಾಮಿ/ ಕೊತ್ತನೂರು ಮಂಜು, ಕೋಲಾರ – ಸಿ.ಆರ್.ಮನೋಹರ್/ ಗೋವಿಂದೇ ಗೌಡ, ಮಾಲೂರು – ನಂಜೇಗೌಡ, ಶಾಸಕರ ಪುತ್ರ. **ಚಿಕ್ಕಬಳ್ಳಾಪುರ:** ಶಿಡ್ಲಘಟ್ಟ – ವಿ.ಮುನಿಯಪ್ಪ, ಚಿಕ್ಕಬಳ್ಳಾಪುರ – ವಿನಯ್ ಶ್ಯಾಂ/ ಕೊತ್ತನೂರು ಮಂಜು, ಚಿಂತಾಮಣಿ – ಎಂ.ಸಿ.ಸುಧಾಕರ್, ಗೌರಿಬಿದನೂರು – ಎನ್.ಹೆಚ್.ಶಿವಶಂಕರರೆಡ್ಡಿ, ಬಾಗೇಪಲ್ಲಿ – ಸುಬ್ಬಾರೆಡ್ಡಿ. **ರಾಮನಗರ:** ರಾಮನಗರ – ಇಕ್ಬಾಲ್ ಹುಸೇನ್, ಮಾಗಡಿ – ಹೆಚ್.ಸಿ.ಬಾಲಕೃಷ್ಣ, ಚನ್ನಪಟ್ಟಣ – ಪ್ರಸನ್ನ, ಕನಕಪುರ – ಡಿ.ಕೆ.ಶಿವಕುಮಾರ್.

ಮೈಸೂರು ಮಿತ್ರ ಸೋಮವಾರ 12 ಡಿಸೆಂಬರ್ 2022

ಜನಮನ ಸೆಳೆದ 'ಕೂರ್ಗ್ ಕಾಫಿ ಉತ್ಸವ'

12 ಸಾವಿರಕ್ಕೂ ಹೆಚ್ಚು ಮಂದಿ ಭಾಗಿ, ಸ್ವಾದಿಷ್ಟ ಕಾಫಿ ಸವಿದು ಕಳೆತುಂಬಿದರು



ಮಡಿಕೇರಿ, ಡಿ.11– ಕಾಫಿಯ ಆಂತರಿಕ ಬಳಕೆ ಹೆಚ್ಚಿಸುವುದು ಮತ್ತು ಮೌಲ್ಯವರ್ಧಿತ ಕಾಫಿ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವ ಉದ್ದೇಶದಿಂದ ಕಾಫಿ ಮಂಡಳಿ ಹಾಗೂ ತೋಟಗಾರಿಕಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಗ್ರೇಟರ್ ರಾಜಾ ಸೀಟಿನಲ್ಲಿ ಆಯೋಜಿಸಲಾಗಿದ್ದ 'ಕೂರ್ಗ್ ಕಾಫಿ ಉತ್ಸವ' ಜನಮನ ಸೆಳೆಯುವಲ್ಲಿ ಸಫಲವಾಯಿತು.

ವಾರಾಂತ್ಯದಲ್ಲಿ 2 ದಿನಗಳ ಕಾಲ ನಡೆದ ಕಾರ್ಯಕ್ರಮಕ್ಕೆ 12 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿ ಕಾಫಿಯ ಕುರಿತು ಮಾಹಿತಿ ಪಡೆದರು. ಮಂಜು ಮುಸುಕಿದ ಚಳಿಯ ವಾತಾವರಣದೊಳಗೆ ಸಾವಿರಾರು ಸಂಖ್ಯೆಯಲ್ಲಿ ಗ್ರೇಟರ್ ರಾಜಾಸೀಟಿನಲ್ಲಿ ಜಮಾಯಿಸಿದ ಸ್ಥಳೀಯರ ಸೇರಿ ಪ್ರವಾಸಿಗರು, ಸ್ಥಳದಲ್ಲೇ ವಿವಿಧ ಪ್ರಸಿದ್ಧ ಕಂಪೆನಿಗಳ ಸ್ವಾದಿಷ್ಟ ಕಾಫಿಯನ್ನು ಸವಿಯುವ ಮೂಲಕ ಕಾಫಿ ಉತ್ಸವಕ್ಕೆ ಕಳೆ ತುಂಬಿದರು.

ಗ್ರೇಟರ್ ರಾಜಾಸೀಟಿನ 5 ವ್ಯೂವ್ ಪಾಯಿಂಟ್‌ಗಳು, ಪಾದಚಾರಿ ಮಾರ್ಗವನ್ನು ವ್ಯವಸ್ಥಿತವಾಗಿ ಬಳಸಿಕೊಂಡ ಕಾಫಿ ಮಂಡಳಿ ಮತ್ತು ತೋಟಗಾರಿಕಾ ಇಲಾಖೆ ಅಲ್ಲಿಯೇ ತಾತ್ಕಾಲಿಕ ಮಳಿಗೆಗಳನ್ನು ನಿರ್ಮಿಸಿ ಕಾಫಿ ಉತ್ಸವದ ಆಕರ್ಷಣೆ ಹೆಚ್ಚಿಸಿತ್ತು. ಇದೇ ಸ್ಥಳದಲ್ಲಿ ರಾಜ್ಯ ಮತ್ತು ದೇಶದ ವಿವಿಧ ಕಾಫಿ ಉತ್ಪನ್ನ ಸಂಸ್ಥೆಗಳಿಗೆ ತಮ್ಮ ಪ್ರಸಿದ್ಧ ಬ್ರಾಂಡ್‌ಗಳ ಪ್ರದರ್ಶನ ಹಾಗೂ ಮಾರಾಟಕ್ಕೂ ಅವಕಾಶ ನೀಡಿದ್ದರು.

ರುಚಿಕರ ಕಾಫಿ, ವಿವಿಧ ಬ್ರಾಂಡ್‌ಗಳ ಕಾಫಿ ಪುಡಿ, ಕಾಫಿಯ ಮೌಲ್ಯವರ್ಧಿತ ಉತ್ಪನ್ನಗಳು, ಜೇನು, ವೈನ್, ಫಿಲ್ಟರ್, ಕೃಷಿ ಉಪಕರಣಗಳು, ಸಾವಯವ ಗೊಬ್ಬರ, ಹನಿ ನೀರಾವರಿ ಉಪಕರಣಗಳ ಪ್ರದರ್ಶನ ಮತ್ತು ಮಾರಾಟಕ್ಕೂ ಅವಕಾಶ ನೀಡಲಾಗಿತ್ತು ಅರೆಬಿಕಾ, ರೋಬಸ್ಟಾ, ಸಿವೆಟ್ ಕಾಫಿ ಬೀಜ ಸಹಿತ ವಿವಿಧ ತಳಿಗಳ ಕಾಫಿ ಬೀಜಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ಈ ಹಿನ್ನೆಲೆಯಲ್ಲಿ ಕಾಫಿ ಉತ್ಸವ ವೀಕ್ಷಿಸಲು ಗ್ರೇಟರ್ ರಾಜಾ ಸೀಟಿಗೆ ಆಗಮಿಸಿದ ಮಂದಿ ವಿವಿಧ ವಸ್ತುಗಳನ್ನು ಖರೀದಿಸುತ್ತಿದ್ದುದು ಕಂಡು ಬಂತು.

ಉತ್ಸವ ಉದ್ಘಾಟನೆ: ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್ ಅವರು 2ನೇ ದಿನದ ಕಾಫಿ ಉತ್ಸವಕ್ಕೆ ಕಾಫಿಯನ್ನು ಕಪ್‌ಗೆ ಬೆರೆಸುವ ಮೂಲಕ ಉದ್ಘಾಟಿಸಿದರು. ಬಳಿಕ ವಿವಿಧ ಮಳಿಗೆಗಳಿಗೆ ತೆರಳಿ ವೀಕ್ಷಣೆ ನಡೆಸಿದ ಅಪ್ಪಚ್ಚು ರಂಜನ್, ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ, ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರುಗಳು ಕಾಫಿ ಕುಡಿಯುವ ಮೂಲಕ ಕಾಫಿಯ ಸ್ವಾದ ಸವಿದರು.

ಇಂತಹ ಮೇಳಗಳ ಮೂಲಕ ಆಂತರಿಕವಾಗಿ ಕಾಫಿಯ ಬಳಕೆ ಏರಿಕೆ, ಉತ್ತಮ ಮಾರುಕಟ್ಟೆ ಧಾರಣೆ, ವಿದೇಶಿ ರಫ್ತು ಹಾಗೂ ಕಾಫಿ ಬೆಳೆ ಕ್ಷೇತ್ರ ವಿಸ್ತಾರವಾಗಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಂದರ್ಭ ಕಾಫಿ ಮಂಡಳಿ ಸಹಾಯಕ ನಿರ್ದೇಶಕ ಚಂದ್ರಶೇಖರ್, ತೋಟಗಾರಿಕಾ ಇಲಾಖೆ ಸಹಾಯಕ ನಿರ್ದೇಶಕ ಐ.ಆರ್. ಪ್ರಮೋದ್, ಕಾಫಿ ಮಂಡಳಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಏ.16ರಿಂದ 'ಬಾಳೆಯಡ ಕ್ರಿಕೆಟ್ ನಮ್ಮೆ–2023' ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ



ಮಡಿಕೇರಿ, ಡಿ.11– ಕೊಡವ ಕ್ರಿಕೆಟ್ ಅಕಾಡೆಮಿ ಹಾಗೂ ಬಾಳೆಯಡ ಕುಟುಂಬಸ್ಥರ ಸಹಯೋಗದಲ್ಲಿ 21ನೇ ವರ್ಷದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ 'ಬಾಳೆಯಡ ಕ್ರಿಕೆಟ್ ನಮ್ಮೆ–2023' ಏ.16ರಿಂದ ಮೇ 7ರವರೆಗೆ ನಡೆಯಲಿದೆ ಎಂದು ಕ್ರೀಡಾ ಸಮಿತಿ ಅಧ್ಯಕ್ಷ ಹಾಗೂ ಹಾಕಿ ಮಾಜಿ ಒಲಂಪಿಯನ್ ಲೆಫ್ಟಿನೆಂಟ್ ಕರ್ನಲ್ ಬಾಳೆಯಡ ಸುಬ್ರಮಣಿ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 20 ವರ್ಷಗಳಿಂದ ಕೊಡವ ಕ್ರಿಕೆಟ್ ಅಕಾಡೆಮಿ ಸಹಯೋಗದಲ್ಲಿ ಕೊಡವ ಕುಟುಂಬ ತಂಡಗಳ ನಡುವೆ ಪಂದ್ಯಾವಳಿಯನ್ನು ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ 22 ದಿನಗಳ ಕಾಲ ನಡೆಯಲಿರುವ ಪಂದ್ಯಾವಳಿಗಾಗಿ ಸುಮಾರು 30 ಲಕ್ಷ ರೂ. ವೆಚ್ಚ ಮಾಡಲಾಗುತ್ತಿದೆ. ಎರಡು ಮೈದಾನಗಳಲ್ಲಿ ನಡೆಯುವ ಪಂದ್ಯಾವಳಿಯಲ್ಲಿ 250 ಕುಟುಂಬಗಳು ಭಾಗವಹಿಸುವ ನಿರೀಕ್ಷೆ ಇದೆ. ಜನವರಿ ತಿಂಗಳಿನಲ್ಲಿ ಪಂದ್ಯಾವಳಿಯ ಲೋಗೋ ಬಿಡುಗಡೆಯಾಗಲಿದೆ. ಕೊಡಗಿನ ಪ್ರಮುಖ ಗ್ರಾಮಗಳಲ್ಲಿ ನೋಂದಾವಣಿ ಕೇಂದ್ರಗಳನ್ನು ತೆರೆಯಲಾಗಿದ್ದು, ಆಸಕ್ತರು ಮೈದಾನ ಶುಲ್ಕ ರೂ.1500 ಪಾವತಿಸಿ ಹೆಸರು ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು.

ಪಂದ್ಯಾವಳಿಯ ಯಶಸ್ಸಿಗಾಗಿ ಒಂದು ಸಮಿತಿ ಮತ್ತು ಉಪಸಮಿತಿ ರಚಿಸಲಾಗಿದ್ದು, ವಿಜೇತ ತಂಡಗಳಿಗೆ ಆಕರ್ಷಕ ನಗದು ಹಾಗೂ ಟ್ರೋಫಿಯನ್ನು ನೀಡಲಾಗುವುದು. ಅಲ್ಲದೆ ವೈಯಕ್ತಿಕ ಪ್ರೋತ್ಸಾಹಕ ಬಹುಮಾನಗಳನ್ನು ಕೂಡ ನೀಡಲಾಗುವುದು ಎಂದು ತಿಳಿಸಿದರು. ಕ್ರಿಕೆಟ್ ಹಬ್ಬ ಮುಗಿದ ನಂತರ ಯುವಕರಿಗೆ ಬೇಸಿಗೆ ತರಬೇತಿ ಶಿಬಿರವನ್ನು ಆಯೋಜಿಸಲಾಗುವುದು. ಓಪನ್ ಕ್ರಿಕೆಟ್ ಟೂರ್ನಮೆಂಟ್ ನಡೆಸುವ ಬಗ್ಗೆಯೂ ಚಿಂತನೆ ಇದೆ. ಕೊಡಗಿನ ಬಹುತೇಕ ಯುವಕರು ಕ್ರಿಕೆಟ್ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದು, ಇವರನ್ನು ಪ್ರತಿಯೊಬ್ಬರು ಪ್ರೋತ್ಸಾಹಿಸಿ ರಾಜ್ಯ ಮತ್ತು ರಾಷ್ಟ್ರಮಟ್ಟಕ್ಕೆ ತಲುಪಿಸುವ ಪ್ರಯತ್ನ ಮಾಡಬೇಕೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಾಳೆಯಡ ಕ್ರಿಕೆಟ್ ನಮ್ಮೆ ಕ್ರೀಡಾ ಸಮಿತಿ ಕಾರ್ಯದರ್ಶಿ ಸದಾ ಕುಶಾಲಪ್ಪ, ಸಲಹೆಗಾರ ಕರುಣ್ ಕಾಳಪ್ಪ, ಪ್ರಮುಖರಾದ ಅಂಜು ಸುಬ್ರಮಣಿ, ದಿವ್ಯ ಮಂದಪ್ಪ ಹಾಗೂ ಪಂದ್ಯಾವಳಿಯ ನಿರ್ದೇಶಕ ಪ್ರತೀಶ್ ಪೂವಯ್ಯ ಉಪಸ್ಥಿತರಿದ್ದರು.

ಪುತ್ತರಿ ವೆಳ್ಳಾಟಂ ಆಚರಣೆ



ವಿರಾಜಪೇಟೆ, ಡಿ.11– ವಿರಾಜಪೇಟೆಯ ಅರಸು ನಗರದ ಶ್ರೀ ಮುತ್ತಪ್ಪ ದೇವಸ್ಥಾನದಲ್ಲಿ ದೇವರ ಪುತ್ತರಿ ವೆಳ್ಳಾಟಂ ಮತ್ತು ಪೂಜಾ ಕಾರ್ಯವನ್ನು ಅರಸು ನಗರದ ನಿವಾಸಿಗಳಾದ ಜಯ ಗುರುಸ್ವಾಮಿ ಕುಟುಂಬದವರು ನಡೆಸಿಕೊಟ್ಟರು.

ದೇವಸ್ಥಾನದಲ್ಲಿ ಬೆಳಗ್ಗೆಯಿಂದ ದೇವರಿಗೆ ವಿಶೇಷ ಪೂಜೆಗಳು ನಡೆದ ಬಳಿಕ ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆವರೆಗೂ ಶ್ರೀ ಮುತ್ತಪ್ಪನ ಪುತ್ತರಿ ವೆಳ್ಳಾಟಂ ನಡೆಯಿತು. ಈ ಸಂದರ್ಭದಲ್ಲಿ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು ನಗರ ಹಾಗೂ ಇತರೆಡೆಗಳಿಂದಲು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪೂಣಚ್ಚ ನಿಧನ



ನಾಪೋಕ್ಲು, ಡಿ.11– ಬಲ್ಲಮಾವಟಿ ಗ್ರಾಮದ ಹೊಸೋಕ್ಲು ದಿವಂಗತ ಭೀಮಯ್ಯ ಅವರ ಪುತ್ರ ಪೂಣಚ್ಚ (60) ಬಾನುವಾರ ಬೆಳಗ್ಗೆ ಮಂಗಳೂರು ಆಸ್ಪತ್ರೆಯಲ್ಲಿ ನಿಧನರಾದರು.

ಇವರ ಅಂತ್ಯಕ್ರಿಯೆ ಡಿ.12ರಂದು ಬೆಳಗ್ಗೆ ಮೃತರ ಸ್ವಗ್ರಾಮದಲ್ಲಿ ನೆರವೇರಲಿದ್ದು, ಮೃತರು ಪತ್ನಿ ಪಾರ್ವತಿ, ಪುತ್ರ ಅಜಿತ್ ಹಾಗೂ ರೋಹಿತ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಬಗ್ಗೆ ಸರ್ಕಾರದ ಮೌಖಿಕ ಆದೇಶ

ಲಿಖಿತ ಆದೇಶ ಬರುವವರೆಗೂ ಕಾಯಿರಿ: ಸೆಸ್ಕ್ ಎಂಡಿ

ತಮ್ಮನ್ನು ಭೇಟಿ ಮಾಡಿದ ಸುಂಟಿಕೊಪ್ಪ ಬೆಳೆಗಾರರಿಗೆ ಮನವಿ



ಮಡಿಕೇರಿ, ಡಿ.11– ಬೆಳೆಗಾರರ 10 ಹೆಚ್.ಪಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವುದಾಗಿ ಸರ್ಕಾರ ಘೋಷಿಸಿದ್ದು, ಯಾವುದೇ ಕಾರಣಕ್ಕೂ ಬಿಲ್ ಪಾವತಿಗೆ ಒತ್ತಡ ಹೇರಬಾರದು ಮತ್ತು ವಿದ್ಯುತ್ ಕಡಿತಗೊಳಿಸಬಾರದೆಂದು ಸುಂಟಿಕೊಪ್ಪದ ಬೆಳೆಗಾರರು ಒತ್ತಾಯಿಸಿದ್ದಾರೆ.

ಬೆಳೆಗಾರರ ನಿಯೋಗ ಶಾಸಕದ್ವಯರಾದ ಎಂ.ಪಿ.ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ ಹಾಗೂ ಮೈಸೂರು ವಿಭಾಗದ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ಅವರುಗಳನ್ನು ಭೇಟಿಯಾಗಿ ಪಂಪ್‌ಸೆಟ್‌ಗಳ ವಿದ್ಯುತ್ ಕಡಿತಕ್ಕೆ ಮುಂದಾಗುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭ ಮಾತನಾಡಿದ ಜಯವಿಭವ ಸ್ವಾಮಿ, ಸರ್ಕಾರದಿಂದ ಮೌಖಿಕ ಆದೇಶವಷ್ಟೇ ಬಂದಿದೆ, ಲಿಖಿತ ಆದೇಶ ಬರುವವರೆಗೆ ಸಹಕರಿಸಿ ಎಂದು ಮನವಿ ಮಾಡಿದರು.

ಬೆಳೆಗಾರರು ಮಾತನಾಡಿ ಸರ್ಕಾರದಿಂದ ಲಿಖಿತ ಆದೇಶ ಬರುವವರೆಗೆ ವಿದ್ಯುತ್ ಬಿಲ್ ಪಾವತಿಗಾಗಿ ಒತ್ತಡ ಹೇರಬಾರದು ಮತ್ತು ವಿದ್ಯುತ್ ಕಡಿತಕ್ಕೆ ಮುಂದಾಗಬಾರದು ಎಂದು ಒತ್ತಾಯಿಸಿದರು. ಅಕಾಲಿಕ ಮಳೆಯಿಂದ ಬೆಳೆಗಾರರು ನಷ್ಟ ಅನುಭವಿಸುತ್ತಿದ್ದಾರೆ. ಬಾಕಿ ಬಿಲ್ ಪಾವತಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾಫಿ ಬೆಳೆಗಾರರಾದ ಚಂದ್ರಶೇಖರ್ ಹೇರೂರು, ಕ್ಲಿವ ಪೊನ್ನಪ್ಪ, ದಾಸಂಡ ರಮೇಶ್ ಚೆಂಗಪ್ಪ, ಗೌತಮ್ ಎಂ.ಎನ್, ಅರುಣ್ ಚೆಂಗಪ್ಪ, ಅರ್ಪಿತ್, ರಮೇಶ್ ಬಿ.ಜಿ, ಜಗನಾಥ್ ಮತ್ತಿತರ ಪ್ರಮುಖರು ನಿಯೋಗದಲ್ಲಿದ್ದರು.

ಕೊಡಗು ಜಿಲ್ಲೆಯ ಎರಡು ವಿಧಾನಸಭೆ ಕ್ಷೇತ್ರದಲ್ಲೂ ಸಿಪಿಐ ಸ್ಪರ್ಧೆ ಖಚಿತ



ಸಿದ್ದಾಪುರ, ಡಿ.11– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ ಕೊಡಗಿನ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದು ಖಚಿತ ಎಂದು ಜಿಲ್ಲಾ ಕಾರ್ಯದರ್ಶಿ ಕೆ.ವಿ.ಸುನಿಲ್ ತಿಳಿಸಿದರು.

ಸಿದ್ದಾಪುರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕೊಡಗು ಜಿಲ್ಲೆಯಲ್ಲಿ ಬಿಜೆಪಿ ಕಳೆದ ಮೂರು ದಶಕಗಳಿಂದ ಅಭಿವೃದ್ಧಿ ಕಡೆಗಣಿಸಿ ಅಧಿಕಾರ ಅನುಭವಿಸಿದ ಇಬ್ಬರು ಶಾಸಕರು ಜಿಲ್ಲೆಯ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸದೆ ಜಾತಿ ಧರ್ಮದ ಹೆಸರಿನಲ್ಲಿ ಗುರುತಿಸಿಕೊಂಡಿದ್ದಾರೆ ಹೊರತು ಶಾಶ್ವತವಾದ ಯಾವುದೇ ಅಭಿವೃದ್ಧಿ ಕಾರ್ಯ ಜಿಲ್ಲೆಗೆ ಮಾಡಲಿಲ್ಲ. ರೈತರು, ಕಾರ್ಮಿಕರು, ಬೆಳೆಗಾರರು, ಸಾಮಾನ್ಯ ಜನರು ಆತಂಕದ ನಡುವೆ ಸಂಕಷ್ಟದ ಜೀವನ ನಡೆಸುವಂತಾಗಿದೆ. ನಿರಂತರ ಕಾಡುಪ್ರಾಣಿಗಳ ಹಾವಳಿಯಿಂದ ಕೃಷಿ ಫಸಲುಗಳು ನಾಶವಾಗುತ್ತಿದ್ದರು ಶಾಶ್ವತವಾದ ಯೋಜನೆಯನ್ನು ರೂಪಿಸದೆ ಕಾರ್ಮಿಕರು, ಬೆಳಗಾರರ ಬೇಡಿಕೆಗಳನ್ನ ಕಡೆಗಣಿಸಿದ್ದಾರೆ ಎಂದರು.

ಕಸ್ತೂರಿರಂಗನ್ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವ ಜಿಲ್ಲೆಯ ಜನರಿಗೆ ಕುಡಿಯುವ ನೀರು, ರಸ್ತೆ, ನಿವೇಶನ, ಬೆಳೆ ಹಾನಿ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲರಾಗಿದ್ದಾರೆ. ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದರೂ ಇಲ್ಲಿನ ಜನಪ್ರತಿನಿಧಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸದೆ ಶಾಂತಿಯುತ ಜಿಲ್ಲೆಯಲ್ಲಿ ಅಶಾಂತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಅವರು ಈ ಬಗ್ಗೆ ಪ್ರತಿಪಕ್ಷಗಳಾದ ಕಾಂಗ್ರೆಸ್, ಹಾಗೂ ಜೆಡಿಎಸ್ ಬಿಜೆಪಿಯ ದುರಾಡಳಿತವನ್ನು ಪ್ರಶ್ನಿಸಲು ಮುಂದಾಗದೆ ಮೌನವಹಿಸಿದೆ ಎಂದರು.

ಈ ಸಂದರ್ಭದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಮಂಡಳಿ ಸದಸ್ಯ ಧರ್ಮರಾಜ್, ಜಿಲ್ಲಾ ಸಹ ಕಾರ್ಯದರ್ಶಿ ಗಳಾದ ರಫೀಕ್ ನವಲಗುಂದ, ಹೆಚ್.ಎಂ.ಸೋಮಪ್ಪ, ರಮೇಶ್ ಮಾಯಮುಡಿ, ತೋಟ ಕಾರ್ಮಿಕರ ಸಂಘಟನೆ ಜಿಲ್ಲಾ ಉಪಾಧ್ಯಕ್ಷ ಎನ್.ಮಣಿ ಹಾಜರಿದ್ದರು.

ಜಿಲ್ಲೆಯಾದ್ಯಂತ ಜಿಟಿ–ಜಿಟಿ ಮಳೆ

ಸಿಎಂ ಭೇಟಿ ಸಿದ್ಧತಾ ಕಾರ್ಯಕ್ಕೆ ಅಡ್ಡಿ



ಚಾಮರಾಜನಗರ, ಡಿ.11– ಮಾಂಡೂಸ್ ಚಂಡಮಾರುತದ ಪರಿಣಾಮ ಕಳೆದೆರಡು ದಿನಗಳಿಂದ ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ ಜಿಲ್ಲಾದ್ಯಂತ ಜಿಟಿ–ಜಿಟಿ ಮಳೆಯಾಗುತ್ತಿದ್ದು, ಡಿ.13ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ ಮುಖ್ಯಮಂತ್ರಿಗಳ ಕಾರ್ಯಕ್ರಮದ ಸಿದ್ಧತೆಗೆ ಅಡ್ಡಿಯುಂಟಾಗಿದೆ.

ಶನಿವಾರ ರಾತ್ರಿಯಿಂದ ಬಿಟ್ಟುಬಿಡದೆ ಒಂದೇ ಸಮನೆ ಸುರಿಯುತ್ತಿರುವ ಮಳೆಯಿಂದ ಜಿಲ್ಲಾ ಕ್ರೀಡಾಂಗಣದ ಪೆಂಡಾಲ್ ಕೆಸರುಮಯವಾಗಿದ್ದು, ಬೆಳಗ್ಗೆಯಿಂದಲೂ ಕ್ರೀಡಾಂಗಣದಲ್ಲಿ ಸಂಗ್ರಹವಾಗಿರುವ ನೀರನ್ನು ಹೊರಹಾಕುವ ಕೆಲಸ ಭರದಿಂದ ಸಾಗಿದೆ.

ಮುಖ್ಯಮಂತ್ರಿಗಳ ಕಾರ್ಯಕ್ರಮಕ್ಕೆ ಇನ್ನೊಂದೇ ದಿನ ಬಾಕಿಯಿದೆ. ಆದರೆ, ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಡಿ.14 ರವರೆಗೂ ಮಳೆಯಾಗಲಿದೆ. ಹೀಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸುವ ಕಾರ್ಯಕ್ರಮವನ್ನು ಕ್ರೀಡಾಂಗಣದಲ್ಲಿ ನಡೆಸಲು ಸಾಧ್ಯವೇ? ಎಂಬ ಪ್ರಶ್ನೆ ಉದ್ಭವಾಗಿದೆ.

ಡಿ.12ರಂದು ಮುಖ್ಯಮಂತ್ರಿಗಳು ಗುಜರಾತ್‌ಗೆ ಭೇಟಿ ನೀಡುವ ಕಾರ್ಯಕ್ರಮ ದಿಢೀರ್ ನಿಗದಿಯಾದ ಹಿನ್ನೆಲೆಯಲ್ಲಿ ಅಂದಿನ ಜಿಲ್ಲಾ ಪ್ರವಾಸವನ್ನು ಮುಂದೂಡಲಾಯಿತು. ಈಗ ಜಿಲ್ಲೆಯಲ್ಲಿ ಜಿಟಿ–ಜಿಟಿ ಮಳೆ ಹಾಗೂ ಮೋಡ ಕವಿದ ವಾತಾವರಣ ಇರುವುದರಿಂದ ಆತಂಕ ಮನೆ ಮಾಡಿದೆ.

ಯಳಂದೂರಿನಲ್ಲಿ ಅಧಿಕ ಮಳೆ: ಯಳಂದೂರು ತಾಲೂಕಿನ ವಿವಿಧೆಡೆ ಶನಿವಾರ ಹಾಗೂ ಭಾನುವಾರ ಅತಿ ಹೆಚ್ಚು ಮಳೆಯಾಗಿದೆ. ತಾಲೂಕಿನ ಅಗರ ಹೋಬಳಿಯಲ್ಲಿ 6.54ಸೆಂ.ಮೀ.ನಷ್ಟು ಮಳೆಯಾಗಿದೆ. ಉಳಿದಂತೆ ಜಿಲ್ಲೆಯ ಕೊಳ್ಳೇಗಾಲ, ಹನೂರು, ಮಲೆ ಮಹದೇಶ್ವರಸ್ವಾಮಿ ಬೆಟ್ಟ, ಗುಂಡ್ಲುಪೇಟೆ ಹಾಗೂ ಚಾಮರಾಜನಗರ ವ್ಯಾಪ್ತಿಯಲ್ಲಿಯೂ ಮಳೆಯಾಗುತ್ತಿದ್ದು, ಭಾನುವಾರ ಸಂಜೆ 5 ರಿಂದ ಗಂಟೆಗೂ ಹೆಚ್ಚು ಕಾಲ ಧಾರಾಕಾರ ಮಳೆಯಾಗಿತು. ಒಟ್ಟಾರೆ ಜಿಲ್ಲೆಯಲ್ಲಿ ಎರಡು ದಿನಗಳಿಂದ ಸೂರ್ಯನ ದರ್ಶನವಿಲ್ಲದೇ ಎಲ್ಲೆಡೆ ಮೋಡ ಕವಿದ ವಾತಾವರಣ ನಿರ್ಮಾಣವಾಗಿದೆ.

ಕಟಾವಿಗೆ ಅಡ್ಡಿ: ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಭತ್ತ ಕಟಾವಿನ ಹಂತಕ್ಕೆ ಬಂದಿದ್ದು, ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಕೊಯ್ಲಿಗೆ ಅಡ್ಡಿಯಾಗಿದ್ದು, ರೈತರು ಆತಂಕಕ್ಕೊಳಗಾಗಿದ್ದಾರೆ.

ಐವರು ದಂತ ಚೋರರ ಬಂಧನ: ದಂತ ವಶ

ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಮಿಂಚಿನ ಕಾರ್ಯಾಚರಣೆ



ಗುಂಡ್ಲುಪೇಟೆ, ಡಿ.11– ಇಲ್ಲಿನ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಮಿಂಚಿನ ಕಾರ್ಯಾಚರಣೆ ನಡೆಸಿ ಐವರು ಅಂತರಾಜ್ಯ ದಂತಚೋರರನ್ನು ಬಂಧಿಸಿ, ಎರಡು ದಂತಗಳನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಘಟನೆಯ ವಿವರ: ಪಟ್ಟಣದ ಹೊರವಲಯದ ಊಟಿ ರಸ್ತೆ ಬಸವಾಪುರ ಗೇಟ್ ಬಳಿಯ ಒಂಟೆ ಫಾರ್ಮ್ ಹತ್ತಿರ ಆನೆಯ ಎರಡು ದಂತಗಳನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಖಚಿತ ಮಾಹಿತಿಯ ಮೇರೆಗೆ ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್ ಮಾರ್ಗದರ್ಶನದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ.ರವೀಂದ್ರ ಮತ್ತು ಆರ್‌ಎಫ್‌ಒ ಎನ್.ಪಿ.ನವೀನ್‌ಕುಮಾರ್ ನೇತೃತ್ವದಲ್ಲಿ ಹುಲಿಸಂರಕ್ಷಣಾ ದಳದ ಸಿಬ್ಬಂದಿಗಳು ಮಿಂಚಿನ ಕಾರ್ಯಾಚರಣೆ ನಡೆಸಿ ಮಾಲು ಸಮೇತ ಮೂವರು ಆರೋಪಿಗಳನ್ನು ಮತ್ತು ಹುಂಡೈ ಕಾರನ್ನು ವಶಕ್ಕೆ ಪಡೆದರು.

ಕಾರಿ(ಟಿಎನ್ 43– ಕೆ 9367)ನಲ್ಲಿ ಬಚ್ಚಿಟ್ಟಿದ್ದ ಆನೆಯ ಎರಡು ದಂತಗಳನ್ನು ವಶಕ್ಕೆ ಪಡೆದರು. ಕಾರಿನಲ್ಲಿದ್ದ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಆನೆಗಟ್ಟಿ ಗ್ರಾಮದ ವಾಸಿಗಳಾದ ರಂಗಸ್ವಾಮಿ(35), ಸೊಕ್ಕನಹಳ್ಳಿ ಗ್ರಾಮದ ಸಂಜೀವ್ ಕುಮಾರ್(41), ಮೈನಲ್ಲೈ ಗ್ರಾಮದ ಎನ್.ವಿನೂತ್(36) ಎಂಬ ಮೂವರು ಆರೋಪಿಗಳನ್ನು ಸ್ಥಳದಲ್ಲೇ ಬಂಧಿಸಿ ಆರೋಪಿಗಳಿಂದ ಆನೆಯ ಎರಡು ದಂತಗಳನ್ನು ವಶಕ್ಕೆ ಪಡೆದರು.

ನಂತರ ಪ್ರಕರಣ ದಾಖಲಿಸಿಕೊಂಡ ಅರಣ್ಯಾಧಿಕಾರಿಗಳು ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದ ಸಂದರ್ಭದಲ್ಲಿ ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಕೊಯಮತ್ತೂರು ಜಿಲ್ಲೆಯ ವಿನಾಯಗಪುರಂನ ವಾಸಿಗಳಾದ ಕತಿರೇಸನ್(45) ಎಂಬುವವನನ್ನು, ತಮಿಳುನಾಡಿನ ಮಸಣಿಗುಡಿ ಹಾಗೂ ತಿರುಪೂರ್ ಜಿಲ್ಲೆಯ ಕೊಂಡಂಪತಿಯ ಸೆಲ್ವನಾಯಗಂ (40) ಎಂಬ ವ್ಯಕ್ತಿಯನ್ನು ಪಟ್ಟಣದ ಬಸ್‌ನಿಲ್ದಾಣದಲ್ಲಿ ಬಂಧಿಸಿದರು. ಈ ಪ್ರಕರಣದಲ್ಲಿ ಒಟ್ಟು ಐವರ ವಿರುದ್ಧ ಈಗ ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಉಪವಲಯಾರಣ್ಯಾಧಿಕಾರಿಗಳಾದ ಮುದ್ದುರಾಜ್, ಭರತ್, ಕಿರಣ್ ಕುಮಾರ್, ರಮೇಶ್ ಮಠಪತಿ, ಶ್ರೀಪಾಲ್, ಶಿವಕುಮಾರ್, ಪ್ರವೀಣ್ ಕುಮಾರ್, ಸಿದ್ದು ಅರಿ, ಅರಣ್ಯ ರಕ್ಷಕರಾದ ನಾಗೇಂದ್ರ ನಾಗೇಶ, ಕುಮಾರ್, ಅಭಿಲಾಷ್, ಪರಸಪ್ಪ, ಶಂಕರ್, ಶ್ರೀಕಾಂತ್, ಚಾಲಕರಾದ ರಾಘವೇಂದ್ರ ಅಬ್ದುಲ್ ಹನೀಫ್, ಸುರೇಶ್ ಭಾಗಿಯಾಗಿದ್ದರು.

ಡಿ.15ರಂದು ಜಿಲ್ಲಾ ಬಿಜೆಪಿ ನೂತನ ಕಚೇರಿ ಉದ್ಘಾಟನೆ

ಚಾಮರಾಜನಗರ, ಡಿ.11– ನಗರದ ಕುಲುಮೆ ರಸ್ತೆಯ ವಿದ್ಯಾನಗರದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಜಿಲ್ಲಾ ಬಿಜೆಪಿ ಕಚೇರಿಯನ್ನು ಡಿ.15ರಂದು ಉದ್ಘಾಟಿಸಲಾಗುವುದು ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಆರ್.ಸುಂದರ್ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಅಂದು ಚಾಮರಾಜನಗರ ಜಿಲ್ಲೆ ಸೇರಿದಂತೆ ರಾಜ್ಯದ 15 ಜಿಲ್ಲೆಗಳಲ್ಲಿ ಪಕ್ಷದ ಕಚೇರಿಗಳನ್ನು ವರ್ಚುವಲ್ ಮೂಲಕ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಉದ್ಘಾಟಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಿಎಂ ಕಾರ್ಯಕ್ರಮ ಮುಂದೂಡಿಕೆ: ಜಿಲ್ಲೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲು ಜಿಲ್ಲೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗಮಿಸಬೇಕಾಗಿದ್ದ ಕಾರ್ಯಕ್ರಮವನ್ನು ಡಿ.12ರ ಬದಲು ಡಿ.13ರಕ್ಕೆ ಮುಂದೂಡಲಾಗಿದೆ ಎಂದು ತಿಳಿಸಿದರು.


ಗುಜರಾತ್‌ನಲ್ಲಿ ನೂತನ ಮುಖ್ಯಮಂತ್ರಿಗಳ ಪದಗ್ರಹಣ ಕಾರ್ಯಕ್ರಮ ನಡೆಯುತ್ತಿದ್ದು, ಈ ಕಾರ್ಯಕ್ರಮಕ್ಕೆ ಬಿಜೆಪಿಯ ಎಲ್ಲಾ ಮುಖ್ಯಮಂತ್ರಿಗಳು ಪಾಲ್ಗೊಳ್ಳಬೇಕೆಂದು ಹೈಕಮಾಂಡ್ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಡಿ.12ರಂದು ಗುಜರಾತ್‌ಗೆ ತೆರಳುತ್ತಿದ್ದು, ಚಾಮರಾಜನಗರ ಕಾರ್ಯಕ್ರಮ ಡಿ.13ರಂದು ನಡೆಯಲಿದೆ ಎಂದು ಮಾಹಿತಿ ನೀಡಿದರು.

ಸ್ಥಳೀಯರಿಗೆ ಆದ್ಯತೆ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಜಯಗಳಿಸಲಿದೆ. ಈ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ಪಕ್ಷದ ಕಾರ್ಯಕರ್ತರು, ಮುಖಂಡರು ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಹಲವು ಮಂದಿ ಆಕಾಂಕ್ಷಿಗಳಿದ್ದಾರೆ. ರಾಜ್ಯ ಹಾಗೂ ರಾಷ್ಟ್ರೀಯ ನಾಯಕರು ತೀರ್ಮಾನ ಮಾಡಿ ಯಾರಿಗೆ ಟಿಕೆಟ್ ನೀಡಿದರು. ಅವರ ಗೆಲುವಿಗೆ ಎಲ್ಲರು ಒಗ್ಗೂಡಿ ಶ್ರಮಿಸುತ್ತೇವೆ. ಸ್ಥಳೀಯರಿಗೆ ಆದ್ಯತೆ ನೀಡಿ ಎಂದು ವರಿಷ್ಠರ ಗಮನಕ್ಕೆ ತಂದಿದ್ದೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ವೃಷಬೇಂದ್ರಪ್ಪ ನಾರಾಯಣ ಪ್ರಸಾದ್, ಮಂಗಲ ಶಿವಕುಮಾರ್, ಮಂಜುನಾಥ್ ಇತರರಿ ಇದ್ದರು.

ಪೊನ್ನಾಚಿ ಮಹಾದೇವಸ್ವಾಮಿ, ವಿಷ್ಣುಕುಮಾರ್ ಜೆಡಿಎಸ್‌ಗೆ ವಿದಾಯ

ಬಿಜೆಪಿ ಮುಖಂಡ ನಿಶಾಂತ್ ಬೆಂಬಲಿಸುವುದಾಗಿ ಘೋಷಣೆ



ಹನೂರು, ಡಿ.11– ಹಿರಿಯ ಮುಖಂಡ ಪೊನ್ನಾಚಿ ಮಹಾದೇವಸ್ವಾಮಿ ಹಾಗೂ ಲೊಕ್ಕನಹಳ್ಳಿಯ ವಿಷ್ಣುಕುಮಾರ್ ಅವರುಗಳು ತಮ್ಮ ಬೆಂಬಲಿಗರೊಂದಿಗೆ ಸಾಮೂಹಿಕವಾಗಿ ಜೆಡಿಎಸ್ ತೊರೆದು ಬಿಜೆಪಿ ಮುಖಂಡ ನಿಶಾಂತ್ ಅವರಿಗೆ ಬೆಂಬಲ ನೀಡುವುದಾಗಿ ಘೋಷಿಸಿದ್ದಾರೆ.

ಕ್ಷೇತ್ರದ ಮದುವನಹಳ್ಳಿ ಸಮೀಪದ ನಿಸರ್ಗ ರೆಸಾರ್ಟ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಚಿಂತನ ಮಂಥನ ಸಮಾನ ಮನಸ್ಕರ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು. ಈ ವೇಳೆ ಮಾತನಾಡಿದ ಹಿರಿಯ ಮುಖಂಡ ಪೊನ್ನಾಚಿ ಮಹಾದೇವಸ್ವಾಮಿ ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿಯೂ ಕಾರ್ಯಕರ್ತರಲ್ಲಿ ಆದ ಗೊಂದಲದಿಂದ ನಾವು ಜೆಡಿಎಸ್ ಪಕ್ಷದ ಅಭ್ಯರ್ಥಿ ಮಂಜುನಾಥ್ ಅವರನ್ನು ಬೆಂಬಲಿಸಬೇಕಾಯಿತು. ಚುನಾವಣೆಯ ನಂತರ ಮಂಜುನಾಥ್ ಅವರು ನಮ್ಮನ್ನು ಯಾವುದೇ ಪಕ್ಷ ಸಂಘಟನೆಗೆ ಹಾಗೂ ಯಾವುದೇ ಕಾರ್ಯ ಕ್ರಮದಲ್ಲಿ ಗಣನೆಗೆ ತೆಗೆದುಕೊಳ್ಳದ ಹಿನ್ನೆಲೆ ತಟಸ್ಥವಾಗಿ ಉಳಿದಿದ್ದೆವು. ಇದೀಗ ಚುನಾವಣೆ ಬಂದಿರುವುದರಿಂದ ಸುಮ್ಮನೆ ಕೂರಲು ಸಾಧ್ಯವಾಗದೆ ಸಮಾನ ಮನಸ್ಕರ ಸಭೆ ನಡೆಸಿ ಈ ನಿರ್ಧಾರಕ್ಕೆ ಬಂದಿದ್ದೇವೆ ಎಂದು ತಿಳಿಸಿದರು.

ಸಮಾನ ಮನಸ್ಕರ ಅಧ್ಯಕ್ಷ ಗುರುಸ್ವಾಮಿ ಮಾತನಾಡಿ ನಾವು ಕಳೆದ 50 ವರ್ಷಗಳಿಂದ ದಿ.ನಾಗಪ್ಪ ಹಾಗೂ ಅವರ ಮನೆತನವನ್ನು ಬೆಂಬಲಿಸಿಕೊಂಡು ಬಂದಿದ್ದೇವೆ. ಅವರು ನಿಷ್ಠಾವಂತ ಕಾರ್ಯಕರ್ತರಿಗೆ ಸರಿಯಾಗಿ ಸ್ಪಂದಿಸದೆ ಇರುವುದರಿಂದ ಕಳೆದ ಮೂರು ಚುನಾವಣೆಗಳಲ್ಲಿ ಸತತ ಸೋಲು ಕಂಡಿದ್ದಾರೆ. ಈಗಲೂ ಸಹ ಅವರು ಸ್ಪಂದಿಸದೆ ಇರುವುದರಿಂದ ಕ್ಷೇತ್ರದ ಸಮಾನಮನಸ್ಕರೆಲ್ಲ ಚಿಂತನೆ ನಡೆಸಿ ಈ ನಿರ್ಧಾರ ಕೈಗೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಬಿಜೆಪಿಯನ್ನು ಉತ್ತಮವಾಗಿ ಸಂಘಟಿಸಿ ನಿಶಾಂತ್ ಅವರನ್ನು ಶಾಸಕರನ್ನಾಗಿ ಮಾಡುವುದೇ ನಮ್ಮ ಗುರಿ ಎಂದು ತಿಳಿಸಿದರು.

ಬಿಜೆಪಿ ಟಿಕೆಟ್ ಆಕಾಂಕ್ಷಿ ನಿಶಾಂತ್ ಮಾತನಾಡಿ ಕ್ಷೇತ್ರದ ಪ್ರತಿಯೊಬ್ಬರ ಕಷ್ಟ ಸುಖದಲ್ಲಿ ಭಾಗಿಯಾಗುತ್ತೇನೆ, ಜಾತಿ ಸಮುದಾಯ ಪಕ್ಷ ಎಲ್ಲವನ್ನು ಮೀರಿ ನನ್ನ ಕೈಲಾದ ಸಹಾಯ ಮಾಡುತ್ತೇನೆ ಹನೂರು ಅಭಿವೃದ್ಧಿ ಸಂಕಲ್ಪವೇ ನನ್ನ ಗುರಿ, ಇಂದು ನನ್ನ ಜೀವನದಲ್ಲಿ ಮರೆಯಲಾಗದ ದಿನ. ಹಿರಿಯ ಮುಖಂಡರೆಲ್ಲರೂ ಜೆಡಿಎಸ್ ಪಕ್ಷ ತೊರೆದು ನನಗೆ ಬೆಂಬಲ ನೀಡಿರುವುದರಿಂದ ನನಗೆ ಆನೆ ಬಲ ಬಂದಂತಾಗಿದೆ. ಮುಂದಿನ ದಿನಗಳಲ್ಲಿ ನಿಮ್ಮೆಲ್ಲರ ಸಹಕಾರದಿಂದ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪಣತೊಡುತ್ತೇನೆ ಎಂದರು.

ಸಭೆಯಲ್ಲಿ ಕ್ಷೇತ್ರ ವ್ಯಾಪ್ತಿಯ ಹತ್ತಾರು ಮುಖಂಡರುಗಳು ಅಭಿಪ್ರಾಯ ಮಂಡಿಸಿದರು ಇದರಲ್ಲಿ ಹೆಚ್ಚಿನ ಮುಖಂಡರುಗಳು ನಿಶಾಂತ್ ಅವರ ಪರ ಒಲವು ತೋರಿದ್ದು ವಿಶೇಷವಾಗಿತ್ತು. ಸಭೆಯಲ್ಲಿ ತಾಪಂ ಮಾಜಿ ಅಧ್ಯಕ್ಷ ಪುಟ್ಟರಾಜೇಗೌಡ, ವಕೀಲರಾದ ಶ್ರೀರಾಮುಲು ಮುಖಂಡರುಗಳಾದ ಪಾಳ್ಯ ರಾಚಪ್ಪ, ಮಹದೇವ ಪ್ರಸಾದ್,ಉಗನಿಯ ಮೂರ್ತಿ ಬೈಲೂರು ಮಹದೇವಸ್ವಾಮಿ, ಮಂಗಲ ರಾಜಶೇಖರ್, ಪೊನ್ನಾಚಿ ಶಿವಬಸಪ್ಪ, ಶಿವನಂಜಪ್ಪ, ಮಾದಪ್ಪ ಸೇರಿದಂತೆ ಇನ್ನಿತರರು ಹಾಜರಿದ್ದರು.

ವಕೀಲರಿಗೂ ರಕ್ಷಣೆ ಕಾಯ್ದೆ ಜಾರಿಗೆ ತನ್ನಿ



ಚಾಮರಾಜನಗರ, ಡಿ.11– ವಕೀಲರ ಮೇಲೆ ಪದೇ ಪದೇ ಹಲ್ಲೆಗಳು ನಡೆಯುತ್ತಿದ್ದು, ವಕೀಲರ ರಕ್ಷಣೆಗಾಗಿ ಸರ್ಕಾರ ಕೂಡಲೇ ವೈದ್ಯರ ಸಂರಕ್ಷಣೆ ಕಾಯ್ದೆ ಮಾದರಿಯಲ್ಲಿ ವಕೀಲರ ಸಂರಕ್ಷಣೆ ಕಾಯ್ದೆಯನ್ನು ಜಾರಿ ಮಾಡಬೇಕು ಎಂದು ವಕೀಲರ ಸಂಘದ ಜಿಲ್ಲಾಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪೊಲೀಸರು ಹಾಗೂ ವಕೀಲರ ಮಧ್ಯೆ ಪದೇ ಪದೇ ವಾಗ್ವಾದ ಹಾಗೂ ಪೊಲೀಸರಿಂದ ಹಲ್ಲೆಗಳು ನಡೆಯುತ್ತಿದೆ. ಪೊಲೀಸರು ಹಾಗೂ ವಕೀಲರು ಕಾನೂನಿನ ಎರಡು ಕಣ್ಣುಗಳಿದ್ದಂತೆ. ಪೊಲೀಸರು ಕಾನೂನು ಪರಿಪಾಲನೆ ಮಾಡಿದರೆ, ವಕೀಲರು ಸಹ ಕಾನೂನಿನ ರಕ್ಷಣೆಯಲ್ಲಿ ನಿರತರಾಗಿದ್ದಾರೆ. ಸಂವಿಧಾನ ದತ್ತವಾಗಿ ಕಾನೂನು ರಕ್ಷಣೆಯಲ್ಲಿ ಪೊಲೀಸರಿಗಿಂತಲು ಹೆಚ್ಚಾಗಿ ವಕೀಲರ ಪಾತ್ರ ಮಹತ್ತದ್ದಾಗಿದೆ. ಇದನ್ನು ಅರಿಯುವಲ್ಲಿ ಪೊಲೀಸ್ ಅಧಿಕಾರಿಗಳು ವಿಫಲರಾಗಿದ್ದಾರೆ. ರಾಜ್ಯ ಸರ್ಕಾರ ಕೂಡಲೇ ವಕೀಲರ ರಕ್ಷಣೆಗಾಗಿ ಕಾಯ್ದೆಯನ್ನು ಅನುಷ್ಠಾನ ಮಾಡಿ, ವಕೀಲರ ಆತ್ಮರಕ್ಷಣೆಗೆ ಮುಂದಾಗಬೇಕು. ವಕೀಲರ ಮೇಲೆಯೇ ಇಂಥ ದೌರ್ಜನ್ಯಗಳು ನಡೆದರೆ, ಸಾಮಾನ್ಯ ಜನರ ಪಾಡೇನು ಎಂದು ಅವರು ಪ್ರಶ್ನಿಸಿದರು.

ಪೊಲೀಸರು ರಾಜಕಾರಣಿಗಳ ಗುಲಾಮರು: ಪೊಲೀಸ್ ವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿದ್ದು, ಪೊಲೀಸರು ರಾಜಕಾರಣಿಗಳ ಗುಲಾಮರಂತೆ ಕೆಲಸ ಮಾಡುತ್ತಿದ್ದಾರೆ. ಕಾನೂನು ಪರಿಪಾಲನೆ ಮಾಡುವುದನ್ನು ಬಿಟ್ಟು ರಾಜಕಾರಣಿಗಳ ಅಣತಿಯಂತೆ ಅವರ ಗುಲಾಮರಂತೆ ವರ್ತನೆ ಮಾಡುವ ಮೂಲಕ ಸಮಾಜಕ್ಕೆ ಅಪಚಾರ ಮಾಡುತ್ತಿದ್ದಾರೆ. ಎಲ್ಲಾ ಪೊಲೀಸರನ್ನು ಗುರಿಯಾಗಿಸಿ ಕೊಂಡು ನಾನು ಹೇಳುತ್ತಿಲ್ಲ. ಕೆಲವರು ಇಲಾಖೆಯಲ್ಲಿದ್ದುಕೊಂಡು ರಾಜಕಾರಣಿಗಳ ಗುಲಾಮರಂತೆ ವರ್ತನೆ ಮಾಡುತ್ತಿದ್ದಾರೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ಕೂಡಲೇ ಈ ಬಗ್ಗೆ ಎಚ್ಚರಿಕೆ ವಹಿಸಿ, ವಕೀಲರ ಸಂರಕ್ಷಣೆ ಕಾಯ್ದೆಯನ್ನು ಜಾರಿ ಮಾಡಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ವಕೀಲರ ಸಂಘಗಳೊಂದಿಗೆ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ಇಂದುಶೇಖರ್, ಮುಂದಿನ ದಿನಗಳಲ್ಲಿ ಇದೇ ರೀತಿ ಮುಂದುವರಿದರೆ ವಕೀಲರ ಸಂಘದಿಂದ ಸರ್ಕಾರ ಹಾಗೂ ಪೊಲೀಸರ ವಿರುದ್ಧ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಇಂದು ಶೇಖರ್ ಎಚ್ಚರಿಕೆ ನೀಡಿದರು.

ಪತ್ರಿಕಾ ಗೋಷ್ಠಿಯಲ್ಲಿ ವಕೀಲರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಕೆ. ವಿರೂಪಾಕ್ಷ, ಉಪಾಧ್ಯಕ್ಷ ಹರವೆ ಮಂಜು, ಖಜಾಂಚಿ ಆರ್. ಗಿರೀಶ್, ಜಂಟಿ ಕಾರ್ಯದರ್ಶಿ ಮಲ್ಲು ಇತರರು ಇದ್ದಾರೆ.

ಆಸ್ತಿಗಾಗಿ ಮಗನಿಂದಲೇ ಹಿರಿಯ ನಟಿ ಹತ್ಯೆ

ಮೃತದೇಹ ನದಿಗೆ ಎಸೆದಿದ್ದು ತನಿಖೆ ವೇಳೆ ಬಹಿರಂಗ

ಮುಂಬೈ, ಡಿ.11– ಮುಂಬೈನಲ್ಲಿ ಈ ಭೀಕರ ಘಟನೆ ನಡೆದಿದೆ. ಆಸ್ತಿಗಾಗಿ ಹಿರಿಯ ನಟಿ ವೀಣಾ ಕಪೂರ್ ಅವರನ್ನು ಸ್ವಂತ ಮಗನೇ ಕೊಲೆ ಮಾಡಿರುವ ವಿಷಯ ಬೆಳಕಿಗೆ ಬಂದಿದೆ. ಹಿಂದಿ ಸೀರಿಯಲ್ ಹಾಗೂ ಸಿನಿಮಾಗಳಲ್ಲಿ ನಟಿಸಿ ವೀಣಾ ಕಪೂರ್ ಜನಪ್ರಿಯತೆ ಪಡೆದಿದ್ದರು. ಅವರಿಗೆ 74 ವರ್ಷ ವಯಸ್ಸಾಗಿತ್ತು. ಅವರ ಸ್ವಂತ ಮಗನಿಂದಲೇ ಹತ್ಯೆಗೀಡಾದ ಸುದ್ದಿ ಕೇಳಿ ಹಿಂದಿ ಕಿರುತೆರೆ ಮಂದಿ ಬೆಚ್ಚಿ ಬಿದ್ದಿದ್ದಾರೆ. ಘಟನೆ ಕುರಿತಂತೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಮಗ ಸಚಿನ್ ಕಪೂರ್ ಹಾಗೂ ವೀಣಾ ಕಪೂರ್ ನಡುವೆ ವಾಗ್ವಾದ ಏರ್ಪಟ್ಟಿತ್ತು. ಈ ವೇಳೆ ಪರಿಸ್ಥಿತಿ ಕೈ ಮೀರಿ ತಾಯಿಯ ಹತ್ಯೆ ಮಾಡಿರುವುದಾಗಿ ಸಚಿನ್ ಕಪೂರ್ ಒಪ್ಪಿಕೊಂಡಿದ್ದಾನೆ ಎಂದು ವರದಿ ಆಗಿದೆ.

12 ಕೋಟಿ ರೂ. ಆಸ್ತಿಗಾಗಿ ಜಗಳ: ವೀಣಾ ಕಪೂರ್ ಅವರು ನಾಪತ್ತೆ ಆಗಿದ್ದಾರೆ ಎಂದು ಕಲ್ಪತರು ಸೊಸೈಟಿಯ ಭದ್ರತಾ ಸಿಬ್ಬಂದಿಗಳು ಪೊಲೀಸರಿಗೆ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ವಿಚಾರಣೆ ನಡೆಸಿದಾಗ ಹತ್ಯೆ ವಿಚಾರವನ್ನು ಸಚಿನ್ ಕಪೂರ್ ಬಾಯಿ ಬಿಟ್ಟಿದ್ದಾನೆ. 12 ಕೋಟಿ ರೂಪಾಯಿ ಮೌಲ್ಯದ ಫ್ಲಾಟ್ ಕುರಿತಾಗಿ ಅಮ್ಮನ ಜೊತೆ ಜಗಳ ಆರಂಭ ಆಯಿತು ಎಂದು ಆತ ಹೇಳಿದ್ದಾನೆ.

ನದಿಗೆ ಶವ ಎಸೆದ ಹಂತಕ: ವೀಣಾ ಕಪೂರ್ ಮತ್ತು ಸಚಿನ್ ಕಪೂರ್ ನಡುವೆ ಮಾತಿನ ಚಕಮಕಿ ನಡೆದಿತ್ತು. ಸಿಟ್ಟಿನಲ್ಲಿ ಬೇಸ್‌ಬಾಲ್ ಬ್ಯಾಟ್‌ನಿಂದ ತಲೆಗೆ ಹೊಡೆದ ಪರಿಣಾಮ ವೀಣಾ ಅವರು ಕೊನೆಯುಸಿರೆಳೆದರು. ಬಳಿಕ ಅವರ ಶವವನ್ನು ರಾಯಘಡ ಜಿಲ್ಲೆಯ ನದಿಯೊಂದರಲ್ಲಿ ಎಸೆದು ಬಂದಿದ್ದನ್ನು ಸಚಿನ ಕಪೂರ್ ಒಪ್ಪಿಕೊಂಡಿದ್ದಾನೆ ಎಂದು ವರದಿ ಆಗಿದೆ. ವೀಣಾ ಕಪೂರ್ ಅವರ ಇನ್ನೊರ್ವ ಪುತ್ರ ಅಮೆರಿಕದಲ್ಲಿ ವಾಸವಾಗಿದ್ದಾರೆ. ಸದ್ಯ ಸಚಿನ್ ವಿರುದ್ಧ ಕೇಸ್ ದಾಖಲಿಸಲಾಗಿದ್ದು, ವಿಚಾರಣೆ ಪ್ರಗತಿಯಲ್ಲಿದೆ. ಟಿವಿ ನಟಿ ನೀಲೂ ಕೊಹ್ಲಿ ಅವರು ವೀಣಾ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ವೇದಿಕೆ ಮೇಲೆ ಡಿಕೆಶಿ, ಸಿದ್ದು ಬಣದ ಕಿತ್ತಾಟ

ಕಣ್ಣೀರಿಟ್ಟು ವೇದಿಕೆಯಿಂದ ಇಳಿದ ನಾಯಕಿ

ಬೆಂಗಳೂರು: ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬೆಂಬಲಿಗರ ಮಧ್ಯೆ ಕಿತ್ತಾಟ ನಡೆದಿದ್ದು, ದಾಸರಹಳ್ಳಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಬಹಿರಂಗವಾಗಿಯೇ ಅಸಮಾಧಾನ ಸ್ಫೋಟಗೊಂಡಿದೆ.

ಡಿಕೆಶಿ ಬಣದ ಗೀತಾ ಶಿವರಾಮ್ ಭಾಷಣಕ್ಕೆ ಸ್ವತಃ ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವೇದಿಕೆ ಮೇಲೆ ಗೀತಾ, ನಾನೇ ಎಂಎಲ್‌ಎ ಅಭ್ಯರ್ಥಿ ಎಂದು ಹೇಳಿದ್ದರು. ಈ ವೇಳೆ ಮಾತನಾಡಲು ಅವಕಾಶ ಕೊಡದಂತೆ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ. ಈ ವೇಳೆ ವೇದಿಕೆ ಮೇಲಿನಿಂದ ಗೀತಾ ಶಿವರಾಮ್ ಅಳುತ್ತ ಹೊರಟರು. ಅವರ ಬದಲು ನಾಗಲಕ್ಷ್ಮಿ ಚೌಧರಿಗೆ ಅವಕಾಶ ಕೊಟ್ಟರು. ಅದಾದ ಬಳಿಕ ಸಿದ್ದರಾಮಯ್ಯ ಅವರು ಭಾಷಣ ಮಾಡುವ ವೇಳೆ ಗೀತಾ ಶಿವರಾಮ್ ಹೆಸರು ಪ್ರಸ್ತಾಪಿಸಿದ್ದಾರೆ. ಹೆಸರು ಪ್ರಸ್ತಾಪಿಸಿ ವೇದಿಕೆ ಸುತ್ತಲು ನೋಡಿದರು. ಈ ವೇಳೆ ಎಲ್ಲಿ ಹೊರಟುಹೋದ್ರು ಎಂದು ಪ್ರಶ್ನಿಸಿದ್ದಾರೆ. ಅಷ್ಟೇ ಅಲ್ಲದೇ ಕಾರ್ಯಕ್ರಮ ಆಯೋಜಕರ ವಿರುದ್ಧ ಸಿದ್ದರಾಮಯ್ಯ ಗರಂ ಆಗಿದ್ದಾರೆ. ಭಾಷಣದ ವೇಳೆಯಲ್ಲಿ ಕಾರ್ಯಕರ್ತರು ವೇದಿಕೆ ಮೇಲಿದ್ದರು. ಅವರನ್ನು ಕೆಳಗಿಳಿಸುವಂತೆ ಸಿದ್ದರಾಮಯ್ಯ ಅವರು ಪೊಲೀಸರಿಗೆ ಸೂಚನೆ ನೀಡಿದರು. ಇದಾದ ಮೇಲೆ ಸಿದ್ದರಾಮಯ್ಯ ಅವರು ಭಾಷಣ ಶುರು ಮಾಡಿದ್ದರು. ಆದರೆ ಈ ವೇಳೆ ಸಮುದಾಯ ಕಾರ್ಯಕರ್ತರು ಘೋಷಣೆ ಕೂಗಿದ್ದಾರೆ. ಮತ್ತೊಮ್ಮೆ ಸುಮ್ಮನೆ ಇರಿ ಎಂದು ಸಿದ್ದರಾಮಯ್ಯ ಅವರು ಹೇಳಿದರು, ಕಾರ್ಯಕರ್ತರು ಸುಮ್ಮನೆ ಇರದ ಹಿನ್ನೆಲೆಯಲ್ಲಿ, ಸುಮ್ಮನಿರಲು ಆಗದಿದ್ದರೆ ಎದ್ದು ಹೋಗಿ ಎಂದು ಸಿದ್ದರಾಮಯ್ಯ ಗದರಿದರು. ಕಾರ್ಯಕ್ರಮ ಮಾಡುವುದು ಮುಖ್ಯವಲ್ಲ, ಕಾರ್ಯಕ್ರಮದಲ್ಲಿ ಶಿಸ್ತು ಮುಖ್ಯ ಎಂದು ಗರಂ ಆದರು.

ಒಂದನೇ ಪುಟದಿಂದ

ಟಿಕೆಟ್ ಹಂಚಿಕೆ ಸೂಕ್ತ

ಶಿಕ್ಷಣ ಚುನಾವಣೆಯಲ್ಲೂ ಹೀಗೆ ಮೇಜು ಕುಟ್ಟುತ್ತಾ ಪ್ರಧಾನಿ ಮೋದಿ 2ನೇ ಬಾರಿ ಪ್ರಧಾನಿ ಆಗುವುದಿಲ್ಲ ಎಂದಿದ್ದರು. ಆದರೆ ಆಗಿದ್ದೇನು. ಲೋಕಸಭೆಯಲ್ಲಿ ಕಾಂಗ್ರೆಸ್‌ಗೆ ದೊರೆತದ್ದು ಒಂದು ಸ್ಥಾನ ಮಾತ್ರ ಎಂದು ಶ್ರೀನಿವಾಸ್ ಪ್ರಸಾದ್ ಕಿಡಿಕಾರಿದರು.

ಕಾಂಗ್ರೆಸ್ ಮುನ್ನಡೆಸಲು ಖರ್ಗೆ ಅಶಕ್ತ: ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕಾಂಗ್ರೆಸ್ ಮುನ್ನಡೆಸುವ ಸಾಮರ್ಥ್ಯವಿಲ್ಲ. ಖರ್ಗೆಗೆ ಯಾವ ಹೋರಾಟದ ಹಿನ್ನೆಲೆಯೂ ಇಲ್ಲ. ಯಾವುದೇ ಸಿಎಂಗಳು ಬಂದಾಗಲೂ ಅವರನ್ನು ಓಲೈಸಿ ಮಂತ್ರಿ ಸ್ಥಾನ ಪಡೆಯುತ್ತಿದ್ದರು. ಈಗ ಕಾಂಗ್ರೆಸ್ ಪಕ್ಷಕ್ಕೆ ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಖರ್ಗೆ ಸಿಕ್ಕಿದ್ದಾರೆ. ಯುದ್ಧ ಮಾಡಲು ಖರ್ಗೆ ಕೈಗೆ ರಟ್ಟಿನ ಗುರಾಣಿ, ಮರದ ಕತ್ತಿಯನ್ನು ನೀಡಿದ್ದಾರೆ. ಇಂತಹವರು ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ತಂದಿರೋದು ಕಾಂಗ್ರೆಸ್‌ನ ದೌರ್ಭಾಗ್ಯ ಎಂದು ಲೇವಡಿ ಮಾಡಿದರು.

ಕಾಂಗ್ರೆಸ್ ಬಿಡಲು ಖರ್ಗೆ, ಸಿದ್ದರಾಮಯ್ಯ ಕಾರಣ: ನಾನು ಎಂಟು ಬಾರಿ ಗೆಲುವು ಸಾಧಿಸಿದ್ದೇನೆ. ಆರು ಬಾರಿ ಕಾಂಗ್ರೆಸ್ ಪಕ್ಷದಿಂದ ಗೆದ್ದಿದ್ದೇನೆ. ಕಾಂಗ್ರೆಸ್ ಪಕ್ಷದಲ್ಲಿ ಎಲ್ಲಾ ಮಟ್ಟದಲ್ಲೂ ನಾನು ಕೆಲಸ ಮಾಡಿದ್ದೆ. ನನಗೆ ಪಿತೂರಿ ಮಾಡಿ, ಕಿರುಕುಳ ನೀಡಿ ಪಕ್ಷ ಬಿಡಿಸಿದರು. ನಾನು ಕಾಂಗ್ರೆಸ್ ತೊರೆಯಲು ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಕಾರಣ ಎಂದು ದೂರಿದರು.

ವಿಶ್ವನಾಥ್ ಕೂಡ ಅಲೆಮಾರಿ: ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಕೂಡ ರಾಜಕೀಯ ಅಲೆಮಾರಿ ನಾಯಕ. ಈ ಹಿಂದೆ ಸಿದ್ದರಾಮಯ್ಯ–ವಿಶ್ವನಾಥ್ ಹಾವು ಮುಂಗುಸಿಯಂತಿದ್ದರು. ಈಗ ಒಗ್ಗೂಡುತ್ತಿದ್ದಾರೆ. ಆದರೂ ಏನೂ ಪರಿಣಾಮ ಬೀರಲ್ಲ. ಸಿದ್ದರಾಮಯ್ಯ ಮತ್ತು ವಿಶ್ವನಾಥ್ ಪರಸ್ಪರ ಏನೇನು ಮಾತನಾಡಿದ್ದಾರೆ ಒಮ್ಮೆ ನೆನಪಿಸಿಕೊಳ್ಳಲಿ. ಸಿದ್ದರಾಮಯ್ಯ ವಿರುದ್ಧ ವಿಶ್ವನಾಥ್ ಎಂತೆಂಥಾ ಕಟು ಶಬ್ದಗಳನ್ನು ಬಳಸಿದ್ದರು ಎಂದು ಎಲ್ಲರಿಗೂ ಗೊತ್ತಿದೆ. ಈಗ ಇಬ್ಬರೂ ಒಂದಾಗುತ್ತಾರೆಂದರೆ ಅದಕ್ಕೆ ಏನು ಹೇಳೋದು ಅಸಮಧಾನ ವ್ಯಕ್ತಪಡಿಸಿದರು.

> “ದೇಶದಲ್ಲಿ ಅಶಾಂತಿ ಸೃಷ್ಟಿಯಾಗದಂತೆ ಕಟ್ಟೆಚ್ಚರ ವಹಿಸಿ ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡಲು ಕ್ರಮ ಕೈಗೊಳ್ಳಬೇಕು. ರಾಜ್ಯಸಭೆಯಲ್ಲಿ ಖಾಸಗಿ ಮಸೂದೆ ರೂಪದಲ್ಲಿ ಇದು ಮಂಡನೆಯಾಗಿದೆ. ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸುದೀರ್ಘ ಪ್ರಕ್ರಿಯೆಗಳಿವೆ. ಕೇಂದ್ರ ಇದಕ್ಕಾಗಿ ಸಮಿತಿ ರಚನೆ ಮಾಡಿದೆ. ಸಮಿತಿ ಏನು ವರದಿ ಕೊಡುತ್ತದೆಯೋ ಎನ್ನುವುದನ್ನು ಕಾದು ನೋಡಬೇಕು. ಎಲ್ಲಾ ರಾಜ್ಯಗಳೊಂದಿಗೆ ಚರ್ಚೆ ಮಾಡಿ, ಜನರ ಅಭಿಪ್ರಾಯವನ್ನು ಪಡೆದು ಇದನ್ನು ಜಾರಿ ಮಾಡಲಿ ಅನ್ನೋದು ನನ್ನ ಅಭಿಪ್ರಾಯವಾಗಿದೆ.
> –ವಿ.ಶ್ರೀನಿವಾಸಪ್ರಸಾದ್,
> ಸಂಸದರು, ಚಾಮರಾಜನಗರ.

ಬೆಂಕಿಯಲ್ಲಿ ಕೈಕಾಯಿಸಿಕೊಳ್ಳುವ ಜೆಡಿಎಸ್: ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಗೆದ್ದರೆ ದಲಿತ ಸಿಎಂ ಮಾಡುವುದಾಗಿ ಮಾಜಿ ಸಿಎಂ ಹೆಚ್.ಡಿ.ಕುಮಾರ ಸ್ವಾಮಿ ನೀಡಿರುವ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದ ವಿ.ಶ್ರೀನಿವಾಸಪ್ರಸಾದ್, ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಜೆಡಿಎಸ್ ಅಧಿಕಾರಕ್ಕೆ ಬರುವುದಿಲ್ಲ. ಅದು ಗೊತ್ತಿರುವುದರಿಂದಲೇ ದಲಿತ ಸಿಎಂ ಮಾಡುತ್ತೇವೆ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಜೆಡಿಎಸ್‌ನ ನಾಟಕ ಎಲ್ಲರಿಗೂ ಮನವರಿಕೆಯಾಗಿದೆ. ಜನ ಜೆಡಿಎಸ್ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ. ಹಾಗಾಗಿಯೇ ರಾಜಕೀಯ ಬೆಂಕಿಯಲ್ಲಿ ಕೈ ಕಾಯಿಸಿಕೊಳ್ಳುವ ಬುದ್ಧಿ ಜೆಡಿಎಸ್‌ನದ್ದಾಗಿದೆ ಎಂದು ವಾಗ್ದಾಳಿ ನಡೆಸಿದರು.

ಕಾರುಗಳ ಡಿಕ್ಕಿ: ಐವರ ಸಾವು

ನಿಯಂತ್ರಣ ತಪ್ಪಿ ಅಪಘಾತವಾಗಿರಬಹುದು ಎಂದು ಸ್ಥಳೀಯರು ತಿಳಿಸಿದ್ದಾರೆ.

ಡಿವೈಡರ್ ದಾಟಿ ಡಿಕ್ಕಿ ಹೊಡೆದ ಇನ್ನೋವಾ: ಸಾವನ್ನಪ್ಪಿರುವ ತಮಿಳುನಾಡಿನ ಮೂವರು ಹಾಗೂ ಗಾಯಾಳುಗಳ ಹೆಸರು ತಿಳಿದು ಬಂದಿಲ್ಲ. ಹಾಸನದಿಂದ ಬೆಂಗಳೂರು ಕಡೆಗೆ ತೆರಳುತ್ತಿದ್ದ ಇನ್ನೋವಾ ಕಾರು, ರಸ್ತೆಯ ಡಿವೈಡರ್ ದಾಟಿ ಮತ್ತೊಂದು ರಸ್ತೆಯಲ್ಲಿ ಬೆಂಗಳೂರು ಕಡೆಯಿಂದ ಬರುತ್ತಿದ್ದ ಸ್ವಿಫ್ಟ್ ಕಾರಿಗೆ ಮುಖಾಮುಖಿ ಡಿಕ್ಕಿ ಹೊಡೆದಿದೆ. ಸ್ಥಳದಲ್ಲೇ ಐವರು ಸಾವನ್ನಪ್ಪಿರುವುದು ಅಪಘಾತದ ತೀವ್ರತೆಗೆ ಸಾಕ್ಷಿಯಾಗಿದೆ.

ಪೊಲೀಸರಿಂದ ಸ್ಥಳ ಪರಿಶೀಲನೆ: ಸ್ಥಳಕ್ಕೆ ಎಸ್ಪಿ ಎನ್.ಯತೀಶ್, ನಾಗಮಂಗಲ ಸಿಪಿಐ ಸುಧಾಕರ್, ಬಿಂಡಿಗನವಿಲೆ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಜೊತೆಗೆ ಅಪಘಾತದಿಂದಾಗಿ ಹೆದ್ದಾರಿಯಲ್ಲಿ ಉಂಟಾಗಿದ್ದ ಟ್ರಾಫಿಕ್ ಜಾಮ್ ನಿವಾರಿಸಿ, ಕಾರುಗಳಲ್ಲಿದ್ದ ಐವರ ಶವಗಳನ್ನು ಬಿ.ಜಿ.ನಗರದ ಆದಿಚುಂಚನಗಿರಿ ಆಸ್ಪತ್ರೆಗೆ ಸ್ಥಳಾಂತರಿಸಿದರು. ಈ ಸಂಬಂಧ ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಕಾಶವಾಣಿ ಮೂಲಕ ಪಠ್ಯ ಬೋಧನೆ

ಬಾನ್ ದನಿ ಕಾರ್ಯಕ್ರಮವು ನೀತಿ ಕತೆ, ಯೋಗ ಮತ್ತು ಆರೋಗ್ಯ ಶಿಕ್ಷಣ, ವೃತ್ತಿ ಶಿಕ್ಷಣ ಮತ್ತು ಶೈಕ್ಷಣಿಕ ಮಾರ್ಗದರ್ಶನ ಹಾಗೂ ಇಂಗ್ಲಿಷ್ ಕಲಿಕೆಯನ್ನೊಳಗೊಂಡ ಸಾಮಾನ್ಯ ಪಾಠಗಳನ್ನು 1ರಿಂದ 9ನೇ ತರಗತಿಗಳಿಗೆ ಒಳಗೊಂಡಿದೆ. 4 ಹಾಗೂ 5ನೇ ತರಗತಿಗಳಿಗೆ ಕನ್ನಡ ಮತ್ತು ಗಣಿತ ವಿಷಯಗಳ ಕಲಿವಿನ ಫಲ ಆಧಾರಿತ ಪಾಠಗಳನ್ನು ಒಳಗೊಂಡಿದೆ. ಈ ಕಾರ್ಯಕ್ರಮವು ಆಕಾಶವಾಣಿಯಲ್ಲಿ ಸೋಮವಾರದಿಂದ ಗುರುವಾರದವರೆಗೆ ಮಧ್ಯಾಹ್ನ 2.35ರಿಂದ 3ರವರೆಗೆ ಪ್ರಸಾರಗೊಳ್ಳಲಿದ್ದು, ರಾಜ್ಯದ 13 ಆಕಾಶವಾಣಿ ಕೇಂದ್ರಗಳು ಹಾಗೂ 3 ವಿವಿಧ ಭಾರತಿ FM ಕೇಂದ್ರಗಳಿಂದ ಏಕಕಾಲದಲ್ಲಿ ರೇಡಿಯೋ ಅಲ್ಲದೆ, ಸಾಮಾನ್ಯ ಮೊಬೈಲ್, All India Radio Bangalore You Tube streaming ಮತ್ತು Prasarabharathi news on air appನಲ್ಲಿಯೂ ಕೇಳಬಹುದಾಗಿದೆ.

ಹರಗುರು ಚರಮೂರ್ತಿಗಳ ಮಾರ್ಗದರ್ಶನದಲ್ಲಿ ವೀರಶೈವ ಲಿಂಗಾಯತ

ಸಮುದಾಯದ ಶ್ರೇಯೋಭಿವೃದ್ಧಿಗೆ ಭದ್ರ ಬುನಾದಿ ಹಾಕಬೇಕು

ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಮತ



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಮಠದ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಯುವ ಸಂಕಲ್ಪ’ ಕಾರ್ಯಕ್ರಮದಲ್ಲಿ ಬಸವಣ್ಣನವರ ಮೂರ್ತಿಗೆ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಮತ್ತಿತರ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ಮೈಸೂರು,ಡಿ.11(ಪಿಎಂ)–ಸಮಾಜದಲ್ಲಿ ಸಮಾನತೆ ತರಲು ಬಸವಣ್ಣನವರ ನೇತೃತ್ವದಲ್ಲಿ ಮುಂದಾದ ಸಮುದಾಯ ನಮ್ಮದು. ಪ್ರಸ್ತುತದ ಸೂಕ್ಷ್ಮ ರಾಜಕೀಯ ಪರಿಸ್ಥಿತಿಯಲ್ಲಿ ಸಮಾಜ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಗಂಭೀರವಾಗಿ ಆಲೋಚಿಸಬೇಕು. ಹರಗುರು ಚರಮೂರ್ತಿಗಳ ಮಾರ್ಗದರ್ಶನದಲ್ಲಿ ಸಮುದಾಯದ ಶ್ರೇಯೋಭಿವೃದ್ಧಿಗೆ ಭದ್ರ ಬುನಾದಿ ಹಾಕಬೇಕು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಪ್ರಾಯಪಟ್ಟರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಮಠದ ಆವರಣದಲ್ಲಿ ಮೈಸೂರು ಬಸವ ಬಳಗಗಳ ಒಕ್ಕೂಟದ 25ನೇ ವರ್ಷದ ರಜತ ಮಹೋತ್ಸವ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ‘ಯುವ ಸಂಕಲ್ಪ’ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಾಜವನ್ನು ಸರಿ ದಾರಿಯಲ್ಲಿ ಕೊಂಡೊಯ್ಯುವ ಕರ್ತವ್ಯ ಕೇವಲ ನಾಡಿನ ಮಠಮಾನ್ಯಗಳು, ಸ್ವಾಮೀಜಿಗಳಿಗೆ ಮಾತ್ರ ಸೀಮಿತವಲ್ಲ. ಹಾಗೆಂದುಕೊಂಡು ನಮ್ಮ ಜವಾಬ್ದಾರಿ ಮರೆತರೆ ಬಹುಶಃ ಆ ದೇವರೂ ನಮ್ಮ ಸಮಾಜ ಕಾಪಾಡಲು ಸಾಧ್ಯವಿಲ್ಲ. ಅದರಲ್ಲೂ ನಮ್ಮ ಯುವಪೀಳಿಗೆ ನಾಡಿನ ಎಲ್ಲಾ ಹರಗುರು ಚರಮೂರ್ತಿಗಳ ಮಾರ್ಗದರ್ಶನದಲ್ಲಿ ಸಾಗಬೇಕು. ಸಮಾಜಕ್ಕಾಗಿ ನಾನು ಎಂಬ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ನಮ್ಮ ತಂದೆ ಬಿ.ಎಸ್.ಯಡಿಯೂರಪ್ಪನವರು ಈ ರಾಜ್ಯದ ಬಡವರು, ದೀನದಲಿತರು, ರೈತರ ಪರವಾಗಿ ಕಳೆದ 40 ವರ್ಷಗಳಿಂದಲೂ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಮುಂದೆ ಉಪಮುಖ್ಯಮಂತ್ರಿ ಅಥವಾ ಮುಖ್ಯಮಂತ್ರಿ ಆಗುತ್ತೇನೆಂಬ ಅಪೇಕ್ಷೆ ಹೊಂದದೇ ನಿಸ್ವಾರ್ಥ ಹೋರಾಟ ಮಾಡಿದರು. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಅಲ್ಲದೆ, ರೈತ ಸಮುದಾಯಕ್ಕೆ ಪ್ರತ್ಯೇಕ ಬಜೆಟ್ ಮಂಡಿಸಿದರು. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಕೊಟ್ಟು, ರೈತರಿಗೆ ಬಡ್ಡಿರಹಿತ ಸಾಲ ನೀಡಿದ ಧೀಮಂತ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಎಂದರು.

ಮಠಮಾನ್ಯಗಳು ಇಲ್ಲದ ಸಮಾಜ ಊಹಿಸಲು ಗಾಬರಿಯಾಗುತ್ತದೆ. ತುಮಕೂರು ಸಿದ್ದಗಂಗಾ ಮಠ, ಸುತ್ತೂರು ಮಠ ಸೇರಿದಂತೆ ನಾಡಿನ ಎಲ್ಲಾ ಮಠಗಳು ಅನ್ನ ದಾಸೋಹ ಸೇರಿದಂತೆ ಸೇವಾ ಕಾರ್ಯಗಳ ಮೂಲಕ ಸಮಾಜಕ್ಕೆ ಬೆಳಕಾಗಿವೆ. ನಮ್ಮ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಯಾರೇ ಗಣ್ಯರು ಮೈಸೂರಿಗೆ ಬಂದರೂ ಅವರು ಸುತ್ತೂರು ಮಠಕ್ಕೆ ಭೇಟಿ ನೀಡುತ್ತಾರೆ. ಪ್ರಧಾನಿ ನರೇಂದ್ರ ಮೋದಿಯವರು ಸುತ್ತೂರು ಮಠದ ಪರಮ ಭಕ್ತರು ಎಂದು ಹೇಳಿದರು.

ಅನುಭವ ಮಂಟಪ ಮಾದರಿ ಭವನ: ನಮ್ಮ ತಂದೆ ಬಿ.ಎಸ್.ಯಡಿಯೂರಪ್ಪನವರು ಸಿಎಂ ಆಗಿದ್ದಾಗ ಮೈಸೂರಿನ ವೀರಶೈವ ಲಿಂಗಾಯತ ಸಮುದಾಯದಿಂದ ನಿವೇಶನ ಬೇಕೆಂಬ ಬೇಡಿಕೆ ಬಂದಿತು. ಅದರಂತೆ ನಿವೇಶನವೂ ಮಂಜೂರಾಗಿದೆ. ಆದರೆ ನಿವೇಶನದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಈವರೆಗೂ ಆಗದಿರುವುದು ಬೇಸರದ ಸಂಗತಿ ಎಂದರು.

ಸಮುದಾಯ ಸಂಘಟನೆಯಾಗುವ ಮೂಲಕ ರಾಜ್ಯಕ್ಕೆ ಉತ್ತಮ ಸಂದೇಶ ನೀಡಬೇಕಿದೆ. ಅದು ಈ ವೇದಿಕೆಯಿಂದಲೇ ಆರಂಭವಾಗಬೇಕಿದೆ. ನಮ್ಮ ವ್ಯತ್ಯಾಸಗಳನ್ನು ಮರೆತು ಮೊದಲು ಸದರಿ ನಿವೇಶನದಲ್ಲಿ ಸಮಾಜಮುಖಿ ಕೆಲಸ ಕಾರ್ಯಗತ ಮಾಡಬೇಕು. ಶ್ರೀಗಳ ಆಶಯದಂತೆ ಆಧುನಿಕ ಅನುಭವ ಮಂಟಪದ ರೀತಿಯಲ್ಲಿ ಅಲ್ಲೊಂದು ಉತ್ತಮ ಭವನ ನಿರ್ಮಿಸಿ ಸಮಾಜಕ್ಕೆ ಅನುಕೂಲ ಕಲ್ಪಿಸಬೇಕು. ಆ ನಿಟ್ಟಿನಲ್ಲಿ ಸಮಾಜದ ಮುಖಂಡರು ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದು ಸಲಹೆ ನೀಡಿದರು.

ಗದಗದ ಶ್ರೀ ಶಿವಾನಂದ ಮಹಾಸಂಸ್ಥಾನ ಮಠದ ಶ್ರೀ ಕೈವಲ್ಯಾನಂದಾ ಸ್ವಾಮೀಜಿ, ಮೈಸೂರಿನ ಶ್ರೀ ಕುಂದೂರು ಮಠದ ಶ್ರೀ ಡಾ.ಶರತ್‌ಚಂದ್ರ ಸ್ವಾಮೀಜಿ, ವಿಭೂತಿಪುರದ ಶ್ರೀ ವೀರಸಿಂಹಾಸನ ಸಂಸ್ಥಾನ ಮಠದ ಶ್ರೀ ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಕನಕಪುರ ದೇಗುಲಮಠದ ಕಿರಿಯ ಶ್ರೀಗಳಾದ ಶ್ರೀ ಚನ್ನಬಸವ ಸ್ವಾಮೀಜಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶಾಸಕ ಸಿ.ಎಸ್.ನಿರಂಜನಕುಮಾರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ ಮಹಾಂತೇಶ್ ಪಾಟೀಲ್, ರಾಜ್ಯ ಯುವ ಘಟಕದ ಅಧ್ಯಕ್ಷ ಮನೋಹರ್ ಬಿ.ಅಬ್ಬಿಗೆರೆ ಮತ್ತಿತರರು ಹಾಜರಿದ್ದರು.

ವರುಣಾ ಕ್ಷೇತ್ರ, ಅಲ್ಲಿನ ಕಾರ್ಯಕರ್ತರ ಶ್ರಮದಿಂದ ಇಡೀ ರಾಜ್ಯಕ್ಕೆ ಪರಿಚಿತನಾದೆ ; ಬಿ.ವೈ.ವಿಜಯೇಂದ್ರ ಭಾವುಕ ನುಡಿ

ಮೈಸೂರು,ಡಿ.11(ಪಿಎಂ)– ಇಡೀ ರಾಜ್ಯಕ್ಕೆ ನಾನು ಪರಿಚಿತನಾಗಲು ವರುಣಾ ಕ್ಷೇತ್ರದ ಮತ್ತು ಅಲ್ಲಿನ ಕಾರ್ಯಕರ್ತರ ಶ್ರಮವೇ ಕಾರಣ. ಈ ಋಣ ತೀರಿಸಲು ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಭಾವುಕರಾಗಿ ನುಡಿದರು. ಹಳೇ ಮೈಸೂರು ಎಂದರೆ ನನಗೆ ಪಂಚಪ್ರಾಣ. ಕಾರಣ, ನಾನು ಎಂದೂ ರಾಜಕಾರಣಕ್ಕೆ ಬರಬೇಕು ಎಂದುಕೊಂಡಿರಲಿಲ್ಲ. ಆದರೆ 2018ರ ವಿಧಾನಸಭಾ ಚುನಾವಣೆ ವೇಳೆ ವರುಣಾ ಕ್ಷೇತ್ರದ ಮೂಲಕ ಚುನಾವಣಾ ಅಖಾಡಕ್ಕಿಳಿಯಲು ತೀರ್ಮಾನಿಸಿದ್ದೆ. ಆದರೆ ಕಾರಣಾಂತರದಿಂದ ಸ್ಪರ್ಧೆ ಸಾಧ್ಯವಾಗಲಿಲ್ಲ. ಆದರೂ ಇಂದು ಇಡೀ ರಾಜ್ಯಕ್ಕೆ ಈ ವಿಜಯೇಂದ್ರ ಪರಿಚಯವಾಗಲು ವರುಣಾ ಕ್ಷೇತ್ರ ಮತ್ತು ಅಲ್ಲಿನ ಕಾರ್ಯಕರ್ತರ ಶ್ರಮ ಕಾರಣ ಎಂದರು.

ನಮ್ಮ ತಂದೆ ಯಡಿಯೂರಪ್ಪನವರು ಬೆಂಕಿಯಲ್ಲಿ ಅರಳಿದ ಹೂವು. ಅವರಿಗೆ ಈಗ ಯಾವುದೇ ಉನ್ನತ ಸ್ಥಾನಮಾನ ಇಲ್ಲ. ಅವರು ಪಕ್ಷದ ಅಧ್ಯಕ್ಷರೂ ಇಲ್ಲ. ಆದರೂ ಆರೂವರೆ ಕೋಟಿ ಕನ್ನಡಿಗರು ತಮ್ಮ ಹೃದಯದಲ್ಲಿ ಅವರಿಗೆ ಶಾಶ್ವತ ಸ್ಥಾನ ಕೊಟ್ಟಿದ್ದಾರೆ. ನಾನು ಕೂಡ ನಮ್ಮ ತಂದೆಯವರಂತೆಯೇ ವೀರಶೈವ ಲಿಂಗಾಯತ ಸಮುದಾಯದ ಜೊತೆ ಜೊತೆಗೆ ಎಲ್ಲಾ ಸಮುದಾಯಗಳನ್ನು ಒಗ್ಗೂಡಿಸಿಕೊಂಡು ಪ್ರಾಮಾಣಿಕವಾಗಿ ಜನಸೇವೆ ಮಾಡುತ್ತೇನೆ ಎಂದು ಹೇಳಿದರು. ನನಗೆ ಇಂದು ಯಾವುದೇ ಸ್ಥಾನಮಾನ ಇಲ್ಲ. ಎಂಎಲ್ಎ, ಎಂಎಲ್‌ಸಿ, ಮಂತ್ರಿನೂ ಅಲ್ಲ. ಆದರೂ ಸಮಾಜ ಇಷ್ಟೊಂದು ಗೌರವದಿಂದ ಕಾಣುತ್ತಿರುವ ಸಂದರ್ಭದಲ್ಲಿ ನನ್ನ ಜವಾಬ್ದಾರಿ ಹೆಚ್ಚಾಗಿದೆ. ನಾಡಿನ ಜನತೆಯ ಪ್ರೀತಿ–ವಿಶ್ವಾಸಕ್ಕೆ ಧಕ್ಕೆಬಾರದ ರೀತಿಯಲ್ಲಿ ನಾನೂ ಪ್ರಾಮಾಣಿವಾಗಿ ಕೆಲಸ ಮಾಡುತ್ತೇನೆ ಎಂದು ಹೇಳೀದರು.

ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ! ನಿರೂಪಕಿಯ ಭವಿಷ್ಯ!!

ಮೈಸೂರು,ಡಿ.11(ಪಿಎಂ)– ಕಾರ್ಯಕ್ರಮದಲ್ಲಿ ನಿರೂಪಣೆ ಮಾಡುತ್ತಿದ್ದ ಸುಮಾ ರಾಜಕುಮಾರ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ರಾಜ್ಯ ಬಿಜೆಪಿ ಅಧ್ಯಕ್ಷರೆಂದು ಸಭೆಗೆ ಪರಿಚಯಿಸಿ, ಭಾಷಣಕ್ಕೆ ಆಹ್ವಾನ ನೀಡಿದರಲ್ಲದೆ, ತಮ್ಮ ತಪ್ಪು ಅರಿವಿಗೆ ಬಂದಾಕ್ಷಣ ತಮ್ಮ ಮಾತು ನಿಜವಾಗುತ್ತೆ ಎನ್ನುವ ಮೂಲಕ ಸಭೆಯಲ್ಲಿ ಚಪ್ಪಾಳೆಯ ಮಳೆ ಸುರಿಯುವಂತೆ ಮಾಡಿದರು.

ಸಮುದಾಯ ಏಕೈಕ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ಹೆಸರು ಉಳಿಸುವ ನಿಟ್ಟಿನಲ್ಲಿ ಅವರ ಮಾರ್ಗದಲ್ಲೇ ಅವರ ಪುತ್ರ ಬಿ.ವೈ.ವಿಜಯೇಂದ್ರ ಹೆಜ್ಜೆ ಹಾಕುತ್ತಿದ್ದಾರೆ. ಅವರು ರಾಜ್ಯ ಬಿಜೆಪಿಯ ಉಪಾಧ್ಯಕ್ಷರೂ ಹೌದು ಎಂದು ನಿರೂಪಕಿ ಸುಮರಾಜ್‌ಕುಮಾರ್ ಹೇಳಿದರು.

ಬಳಿಕ ಭಾಷಣ ಆರಂಭಿಸಿದ ವಿಜಯೇಂದ್ರ, ಮೇಡಂನವರು ನನ್ನ ಪರಿಚಯಿಸುತ್ತಾ ಬಿಜೆಪಿ ರಾಜ್ಯಾಧ್ಯಕ್ಷರು ಎಂದು ಹೇಳಿದರು. ಟಿವಿಯವರೂ ಇಲ್ಲೇ ಇದ್ದಾರೆ. ಬೇರೆಯವರು ಕೇಳಿಸಿಕೊಂಡರೆ ಸ್ವಲ್ಪ ಗಾಬರಿಯಾಗುತ್ತಾರೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನಿರೂಪಕಿ, ‘ನಿನ್ನ ನಾಲಿಗೆಯಲ್ಲಿ ಮಚ್ಚೆ ಇದೆ. ನೀನು ಏನು ಹೇಳಿದರೂ ಸತ್ಯ ಆಗುತ್ತೆ’ ಎಂದು ತುಂಬ ಜನ ನನಗೆ ಹೇಳುತ್ತಾರೆ. ಬಹುಶಃ ಮುಂದೆ ಬಿಜೆಪಿ ರಾಜ್ಯಾಧ್ಯಕ್ಷರು ನೀವೇ ಆಗಬಹುದು ಎನ್ನುವ ಮೂಲಕ ಅಭಿಮಾನಿಗಳ ಚಪ್ಪಾಳೆ ಹೊರಹೊಮ್ಮುವಂತೆ ಮಾಡಿದರು.

ಹಣ್ಣೆಲೆ, ಚಿಗುರೆಲೆಗಳು ಪರಸ್ಪರ ಪೂರಕವಾಗಿರಬೇಕು

ಶಿಕ್ಷಣ ತಜ್ಞ ಗುರುರಾಜ ಕರ್ಜಗಿ ಅಭಿಪ್ರಾಯ



ಮೈಸೂರು, ಡಿ.11(ಜಿಎ)– ಹಣ್ಣೆಲೆ, ಚಿಗುರೆಲೆಗಳು ಒಂದಕ್ಕೊಂದು ಪೂರಕವಾಗಿರಬೇಕು. ಒಂದಕ್ಕೊಂದು ಜೊತೆಯಾಗಿದ್ದಾಗ ಮಾತ್ರ ಬದುಕು ಸಂತಸಮಯವಾಗುತ್ತದೆ. ಹೀಗಾಗಿ ಬದುಕಿನ ಕೊನೆ ಕ್ಷಣದವರೆಗೂ ಜೀವನೋತ್ಸಾಹ ಉಳಿಸಿಕೊಳ್ಳಬೇಕೆಂದು ಖ್ಯಾತ ಶಿಕ್ಷಣ ತಜ್ಞರಾದ ಗುರುರಾಜ ಕರ್ಜಗಿ ಸಲಹೆ ನೀಡಿದರು.

ನಗರದ ಜೆ.ಕೆ. ಮೈದಾನದ ಆವರಣದಲ್ಲಿರುವ ಪ್ಲಾಟಿನಂ ಜ್ಯುಬಿಲಿ ಸಭಾಂಗಣದಲ್ಲಿ ಸ್ವರಾಂಜಲಿ ಸಂಸ್ಥೆ ಆಯೋಜಿಸಿದ್ದ ‘ಹಣ್ಣೆಲೆ ಚಿಗುರೆಲೆ’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಚಿಗುರೆಲೆಗಳಾದ ಯುವ ಸಮೂಹ ತಮ್ಮ ಅಧಿಕಾರ, ಅಂತಸ್ತು, ಸ್ಥಾನ ಬದಿಗಿಟ್ಟು, ಅಮ್ಮನ ಪಕ್ಕ ಕುಳಿತು ಅವರಲ್ಲಿನ ಹಳೇ ನೆನಪು ಹೊರ ತನ್ನಿ, ಆಗ ನಿಮಗೇ ಅರಿವಾಗುತ್ತದೆ, ಅವರ ಕಣ್ಣುಗಳಲ್ಲಿ ಎಂತಹ ಹೊಳಪು ಬರುತ್ತದೆಂದು. ಹೀಗಾಗಿ ಚಿಗುರೆಲೆಗಳು ಹಣ್ಣೆಲೆಗಳಿಗೆ ಒಂದಷ್ಟು ಸಮಯ ನೀಡುವುದೇ ನಾವು ಅವರಿಗೆ ನೀಡುವ ಕೊಡುಗೆಯಾಗಿದೆ ಎಂದರು.

ನಾವುಗಳು ಕೇವಲ ಸಂಪರ್ಕದಲ್ಲಿದ್ದರೆ ಸಾಲದು. ಹಣ್ಣೆಲೆ, ಚಿಗುರೆಲೆಗಳ ನಡುವೆ ಸಂಬಂಧ ಬೆಳೆಯಬೇಕು. ನಮ್ಮಲ್ಲಿ ಬಹಳಷ್ಟು ಜನರಿಗೆ ಕಣ್ಣು, ಕಿವಿ ದುರ್ಬಲವಾದರೆ ಏನೋ ಸಮಸ್ಯೆ ಬರುತ್ತಿದೆ ಎಂಬ ಆತಂಕ ಶುರುವಾಗುತ್ತದೆ. ಇದು ಸರಿಯಲ್ಲ. ಬಂದದ್ದನ್ನು ಬಂದ ಹಾಗೆ ಸ್ವೀಕರಿಸಬೇಕು. ಜೊತೆಗೆ ಹಣ್ಣೆಲೆ, ಚಿಗುರೆಲೆಗಳು ಒಂದಕ್ಕೊಂದು ಪೂರಕವಾಗಿರಬೇಕು. ಒಂದಕ್ಕೊಂದು ಜೊತೆಯಾಗಿದ್ದಾಗ ಮಾತ್ರ ಬದುಕು ಸಂತಸಮಯವಾಗುತ್ತದೆ. ಹೀಗಾಗಿ ಬದುಕಿನ ಕೊನೆ ಕ್ಷಣದವರೆಗೂ ಜೀವನೋತ್ಸಾಹ ಉಳಿಸಿಕೊಳ್ಳಬೇಕೆಂದು ಎಂದರು.

ಕಿರಿಯರು ರಾಷ್ಟ್ರಪತಿ ಸ್ಥಾನ, ಸಿಎಂ ಸ್ಥಾನ ಮೊದಲಾದವುಗಳೆಲ್ಲವೂ ಹಿರಿಯರಿಗೇ ದಕ್ಕುತ್ತವೆ ಎಂದು ಬೇಸರ ವ್ಯಕ್ತಪಡಿಸುತ್ತಾರೆ. ಆದರೆ, ಯುವಜನರು ಹಾಗೂ ಹಿರಿಯರು ಪ್ರವಾಹದ ಒಂದು ಭಾಗವೇ ಆಗಿದ್ದಾರೆ. ಚಿಗುರೆಲೆ ಇಲ್ಲದೇ ಹಣ್ಣೆಲೆ ಆಗಲು ಸಾಧ್ಯವಿಲ್ಲ. ಎಲ್ಲೋ ಹುಟ್ಟುತ್ತೇವೆ, ಎಲ್ಲೋ ಒಂದೆಡೆ ಸಾಯುತ್ತೇವೆ. ಆದರೆ ಈ ನಡುವೆ ಪರಿಸರದ ಬದಲಾವಣೆಗೆ ಸಾಕ್ಷಿಯಾಗಿರುತ್ತೇವೆಂದರು.

ನಂತರ ವಾಗ್ಮಿ ಪ್ರೊ.ಡಾ. ಕೃಷ್ಣೇಗೌಡ ಮಾತನಾಡಿ, ಪ್ರಾಧ್ಯಾಪಕನಾಗಿ ನಿವೃತ್ತಿ ಹೊಂದಿದ್ದು ಖುಷಿಯಾಗಿತ್ತು. ಆದರೆ, ಈಗ ನನಗೆ ಅನಿಸುತ್ತಿರುವುದು ನಾನು ಇನ್ನು ಕಾಲೇಜಿನಲ್ಲಿ ಕೆಲಸ ಮಾಡಬೇಕೆಂದು. ನಾನು ಕೂಡ ಒಬ್ಬ ಸಾಮಾನ್ಯ ಮೇಷ್ಟ್ರು ಆಗಿದ್ದೆ. ಕಣ್ಣು ತೆರೆದರೆ ಸಾಲದು ನೋಡುವುದನ್ನು ಕಲಿಯಬೇಕು. ಇಲ್ಲದಿದ್ದರೆ ನಮ್ಮ ಮನಸ್ಸು ಗೊಬ್ಬರವಾದಂತಾಗುತ್ತದೆ. ಯಾಕೆಂದರೆ ನಮಗೆ ಬೇಕಾದಂತಹ ಉಪಯುಕ್ತವಾದದನ್ನಷ್ಟೇ ನೋಡಬೇಕು. ಕಿವಿ ತೆರೆದರೆ ಸಾಲದು ಕೇಳುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು ಎಂದರು.

ಹಿಂದಿನ ಕಾಲದ ಚಲನಚಿತ್ರದ ಹಾಡುಗಳು ಬಹಳ ಅರ್ಥಗರ್ಭಿತವಾಗಿ ಕೇಳುವಂತೆ ಪ್ರತಿಯೊಂದು ಹಾಡುಗಳನ್ನು ಸಂಯೋಜನೆ ಮಾಡಿದ್ದರು. ಇನ್ನು ವಿಶೇಷವಾಗಿ ಪೌರಾಣಿಕ ಸಿನಿಮಾವನ್ನು 2ಗಂಟೆ 45 ನಿಮಿಷ ಕುಳಿತು ತಾಳ್ಮೆಯಿಂದ ನೋಡುತ್ತಿದ್ದರು. ಆದರೆ ಅದೇ ಪೌರಾಣಿಕ ನಾಟಕವನ್ನು ಇಂದಿನ ಕಾಲದವರು 1 ಗಂಟೆಯು ಕುಳಿತು ನೋಡದೇ ಇರುವುದು ಇಂದಿನ ಕಾಲದವರ ಮನಸ್ಥಿತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಸಂಗೀತದಲ್ಲಿ ಸಾಧನೆ ಮಾಡಿದರವರನ್ನು ಸನ್ಮಾನಿಸಲಾಯಿತು. ನಂತರ ಕನ್ನಡ ಚಿತ್ರಗೀತೆಗಳು ಎಲ್ಲರ ಕಿವಿಗೆ ಇಂಪು ನೀಡಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಡಾ. ರಘುವೀರ್, ಡಾ.ಲಾವಣ್ಯ, ಡಾ.ದಿನೇಶ್, ಇನ್ನಿತರರು ಉಪಸ್ಥಿತರಿದ್ದರು.

ಪ್ರಸಾದ್ ಬಿದ್ದಪ್ಪ ಪುತ್ರಿ ಜೊತೆ ಅಭಿಷೇಕ್ ಅಂಬರೀಶ್ ನಿಶ್ಚಿತಾರ್ಥ

ಬೆಂಗಳೂರು, ಡಿ.11– ರೆಬಲ್ ಸ್ಟಾರ್ ಅಂಬರೀಶ್ ಪುತ್ರ ಅಭಿಷೇಕ್ ಅಂಬರೀಶ್ ಅವರ ನಿಶ್ಚಿತಾರ್ಥ ಇಂದು ಬೆಂಗಳೂರಿನ ಪ್ರತಿಷ್ಠಿತ ಹೋಟೆಲ್‌ವೊಂದರಲ್ಲಿ ನಡೆಯಿತು.



ಖ್ಯಾತ ಫ್ಯಾಷನ್ ಡಿಸೈನರ್ ಪ್ರಸಾದ್ ಬಿದ್ದಪ್ಪ ಅವರ ಪುತ್ರಿ ಅವಿವಾ ಜೊತೆ ಅಭಿಷೇಕ್ ಇಂದು ಎಂಗೇಜ್ ಆಗಿದ್ದಾರೆ.

ರೆಬೆಲ್‌ಸ್ಟಾರ್ ಅಂಬರೀಶ್ ಮನೆಯಲ್ಲಿ ಸಂಭ್ರಮ ಮನೆ ಮಾಡಿದೆ. ಇಂದು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಆಪ್ತರ ಸಮ್ಮುಖದಲ್ಲಿ ಅಭಿಷೇಕ್ ಅಂಬರೀಶ್ ಮತ್ತು ಅವಿವಾ ಬಿದ್ದಪ್ಪ ಜೊತೆ ಎಂಗೇಜ್‌ಮೆಂಟ್ ನೆರವೇರಿದೆ. ಈ ವೇಳೆ ಅಭಿಷೇಕ್ ತಾಯಿ ಸಂಸದೆ ಸುಮಲತಾ ಅಂಬರೀಶ್, ಅವಿವಾ ಅವರ ತಂದೆ–ತಾಯಿ ಹಾಗೂ ನಟ, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಹಾಜರಿದ್ದು, ಜೋಡಿಗಳಿಗೆ ಶುಭಹಾರೈಸಿದರು.

ಚಿತ್ರರಂಗದ ಗಣ್ಯರು ಹೊಸ ಜೋಡಿಗೆ ಶುಭಹಾರೈಸಿದ್ದಾರೆ. ಇನ್ನೂ ಅಭಿಷೇಕ್ ಮುಂದಿನ ಚಿತ್ರಕ್ಕೆ ಡೈರೆಕ್ಷನ್ ಮಾಡುತ್ತಿರುವ ಎಸ್. ಮಹೇಶ್‌ಕುಮಾರ್ ಕೂಡ ನಿಶ್ಚಿತಾರ್ಥಕ್ಕೆ ಭಾಗಿಯಾಗಿದ್ದಾರೆ. ಅವಿವಾ ಮತ್ತು ಅಭಿಷೇಕ್ ಹಲವು ವರ್ಷಗಳಿಂದ ಸ್ನೇಹಿತರು. ಈ ಸ್ನೇಹ ಪ್ರೇಮಕ್ಕೆ ತಿರುಗಿ, ಇದೀಗ ನವ ಜೀವನಕ್ಕೆ ಕಾಲಿಡುತ್ತಿದೆ ಜೋಡಿ. ಅವಿವಾ ಕೂಡ ತಮ್ಮ ತಂದೆಯ ಹಾದಿಯಲ್ಲೇ ಸಾಗಿದ್ದು, ಫ್ಯಾಷನ್ ಲೋಕದಲ್ಲೇ ಕೆಲಸ ಮಾಡುತ್ತಿದ್ದಾರೆ. ಈ ಜೋಡಿಯ ಮದುವೆ ಮುಂದಿನ ವರ್ಷ ನಡೆಯಲಿದೆ.

ಭಾರತೀಯ ಭಾಷಾ ಸಂಸ್ಥಾನದಲ್ಲಿ ‘ಭಾರತೀಯ ಭಾಷಾ ಉತ್ಸವ’ಕ್ಕೆ ಚಾಲನೆ

ಭಾಷಾ ಸಾಮರಸ್ಯ ಬಲಪಡಿಸುವ ಗುರಿ ಹೊಂದಿರುವ ಭಾರತೀಯ ಭಾಷಾ ಉತ್ಸವ: ಪ್ರೊ.ವಿ.ಮುರುಗನ್

ಮೈಸೂರು, ಡಿ.11 (ಆರ್‌ಕೆಬಿ)– ಭಾರತೀಯ ಭಾಷೆಗಳು, ಜನಸಂಖ್ಯೆಯ ನಡುವೆ ಭಾಷಾ ಸಾಮರಸ್ಯವನ್ನು ಬಲಪಡಿಸುವುದು ಮತ್ತು ಹೆಚ್ಚು ಹೆಚ್ಚು ಭಾರತೀಯ ಭಾಷೆಗಳನ್ನು ಕಲಿಯಲು ಅನುಕೂಲಕರ ವಾತಾವರಣವನ್ನು ಅಭಿವೃದ್ಧಿಪಡಿಸುವುದು ಭಾರತೀಯ ಭಾಷಾ ಉತ್ಸವದ ಗುರಿಯಾಗಿದೆ ಎಂದು ಚೆನ್ನೈ ಪ್ರೆಸಿಡೆನ್ಸಿ ಕಾಲೇಜಿನ ಮಾಜಿ ಇಂಗ್ಲಿಷ್ ಪ್ರಾಧ್ಯಾಪಕ ಪ್ರೊ.ವಿ.ಮುರುಗನ್ ಅಭಿಪ್ರಾಯಪಟ್ಟರು.

ತಮಿಳುನಾಡಿನ ಖ್ಯಾತ ಕವಿ, ಬಹುಭಾಷಾ ತಜ್ಞ, ಸ್ವಾತಂತ್ರ್ಯ ಹೋರಾಟಗಾರ ಮಹಾಕವಿ ಸುಬ್ರಹ್ಮಣ್ಯ ಭಾರತಿ ಅವರ ಜನ್ಮ ದಿನಾಚರಣೆ ಅಂಗವಾಗಿ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್)ದಲ್ಲಿ ಭಾನುವಾರ ಆಯೋಜಿಸಿದ್ದ ‘ಭಾರತಿಯ ಭಾಷಾ ಉತ್ಸವ’ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ಮಾಹಿತಿ ಒದಗಿಸುವ ಗುರಿಯೊಂದಿಗೆ ಕೇಂದ್ರ ಸರ್ಕಾರದ ‘ಒಂದು ಭಾರತ– ಶ್ರೇಷ್ಠ ಭಾರತ’ ಕಾರ್ಯಕ್ರಮದ ಭಾಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದ ಅವರು, ತಮಿಳು ಭಾಷೆಯ ಮುಖ್ಯ ಲಕ್ಷಣಗಳನ್ನು ವಿವರಿಸಿದರು.

ತಮಿಳು ಒಂದು ಪ್ರಮುಖ ದ್ರಾವಿಡ ಭಾಷೆಯಷ್ಟೇ ಅಲ್ಲ ವಿಶ್ವದ ಪ್ರಾಥಮಿಕ ಶಾಸ್ತ್ರೀಯ ಭಾಷೆಗಳಲ್ಲಿ ಒಂದಾಗಿದೆ ಭಾಷೆಯ ವೈಜ್ಞಾನಿಕ ತಿಳುವಳಿಕೆ ಎಂದರೇನೆಂಬುದಕ್ಕೆ ಒಂದೆರಡು ಕಾರಣಗಳನ್ನು ನೀಡಬಹುದು ಎಂದು ಹೇಳಿದರು.



ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ‘ಭಾರತೀಯ ಭಾಷಾ ಉತ್ಸವ’ಕ್ಕೆ ಚಾಲನೆ ನೀಡಿ ಚೆನ್ನೈ ಪ್ರೆಸಿಡೆನ್ಸಿ ಕಾಲೇಜಿನ ಮಾಜಿ ಇಂಗ್ಲಿಷ್ ಪ್ರಾಧ್ಯಾಪಕ ಪ್ರೊ.ವಿ.ಮುರುಗನ್ ಮಾತನಾಡಿದರು. ಚಿತ್ರದಲ್ಲಿ ಸಂಸ್ಥೆಯ ಉಪನಿರ್ದೇಶಕ ಪ್ರೊ.ಸಿ.ವಿ.ಶಿವರಾಮಕೃಷ್ಣ, ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಎಲ್‌ಜೆಎಆರ್‌ಓ ಡಾ.ಸುಜೋಯ್ ಸರ್ಕಾರ್ ಅವರನ್ನು ಕಾಣಬಹುದು.

ಭಾರತೀಯ ಭಾಷೆಗಳು, ಜನಸಂಖ್ಯೆಯ ನಡುವೆ ಭಾಷಾ ಸಾಮರಸ್ಯವನ್ನು ಬಲಪಡಿಸುವುದು ಮತ್ತು ಹೆಚ್ಚು ಹೆಚ್ಚು ಭಾರತೀಯ ಭಾಷೆಗಳನ್ನು ಕಲಿಯಲು ಅನುಕೂಲಕರ ವಾತಾವರಣವನ್ನು ಅಭಿವೃದ್ಧಿಪಡಿಸುವುದು ಇದರ ಉದ್ದೇಶವಾಗಿದೆ. ತಮಿಳು ಭಾಷೆಯು ಮಾನವ ಅಭಿವ್ಯಕ್ತಿಯ ವಾಹಕವಾಗದೆ ಸಾಮಾಜಿಕ ಒಗ್ಗಟ್ಟು, ಪ್ರಕೃತಿಯೊಂದಿಗೆ ಸಾಮರಸ್ಯ ಮತ್ತು ದೃಷ್ಟಿಕೋನದ ಸಾರ್ವತ್ರಿಕತೆಯ ಸಮಸ್ಯೆಗಳನ್ನು ಪರಿಹರಿಸುತ್ತದೆ ಎಂಬುದರ ಕುರಿತು ಬೆಳಕು ಚೆಲ್ಲಲಾಗುತ್ತಿದೆ. ತಮಿಳಿನ ಮೂಲವು ಬಹಳಷ್ಟು ಹಿಂದಿನದ್ದು, ಅದರಲ್ಲೂ ಸಾಮಾನ್ಯ ಯುಗದ ಆರಂಭಕ್ಕಿಂತ ಬಹಳ ಹಿಂದಿನದು ಎಂದರು.

ತಮಿಳು, ಅದರ ಅಸ್ತಿತ್ವದ ಉದ್ದಕ್ಕೂ ಮಾತನಾಡುವ ಮತ್ತು ಲಿಖಿತ ರೂಪಗಳ ಬೇರ್ಪಡಿಸಲಾಗದ ಮಿಶ್ರಣವಾಗಿದೆ ಎಂದ ಮುರುಗನ್, ತಮಿಳು ಭಾಷೆಯ ರಚನೆ, ಸಮಗ್ರತೆ, ರಚನಾತ್ಮಕ ಏಕರೂಪತೆ, ಸಮಾಜಶಾಸ್ತ್ರ ಮತ್ತು ಪರಿಸರ ವಿಜ್ಞಾನದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.

ಸಿಐಐಎಲ್ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಉಪನಿರ್ದೇಶಕ ಪ್ರೊ.ಸಿ.ವಿ.ಶಿವರಾಮಕೃಷ್ಣ ಸ್ವಾಗತಿಸಿ, ಎಲ್.ಜೆಆರ್‌ಓ ಡಾ.ಸುಜೋಯ್ ಸರ್ಕಾರ್ ವಂದಿಸಿದರು.

ಭಾರತೀಯ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯ ಕುರಿತು ಕನ್ನಡ ಭಾಷಾ ಪ್ರಧಾನ ಪುಸ್ತಕಗಳ ಸಂಪಾದಕಿ ಹೇಮಾ ಖುರ್ಷಾಪುರ್ ಹಾಗೂ ಇನ್ನಿತರ ವಿಷಯಗಳ ಕುರಿತು ಉಪನ್ಯಾಸ ನಡೆಯಿತು.

ರೈತರ ಆರ್ಥಿಕ ಪ್ರಗತಿಗೆ ಹೈನುಗಾರಿಕೆ ಸಹಕಾರಿ

ಬೆನಕನಹಳ್ಳಿಯಲ್ಲಿ ಡೈರಿ ಕಟ್ಟಡ ಉದ್ಘಾಟಿಸಿದ ಮೈಮುಲ್ ನಿರ್ದೇಶಕ ಆರ್.ಚಲುವರಾಜು

ತಿ.ನರಸೀಪುರ, ಡಿ.11– ಗುಣಮಟ್ಟದ ಹಾಲು ಪೂರೈಸುವ ರೈತ ಕುಟುಂಬಗಳು ಆರ್ಥಿಕ ಪ್ರಗತಿ ಹೊಂದಲು ಹೈನುಗಾರಿಕೆ ಸಹಕಾರಿ ಎಂದು ಮೈಮುಲ್ ನಿರ್ದೇಶಕ ಆರ್.ಚಲುವರಾಜು ತಿಳಿಸಿದರು.

ತಾಲೂಕಿನ ಬೆನಕನಹಳ್ಳಿ ಗ್ರಾಮದಲ್ಲಿ ಭಾನುವಾರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಹವಾಮಾನ ವೈಪರೀತ್ಯ ಮತ್ತು ವ್ಯವಸ್ಥಿತ ಮಾರುಕಟ್ಟೆ ಕೊರತೆಯಿಂದ ರೈತ ಬೆಳೆದ ಬೆಳೆಗೆ ಸೂಕ್ತ ಬೆಂಬಲ ಬೆಲೆ ಸಿಗದೆ ಕಷ್ಟಕ್ಕೆ ಸಿಲುಕುತ್ತಿರುವ ಕಾಲದಲ್ಲಿ ಹೈನುಗಾರಿಕೆ ರೈತರ ಕೈ ಹಿಡಿಯುತ್ತಿದೆ. ಜಾನುವಾರು ಸಾಕಾಣಿಕೆ ಮಾಡಿ, ಬೆಳಗ್ಗೆ ಸಂಜೆ ಕಷ್ಟಪಟ್ಟು ಹಾಕುವ ಹಾಲಿನಿಂದ ಜೀವನ ನಡೆಸಲು ಒಂದಷ್ಟು ಕಾಸು ಕೈಗೆ ಸಿಗುತ್ತಿದೆ ಎಂದರು.

ಹೈನುಗಾರಿಕೆ ಉದ್ಯಮವಾಗಿ ಅಭಿವೃದ್ಧಿ ಹೊಂದಿದಂತೆ ಸಹಕಾರಿ ಸಂಘಗಳಿಗೆ ಆಧುನಿಕತೆಗೆ ತಕ್ಕಂತೆ ಸೌಲಭ್ಯ ಕಲ್ಪಿಸಬೇಕು. ಉತ್ತಮ ಸಂಘವೆನಿಸಿಕೊಂಡಿರುವ ಬೆನಕನಹಳ್ಳಿ ಹಾಲು ಉತ್ಪಾದಕರ ಸಂಘಕ್ಕೆ ಸುಸಜ್ಜಿತ ಹೈಟೆಕ್



ಕಟ್ಟಡ ನಿರ್ಮಾಣ ಮಾಡಲು ಜಿಲ್ಲಾ ಒಕ್ಕೂಟ ಹಾಗೂ ಕೆಎಂಎಫ್‌ನಿಂದ ಹೆಚ್ಚಿನ ಅನುದಾನ ನೀಡಿದ್ದೇವೆ. ರೈತರ ಅಭಿವೃದ್ಧಿ ಮತ್ತು ಮಕ್ಕಳ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ನೆರವಾಗಲು ಜಿಲ್ಲಾ ಒಕ್ಕೂಟ ಬದ್ಧವಾಗಿದೆ ಎಂದರು.

ವ್ಯವಸ್ಥಾಪಕ ಡಾ.ಸಣ್ಣತಮ್ಮೇಗೌಡ ಮಾತನಾಡಿ, ಹೈನುಗಾರಿಕೆಯಲ್ಲಿ ಹಾಲಿನ ಗುಣಮಟ್ಟ ಕಾಪಾಡಿಕೊಳ್ಳಲು ಜಾನುವಾರುಗಳಿಗೆ ನೀಡಬೇಕಿರುವ ಪೋಷಕಾಂಶಗಳ ಮೇವಿನ ಬಗ್ಗೆ ಮಾಹಿತಿ ನೀಡಿದರು. ಬಿಎಂಸಿ ವಿಭಾಗದ ಉಪ ವ್ಯವಸ್ಥಾಪಕ ಜಿ.ಎನ್.ಸಂತೋಷ್ ಕಟ್ಟಡ ವಿನ್ಯಾಸದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಉಪ ವ್ಯವಸ್ಥಾಪಕ ಡಾ.ಸಿ.ದಿವಾಕರ, ವಿಸ್ತರಣಾಧಿಕಾರಿಗಳಾದ ಆರ್.ಪ್ರಮೋದ್, ಅನಿತಾ, ಶೃತಿ, ಗ್ರಾಪಂ ಅಧ್ಯಕ್ಷೆ ಗೌರಮ್ಮ, ಸಂಘದ ಅಧ್ಯಕ್ಷ ಬಿ.ಎಂ.ಬಸವಣ್ಣ, ಉಪಾಧ್ಯಕ್ಷ ಬಿ.ಜಿ.ರಮೇಶನ್, ನಿರ್ದೇಶಕರಾದ ಜೆ.ಎಸ್.ಮಂಜುನಾಥ, ಬಿ.ಎಂ.ಮಹದೇವಸ್ವಾಮಿ, ಸಿದ್ದಪ್ಪ ಬಿ.ಎಸ್.ಬಸಪ್ಪ ಶಿವಪಾದ, ಶಿವಮ್ಮ, ಪ್ರೇಮ, ಶಿವಮ್ಮ, ರಾಜಶೆಟ್ಟಿ, ಮಾಜಿ ಅಧ್ಯಕ್ಷ ಬಿ.ಪಿ.ಶಿವಸ್ವಾಮಿ, ಬಿ.ಎಂ.ಸಿದ್ದಮಲ್ಲಿಕಾರ್ಜುನಸ್ವಾಮಿ, ಕಾರ್ಯದರ್ಶಿ ಮಾದಪ್ಪ ಸೇರಿದಂತೆ ಸಿಬ್ಬಂದಿ, ಹಾಲು ಉತ್ಪಾದಕ ಸದಸ್ಯರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಕನಿಷ್ಠ 3 ಸಾವಿರ ಲೀ. ಹಾಲನ್ನು ಒಕ್ಕೂಟಕ್ಕೆ ನೀಡಿ

6 ಆಧುನಿಕ ಕಟ್ಟಡ ಬಳಕೆಗೆ ಲಭ್ಯವಾದ ಮೇಲೆ ಕನಿಷ್ಠ 3 ಸಾವಿರ ಲೀ. ಹಾಲನ್ನು ಒಕ್ಕೂಟಕ್ಕೆ ಸರಬರಾಜು ಮಾಡಿ, ಪ್ರಗತಿ ಸಾಧಿಸಬೇಕು. ಕಟ್ಟಡದ ಅಡಿಪಾಯಕ್ಕೆ 7 ರಿಂದ 8 ಲಕ್ಷ ವೆಚ್ಚವಾದ ಹಿನ್ನೆಲೆಯಲ್ಲಿ ಜಿಲ್ಲಾ ಒಕ್ಕೂಟದ ನಿರ್ದೇಶಕರೆಲ್ಲರ ಸಹಕಾರದಿಂದ 30.50 ಲಕ್ಷ ರೂ.ವರೆಗೆ ನೆರವನ್ನು ನೀಡಿದ್ದೇವೆ. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯಿಂದ 2 ಲಕ್ಷ, ಸಂಘದಿಂದ 11.50 ಲಕ್ಷ ರೂ.ಗಳ ಅನುದಾನ ಬಳಕೆ ಮಾಡಿಕೊಂಡು ಒಟ್ಟು 43 ಲಕ್ಷ ರೂ. ವೆಚ್ಚದಲ್ಲಿ ಅತ್ಯಾಧುನಿಕ ಕಟ್ಟಡ ಕಟ್ಟಲಾಗಿದೆ.

–ಸಿ.ಓಂಪ್ರಕಾಶ್, ಮೈಮುಲ್ ನಿರ್ದೇಶಕ.



ಹುಣಸೂರಿನ ಕನಕ ಭವನದಲ್ಲಿ ಕನಕದಾಸ ಜಯಂತಿ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. ಈ ವೇಳೆ ಶಾಸಕ ಹೆಚ್.ಪಿ.ಮಂಜುನಾಥ್, ಎಂಎಲ್‌ಸಿಗಳಾದ ಡಾ.ತಿಮ್ಮಯ್ಯ, ಹೆಚ್.ವಿಶ್ವನಾಥ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ, ಹುಣಸೂರು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕುನ್ನೇಗೌಡ, ಡಾ.ಲೋಹಿತ್ ಸೇರಿದಂತೆ ಹಲವರಿದ್ದರು.

ಯುವ ಬ್ರಿಗೇಡ್‌ನಿಂದ ಕಪಿಲಾ ನದಿ ಸ್ವಚ್ಛ

ನಂಜನಗೂಡು, ಡಿ.11– ಯುವ ಬ್ರಿಗೇಡ್ ಕಾರ್ಯಕರ್ತರು ಶ್ರಮದಾನದ ಮೂಲಕ ಕಪಿಲಾ ನದಿಯಲ್ಲಿ ಸಂಗ್ರಹಗೊಂಡಿದ್ದ ರಾಶಿ ರಾಶಿ ತ್ಯಾಜ್ಯಗಳನ್ನು ಹೊರ ತೆಗೆದು ಸ್ವಚ್ಛತಾ ಕಾರ್ಯ ನಡೆಸಿದರು.

ತುಂತುರು ಮಳೆ ನಡುವೆಯೂ ಬೆಳಗ್ಗೆ 6.30ಕ್ಕೆ ಸ್ವಚ್ಛತಾ ಕಾರ್ಯ ಆರಂಭಿಸಿದ ಯುವ ಬ್ರಿಗೇಡ್ ಕಾರ್ಯಕರ್ತರು, ಹದಿನಾರು ಕಲ್ಲು ಮಂಟಪದ ಬಳಿ ಸಂಗ್ರಹಗೊಂಡಿದ್ದ ಜೊಂಡು, ಮರಗಳ ತ್ಯಾಜ್ಯ ತೆರವುಗೊಳಿಸಿದ ನಂತರ ಸ್ನಾನಘಟ್ಟದಲ್ಲಿ ಸಂಗ್ರಹವಾಗಿದ್ದ 5 ಟ್ರಾಕ್ಟರ್‌ಗಿಂತಲೂ ಹೆಚ್ಚಿನ ಹಳೆ ಬಟ್ಟೆ, ಸೀರೆ, ಹಳೇ ದೇವರ ಫೋಟೋ, ಗಾಜುಗಳನ್ನು ಹೊರತೆಗೆದರು. 30 ಸ್ವಯಂ ಕಾರ್ಯಕರ್ತರು ಸಂಜೆ 6 ಗಂಟೆವರೆಗೂ ಶ್ರಮದಾನ ನಡೆಸುವ ಮೂಲಕ ಕಪಿಲಾ ನದಿ ಸ್ವಚ್ಛತೆಗೆ ಮುಂದಾದರು.

ಯುವ ಬ್ರಿಗೇಡ್ ದಕ್ಷಿಣ ವಲಯ ಸಂಚಾಲಕ ಚಂದ್ರಶೇಖರ್ ಮಾತನಾಡಿ, ಕಳೆದ 8 ವರ್ಷಗಳಿಂದ ಯುವ ಬ್ರಿಗೇಡ್ ಕಾರ್ಯಕರ್ತರು ಕಪಿಲಾ ನದಿ ಸ್ವಚ್ಛತಾ ಕಾರ್ಯ ನಡೆಸಿಕೊಂಡು ಬರುತ್ತಿದ್ದಾರೆ. ಈ ಹಿಂದೆ ಭಕ್ತರಿಗೆ ನದಿಯಲ್ಲಿ ಬಟ್ಟೆ ಎಸೆಯದಂತೆ, ಎಸೆದರೆ ದಂಡ ವಿಧಿಸುವುದಾಗಿ ಧ್ವನಿವರ್ಧಕದ ಮೂಲಕ ಎಚ್ಚರಿಕೆ ನೀಡಲಾಗುತ್ತಿತ್ತು. ಜೊತೆಗೆ ದಂಡ ವಿಧಿಸುವ ಕಾರ್ಯವನ್ನು ಮಾಡುತ್ತಿದ್ದ ಕಾರಣ ನದಿಯಲ್ಲಿ ತ್ಯಾಜ್ಯ ಬಿಸಾಡುವುದು ಕಡಿಮೆಯಾಗಿತ್ತು. ಈಗ ಆ ಸಿಬ್ಬಂದಿಗಳನ್ನು ಬೇರೆ ಕೆಲಸಕ್ಕೆ ನಿಯೋಜಿಸಿ ದಂಡ ವಿಧಿಸುವುದನ್ನು ನಿಲ್ಲಿಸಿರುವ ಕಾರಣ ತ್ಯಾಜ್ಯ ಹೆಚ್ಚಾಗುತ್ತಿದೆ. ದೇವಾಲಯದ ಆಡಳಿತ ಮಂಡಳಿ ಆ ಕಾರ್ಯ ಮುಂದುವರೆಸಬೇಕು. ಅಲ್ಲದೆ ಭಕ್ತರು ನದಿಗೆ ತ್ಯಾಜ್ಯ ಎಸೆಯದೆ ನದಿ ಸ್ವಚ್ಛತೆಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಸುನೀಲ್, ರಾಮಾನುಜಂ, ಅರ್ಜುನ್, ರಂಗಸ್ವಾಮಿ, ಪ್ರಜ್ವಲ್, ಗೋಪಾಲ್, ಅನಿಲ್, ಮಹೇಂದ್ರ ಚಂದನ್, ಅಭಿ, ಪ್ರಸನ್ನ, ನಿತಿನ್, ಜಯಶ್ರೀ ಸೇರಿದಂತೆ ಯುವ ಬ್ರಿಗೇಡ್‌ನ ಸ್ವಯಂ ಕಾರ್ಯಕರ್ತರು ಇದ್ದರು.



ಡಿ.17ಕ್ಕೆ, ಎಸ್‌ಸಿ–ಎಸ್‌ಟಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಉದ್ಘಾಟನೆ

ಹುಣಸೂರು, ಡಿ.11– ಎಸ್‌ಸಿ–ಎಸ್‌ಟಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕವನ್ನು ಡಿ.17ರಂದು ಕೆಪಿಸಿಸಿ ಸಾಮಾಜಿಕ ಜಾಲತಾಣ ವಿಭಾಗದ ರಾಜ್ಯಾಧ್ಯಕ್ಷ ಪ್ರಿಯಾಂಕ ಎಂ.ಖರ್ಗೆ ಉದ್ಘಾಟಿಸಲಿದ್ದಾರೆ ಎಂದು ತಾಲೂಕು ಘಟಕದ ಅಧ್ಯಕ್ಷ ಮಹದೇವು ತಿಳಿಸಿದ್ದಾರೆ.

ನಗರದ ಅಂಬೇಡ್ಕರ್ ಭವನದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ನಡೆಯುವ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಹಾಗೂ ಎಸ್‌ಸಿ, ಎಸ್‌ಟಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಗುವುದು.

ಮೈಸೂರಿನ ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಹೆಚ್.ಪಿ.ಮಂಜುನಾಥ್ ವಹಿಸಲಿದ್ದಾರೆ. ಸಂಘದ ನಾಮಫಲಕವನ್ನು ಸಂಸದ ಪ್ರತಾಪ್ ಸಿಂಹ ಅನಾವರಣಗೊಳಿಸಲಿದ್ದಾರೆ. ಅಲ್ಲದೆ 2023ರ ನೂತನ ಕ್ಯಾಲೆಂಡರ್ ಅನ್ನು ಶಾಸಕ ಅನಿಲ್ ಚಿಕ್ಕಮಾದು ಬಿಡುಗಡೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಹೆಚ್.ವಿಶ್ವನಾಥ್, ಮಾಜಿ ಸಂಸದ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ರಾಜ್ಯ ಕಾಂಗ್ರೆಸ್ ಮಹಿಳಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್, ನಗರಸಭಾ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ, ರಾಜ್ಯ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರಯ್ಯ, ಡಿವೈಎಸ್‌ಪಿ ರವಿಪ್ರಸಾದ್, ತಾಪಂ ಇಓ ಬಿ.ಕೆ.ಮನು, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್, ಅರಣ್ಯ ಇಲಾಖೆಯ ನಂದಕುಮಾರ್, ಹಾರಂಗಿ ಎಇಇ ಸುರೇಶ್, ಅರಸು ಕಾಲೇಜಿನ ಪ್ರಾಂಶುಪಾಲ ವೆಂಕಟೇಶಯ್ಯ, ನಿವೃತ್ತ ಶಿಕ್ಷಣಾಧಿಕಾರಿ ಬಿ.ಕೆ.ಶಿವಣ್ಣ, ಯಳಂದೂರು ಬಿಇಓ ಕಾಂತರಾಜು, ಕ್ಷೇತ್ರ ಸಮನ್ವಯಾಧಿಕಾರಿ ಕೆ.ಸಂತೋಷ್‌ಕುಮಾರ್ ಸೇರಿದಂತೆ ಇನ್ನಿತರರು ಬಾಗವಹಿಸಲಿದ್ದಾರೆ.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಡಿ.17ರೊಳಗೆ ಪ್ರತಿಭಾ ಪುರಸ್ಕಾರಕ್ಕೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ.8105350565, 9845113549 ಸಂಪರ್ಕಿಸಿ.

ಮತ್ತೊಬ್ಬರ ಸ್ವಾತಂತ್ರ್ಯ ಗೌರವಿಸುವುದೇ ಮಾನವ ಹಕ್ಕು



ಸರಗೂರು, ಡಿ.11– ಮತ್ತೊಬ್ಬರ ಸ್ವಾತಂತ್ರ್ಯ ಗೌರವಿಸಿ ಬದುಕುವುದೇ ಮಾನವ ಹಕ್ಕು ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿ ರಾಜ್ಯ ಉಪಾಧ್ಯಕ್ಷ ಎಸ್.ಉಮೇಶ್ ತಿಳಿಸಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ನಡೆದ ವಿಶ್ವ ಮಾನವ ಹಕ್ಕುಗಳ ದಿನಾಚರಣೆಯಲ್ಲಿ ಮಾತನಾಡಿದ ಅವರು, ನಾಗರಿಕ ಸಮಾಜದ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಘೋಷಿಸಲಾದ ಮಾನವ ಹಕ್ಕುಗಳನ್ನು 1948ರಲ್ಲಿ ವಿಶ್ವಸಂಸ್ಥೆ ಅಂಗೀಕರಿಸಿತು. ಅಂದಿನಿಂದ ಜಗತ್ತಿನೆಲ್ಲೆಡೆ ಡಿ.10 ಅನ್ನು 'ವಿಶ್ವ ಮಾನವ ಹಕ್ಕುಗಳ ದಿನ'ವಾಗಿ ಆಚರಿಸಲಾಗುತ್ತದೆ. ಮಾನವ ಹಕ್ಕುಗಳ ರಕ್ಷಣೆಗಾಗಿ ಮಾನವ ಹಕ್ಕುಗಳ ದಿನ ಘೋಷಿಸಲಾಯಿತು. ಈ ದಿನದಂದು ವ್ಯಕ್ತಿ ಜೀವನ, ಸ್ವಾತಂತ್ರ್ಯ, ಸಮಾನತೆ ಮತ್ತು ಘನತೆ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುತ್ತದೆ. ಇದು ಭಾರತ ಸಂವಿಧಾನದ ಆಶಯವೂ ಆಗಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕಿ ಜಶೀಲಾ ಮಾತನಾಡಿ, ಜೀವಿಸುವುದು, ವಾಕ್ ಸ್ವಾತಂತ್ರ್ಯ, ಆಹಾರ, ಶಿಕ್ಷಣ, ಸಾಮಾಜಿಕ ಭದ್ರತೆ, ಸಂಘಟನೆ, ರಾಷ್ಟ್ರೀಯತೆ, ರಕ್ಷಣೆ, ಆರೋಗ್ಯ, ಧಾರ್ಮಿಕ ಸ್ವಾತಂತ್ರ್ಯದ ಜೊತೆಗೆ ದೌರ್ಜನ್ಯದ ವಿರುದ್ಧ ದನಿ ಎತ್ತುವ ಹಕ್ಕುಗಳು ಮಾನವ ಹಕ್ಕುಗಳ ವ್ಯಾಪ್ತಿಯಲ್ಲಿ ಬರುತ್ತವೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಮಾನವ ಹಕ್ಕುಗಳ ರಕ್ಷಣೆ ಮತ್ತು ಅರಿವು ಮೂಡಿಸುವ ಕೆಲಸವಾಗಬೇಕು ಎಂದರು.

ಸಮಾಜ ಸೇವಕ ಬಾಬುನಾಯಕ ಮಾತನಾಡಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಬಿ.ಸಿ.ಮಲ್ಲೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕಿ ದೀಪಾ, ಎಸ್.ಯೋಗೀತಾ, ದೀಪಾ, ಸರಗೂರು ತಾಲೂಕು ಅಧ್ಯಕ್ಷ ಎನ್.ಕುಮಾರ್, ಗೌರವಾಧ್ಯಕ್ಷ ಎಂ.ಕೆ.ಲಕ್ಷ್ಮಿಕಾಂತ್, ಉಪಾಧ್ಯಕ್ಷ ಎಂ.ರಾಜು, ಕಾರ್ಯದರ್ಶಿ ಜಿ.ಅನು, ಸಂಘಟನಾ ಕಾರ್ಯದರ್ಶಿ ಬಿ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಮನೋಜ್, ಮುಖ್ಯ ಕಾರ್ಯದರ್ಶಿ ರವಿಕುಮಾರ್ ಸೇರಿದಂತೆ ವಿದ್ಯಾರ್ಥಿಗಳು ಹಾಜರಿದ್ದರು.

ಮಳೆ ನಡುವೆಯೂ ಅದ್ಧೂರಿ ಶ್ರೀಕಂಠೇಶ್ವರಸ್ವಾಮಿ ತೆಪ್ಪೋತ್ಸವ

ನಂಜನಗೂಡು, ಡಿ.11– ಶ್ರೀಕಂಠೇಶ್ವರಸ್ವಾಮಿಯವರ ಚಿಕ್ಕ ಜಾತ್ರಾ ಮಹೋತ್ಸವದ ಪ್ರಯುಕ್ತ ಶನಿವಾರ ರಾತ್ರಿ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ಶ್ರೀಯವರ ತೆಪ್ಪೋತ್ಸವ ಮಳೆ ನಡುವೆಯೂ ಅದ್ಧೂರಿಯಾಗಿ ನಡೆಯಿತು.



ರಾತ್ರಿ 7.20ರ ವೇಳೆಗೆ ದೇವಾಲಯದಿಂದ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ಮಂಗಳ ವಾದ್ಯದೊಡನೆ ಕಪಿಲಾ ನದಿ ದಡದಲ್ಲಿನ ಶಾಸ್ತ್ರ ಮಂಟಪಕ್ಕೆ ಕರೆ ತರಲಾಯಿತು. ಈ ವೇಳೆ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ಹಾಗೂ ಅರ್ಚಕ ವೃಂದ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವ ಮೂರ್ತಿಯನ್ನು ಶಾಸ್ತ್ರ ಮಂಟಪದಲ್ಲಿ ಪ್ರತಿಷ್ಠಾಪಿಸಿ ವಿವಿಧ ಧಾರ್ಮಿಕ ಕೈಂಕರ್ಯ ನೆರವೇರಿಸಿದರು. ನಂತರ ವಿದ್ಯುತ್ ದೀಪಾಲಂಕೃತಗೊಂಡ ತೇಲುವ ದೇವಾಲಯದಲ್ಲಿ ಶ್ರೀಯವರನ್ನು ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು.

ಶ್ರೀಕಂಠೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ವಿಶೇಷವಾಗಿ ವಜ್ರ– ವೈಡೂರ್ಯ, ಮುತ್ತು ಹವಳ, ನವರತ್ನಗಳಿಂದ ಸಿಂಗರಿಸಲಾಗಿತ್ತು. ನಾನಾ ಬಗೆಯ ವಿಶೇಷ ಹೂಗಳಿಂದ ತೇಲುವ ದೇವಾಲಯ ಅಲಂಕೃತಗೊಳಿಸಲಾಗಿತ್ತು. ಉತ್ಸವ ಮೂರ್ತಿ ಹೊತ್ತ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಶ್ರೀಯವರನ್ನು 3 ಪ್ರದಕ್ಷಿಣೆ ಹಾಕಲಾಯಿತು. ನದಿಯ ಎರಡೂ ದಡಯಲ್ಲಿ ನೆರೆದಿದ್ದ ಭಕ್ತರು ಮಳೆ ಲೆಕ್ಕಿಸದೆ ಈ ಮನೋಹರ ಮನಮೋಹಕ ದೃಶ್ಯ ಕಣ್ತುಂಬಿಕೊಂಡು ಕರತಾಡನ, ಜೈಕಾರ ಹಾಕಿ ಭಾವಪರವಶರಾದರು. ಈ ವೇಳೆ ದೇವಾಲಯದ ಇಓ ಜಗದೀಶ್ ಕುಮಾರ್, ಎಇಓ ವೆಂಕಟೇಶ್ ಪ್ರಸಾದ್ ಸೇರಿದಂತೆ ಇತರರಿದ್ದರು.

ಕೋಟೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಹೆಚ್.ಡಿ.ಕೋಟೆ, ಡಿ.11– ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಮೈರಾಡ ಪ್ಲಾನ್ ಕ್ಯಾಂಪಸ್‌ನಲ್ಲಿ ಮೈಸೂರಿನ ಕಾಮಾಕ್ಷಿ ಆಸ್ಪತ್ರೆ, ಸ್ಪರ್ಶ ಆರೋಗ್ಯ ಮತ್ತು ಕಣ್ಣಿನ ಆಸ್ಪತ್ರೆ, ಮೈರಾಡ ಸಂಸ್ಥೆ ಹಾಗೂ ರೋಟರಿ ಕ್ಲಬ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಿಬಿರ ಉದ್ಘಾಟಿಸಿ ಮಾತನಾಡಿದ ರೋಟರಿ ಜಿಲ್ಲಾ ಗವರ್ನರ್ ಕೇಶವ್, ಗ್ರಾಮೀಣ ಜನರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದ ಅವರು, ಗ್ರಾಮೀಣ ಜನರ ಆರೋಗ್ಯದ ದೃಷ್ಟಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ನಾಗರಿಕರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಮಾತನಾಡಿ, ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಜನರಿಗೆ ಇಂತಹ ಶಿಬಿರಗಳು ಸಹಕಾರಿ ಎಂದರು.



ಶಿಬಿರದಲ್ಲಿ ರಕ್ತದೊತ್ತಡ, ಸಕ್ಕರೆ ಖಾಯಿಲೆ, ಕಿವಿ, ಮೂಗು, ಗಂಟಲು, ಮೂಳೆ ಸಾಂದ್ರತೆ, ನೇತ್ರ ತಪಾಸಣೆ ನಡೆಸಲಾಯಿತು. ಶಿಬಿರದಲ್ಲಿ 160 ಮಂದಿಗೆ ಆರೋಗ್ಯ ತಪಾಸಣೆ ನಡೆಸಿ, ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇದ್ದವರಿಗೆ ಮಾರ್ಗದರ್ಶನ ನೀಡಲಾಯಿತು. ರೋಗಿಗಳಿಗೆ ಉಚಿತವಾಗಿ ಕಾಮಾಕ್ಷಿ ಆಸ್ಪತ್ರೆ ವತಿಯಿಂದ ಔಷಧ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಜಯಂತ್, ರೋಟರಿ ವಲಯ ಸಹಾಯಕ ಗವರ್ನರ್ ಎಸ್.ವಾಸುದೇವನ್, ರೋಟರಿ ತಾಲೂಕು ಅಧ್ಯಕ್ಷ ಸಿ.ವೈ.ಗಣೇಶ್ ಲಾಡ್, ಕಾಮಾಕ್ಷಿ ಆಸ್ಪತ್ರೆ ವೈದ್ಯರಾದ ಡಾ.ಮಧುಸೂದನ್, ಡಾ.ಶಿವಕುಮಾರ್, ಡಾ.ನೀತು ಪ್ರಿಯಾ, ನಿವೃತ್ತ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಚಲುವಯ್ಯ ನಿರಂಜನ್, ರವಿ, ನಾರಾಯಣ್ ಲಾಲ್, ಇದ್ದರು.

ಹಿರಿಯ ನಟ ಶರತ್‌ಕುಮಾರ್ ಆಸ್ಪತ್ರೆಗೆ ದಾಖಲು

ಚೆನ್ನೈ, ಡಿ.11– ಹಿರಿಯ ನಟ ಶರತ್ ಕುಮಾರ್ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ವರದಿಯಾಗಿದೆ. ಶರತ್ ಕುಮಾರ್ ತೀವ್ರ ಅಸ್ವಸ್ಥರಾಗಿದ್ದು, ಚೆನ್ನೈನ ಅಪೋಲೋ ಆಸ್ಪತ್ರೆಗೆ ದಾಖಲಾಗಿದ್ದು, ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮೂಲಗಳಿಂದ ತಿಳಿದು ಬಂದಿದೆ.



ನಂಜನಗೂಡು ತಾಲೂಕು ಪದವೀಧರರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜಿ.ಎಸ್.ಶೇಖರಪ್ಪ, ಉಪಾಧ್ಯಕ್ಷರಾಗಿ ಕೆ.ಟಿ.ಸತ್ಯನಾರಾಯಣಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ನಿರ್ದೇಶಕರಾದ ಪರಶಿವಮೂರ್ತಿ, ಕವಿತಾ, ಹೆಚ್.ಕೆ.ಸವಿತಾ, ದಯಾನಂದ, ವಿಜಯ ಕುಮಾರ್, ಡಿ.ಆನಂದರಾಜು, ಲಕ್ಷ್ಮಿಕಾಂತ್, ಎಸ್.ಶಿವಸ್ವಾಮಿ, ಟಿ.ಎಸ್.ಶ್ರೀಕಂಠಮೂರ್ತಿ, ಸುಧೀಂದ್ರ ಇತರರಿದ್ದರು.

ಡಿ.ದೇವರಾಜ ಅರಸರು ಮತ್ತು ಸಣ್ಣಕತೆಗಳು ಕೃತಿ ಲೋಕಾರ್ಪಣೆ

ಸಾಹಿತ್ಯ, ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವುದು ಕಷ್ಟಕರ: ಶಾಸಕ ಸಾ.ರಾ.ಮಹೇಶ್

ಕೆ.ಆರ್.ನಗರ, ಡಿ.11– ಸಾಹಿತ್ಯ ಮತ್ತು ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವುದು ಕಷ್ಟಕರ. ಈ ಎರಡೂ ಕ್ಷೇತ್ರಗಳನ್ನು ರಾಜಕಾರಣಿಗಳು, ಬುದ್ಧಿಜೀವಿಗಳು ಪ್ರೋತ್ಸಾಹಿಸಬೇಕಿದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಸರ್ಕಾರಿ ನೌಕರರ ಸಭಾಂಗಣದಲ್ಲಿ ಪ್ರಭಾಕರ್ ಹೆಗ್ಗಂದೂರು ಅವರ ಡಿ.ದೇವರಾಜ ಅರಸರು ಮತ್ತು ಸಣ್ಣಕಥೆಗಳು ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ನಿಜಸ್ಥಿತಿ ಮತ್ತು ಹಾಸ್ಯ ಪ್ರವೃತ್ತಿಯಲ್ಲಿ ಕಥೆಗಳು ಮತ್ತು ಕವನಗಳನ್ನು ಬರೆಯುವುದು ಕಷ್ಟ ಸಾಧ್ಯ. ಅಂತಹ ಕೆಲಸವನ್ನು ಮಾಡಿರುವ ಹೆಗ್ಗಂದೂರು ಪ್ರಭಾಕರ್ ಅವರನ್ನು ಅಭಿನಂದಿಸುತ್ತೇನೆ ಎಂದರು.

ತಾಲೂಕಿನಲ್ಲಿ ರಾಜಕೀಯ ಮಾಡಿದ ಹೆಚ್.ಎಸ್.ಚನ್ನಬಸಪ್ಪ ಅವರಿಂದ ಇಲ್ಲಿವರೆಗಿನ ಎಲ್ಲಾ ರಾಜಕಾರಣಿಗಳು ಸಾಮರಸ್ಯ, ಸಮಾನತೆಗೆ ಆದ್ಯತೆ ನೀಡಿದರು. ಅದೇ ರೀತಿ ನಾನು ಸಹ ಇವೆರಡರ ಜೊತೆಗೆ ಅಭಿವೃದ್ಧಿ ಮಾಡುತ್ತಿದ್ದೇನೆ ಎಂದರು.

ದಿ.ಎಸ್.ನಂಜಪ್ಪ ಅವರಿಗೆ ಎಷ್ಟು ಗೌರವ ನೀಡುತ್ತೇನೋ ಅಷ್ಟೇ ಗೌರವವನ್ನು ಹೆಚ್.ವಿಶ್ವನಾಥ್ ಅವರಿಗೆ ನೀಡುತ್ತೇನೆ. ಆದರೆ ರಾಜಕೀಯ ಬಂದಾಗ ಯಾರು ಎಷ್ಟು ಹತ್ತಿರದವರಾದರು ಸಹ ಎದುರಾಳಿ



ಗಳಾಗುತ್ತಾರೆ ಮತ್ತು ವಿಷಯಾಧಾರಿತ ಚರ್ಚೆಗಳನ್ನು ಮಾಡಬೇಕಾಗುತ್ತದೆ ಎಂದರು.

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿ, ಹೆಗ್ಗಂದೂರು ಪ್ರಭಾಕರ್ ಬರೆದಿರುವ ಕಥೆಗಳು ಕಾಲ್ಪನಿಕವಲ್ಲ. ಪ್ರಸ್ತುತ ನಿಜ ಘಟನೆಗಳಾಗಿದ್ದು, ಸಾರ್ವಜನಿಕರು ಮತ್ತು ಯುವ ಪೀಳಿಗೆ ಇಂತಹ ಕಥೆಗನ್ನು ಓದುವುದರಿಂದ ತಮ್ಮ ಪೂರ್ವಿಕರು ಅನುಸರಿಸುತ್ತಿದ್ದ ನಿಜ ಸಂಗತಿಗಳ ಬಗ್ಗೆ ತಿಳಿಯಬಹುದಾಗಿದೆ ಎಂದರು.

ಡಿ.ದೇವರಾಜ ಅರಸು ಅವರು ಎಲ್ಲಾ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ. ಅವರಿಗೆ ಅಧಿಕಾರದ ಅಹಂ ಇರಲಿಲ್ಲ. ಅವರು ತಮ್ಮ ವಿರೋಧಿಗಳ ಮನೆಗೆ ಹೋಗಿ ಕಷ್ಟ ಸುಖ ವಿಚಾರಿಸುವ ಜೊತೆಗೆ ಮನಪರಿವರ್ತನೆ ಮಾಡಿ ಅವರ ಮನಗೆಲ್ಲುವ ಕೆಲಸ ಮಾಡುತ್ತಿದ್ದರು ಎಂದರು. ಜಿಲ್ಲಾ ಕಸಾಪ ಅಧ್ಯಕ್ಷ ಗೋಪಾಲ್, ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಜಿಲ್ಲಾ ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ನಿವೃತ್ತ ಪ್ರಾಂಶುಪಾಲ ಮಹೇಶಾರಾಧ್ಯ ಕೃತಿ ಲೇಖಕ ಪ್ರಭಾಕರ್ ಹೆಗ್ಗಂದೂರು, ತಾಲೂಕು ಕಸಾಪ ಗೌರವಾಧ್ಯಕ್ಷ ಡಾ.ಡಿ.ನಟರಾಜ್, ತಾಲೂಕು ಅಧ್ಯಕ್ಷ ಜಿ.ಶಂಕರ್, ನಗರ ಮಹಿಳಾಧ್ಯಕ್ಷೆ ಮಲ್ಲಿಕಾ, ಹೊಸ ಅಗ್ರಹಾರ ಹೋಬಳಿ ಮಹಿಳಾ ಘಟಕದ ಅಧ್ಯಕ್ಷೆ ಸ್ವರೂಪರಾಣಿ ಮಾತನಾಡಿದರು. ಪುರಸಭಾಧ್ಯಕ್ಷ ಪ್ರಕಾಶ್, ಗೌರವ ಕಾರ್ಯದರ್ಶಿ ಸಿ.ಆರ್.ಉದಯಕುಮಾರ್, ಉಪಾಧ್ಯಕ್ಷ ರಾಮಕೃಷ್ಣ, ಕೃಷ್ಣಶೆಟ್ಟಿ, ನಾರಾಯಣ, ರಾಜಣ್ಣ, ಭಾಸ್ಕರ್, ಮಹದೇವ್, ನಿವೃತ್ತ ಶಿಕ್ಷಕ ಸಂಪತ್, ಮಹೇಶ್, ಮೋಹನ್, ಮಹದೇವ ಸೇರಿದಂತೆ ಇತರರಿದ್ದರು.

ಮುಂಬರುವ ಚುನಾವಣೆಯಲ್ಲಿ ಸ್ಥಳೀಯರಿಗೆ ಟಿಕೆಟ್ ನೀಡಿ

ಪ್ರಗತಿಪರ ಸಂಘಟನೆಗಳ ಮುಖಂಡರ ಒತ್ತಾಯ

ತಿ.ನರಸೀಪುರ, ಡಿ.11– ಮುಂಬರುವ ಚುನಾವಣೆಯಲ್ಲಿ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳು ಸ್ಥಳೀಯರಿಗೆ ಟಿಕೆಟ್ ನೀಡಬೇಕೆಂದು ಪ್ರಗತಿಪರ ಸಂಘಟನೆಗಳ ಮುಖಂಡರು ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಗತಿಪರ ರೈತ ಮುಖಂಡ ಬನ್ನೂರು ನಾರಾಯಣ್ ಚುನಾವಣೆ ಸಮೀಪಿಸುತ್ತಿದ್ದು, ಎಲ್ಲಾ ಪಕ್ಷಗಳಲ್ಲೂ ಹೊರ ಜಿಲ್ಲೆ ಹಾಗೂ ತಾಲೂಕಿನ ಟಿಕೆಟ್ ಆಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇದರಿಂದ ಸ್ಥಳೀಯರಿಗೆ ಅವಕಾಶ ಇಲ್ಲದಂತಾಗಿದೆ. ರಾಜಕೀಯ ಪಕ್ಷಗಳು ಹೊರಗಿನ ಅಭ್ಯರ್ಥಿಗಳಿಗೆ ಮಣೆ ಹಾಕುತ್ತಿರುವುದರಿಂದ ಮೂಲ ಸಮಸ್ಯೆ ಅರಿಯದ ಜನಪ್ರತಿನಿಧಿಗಳು ಜನರ ಕೈಗೆ ಸಿಗದೇ ಜನತೆಯನ್ನು ಸಂಕಷ್ಟಕ್ಕೆ ದೂಡುತ್ತಿದ್ದಾರೆ. ಸ್ಥಳೀಯ ಕೂಲಿ ಕಾರ್ಮಿಕರು, ಸಾರ್ವಜನಿಕರು ಹಾಗೂ ರೈತರ ಸಮಸ್ಯೆ ಬಗ್ಗೆ ಸ್ಥಳೀಯರಿಗೆ ಗೊತ್ತಿರುವುದರಿಂದ ಅವರು ಆಯ್ಕೆಯಾದಲ್ಲಿ ಸಮಸ್ಯೆಗೆ ಸ್ಪಂದಿಸುತ್ತಾರೆ. ಹಾಗಾಗಿ ಎಲ್ಲಾ ರಾಜಕೀಯ ಪಕ್ಷಗಳು ಸ್ಥಳೀಯರಿಗೆ ಟಿಕೆಟ್ ನೀಡಬೇಕೆಂದು ಒತ್ತಾಯಿಸಿದರು.

ಯಾಚೇನಹಳ್ಳಿ ಹೇಮಂತ್ ಮಾತನಾಡಿ, ಜನಪರ ಕಾಳಜಿಯುಳ್ಳ ಯುವಕ ಬಾಲರಾಜ್ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಸ್ಥಳೀಯರಾದ ಇವರು ಜನಸಾಮಾನ್ಯರಿಗೆ ಸ್ಪಂದಿಸಲಿದ್ದು, ಅವರಿಗೆ ಟಿಕೆಟ್ ನೀಡುವ ಮೂಲಕ ಆದಿದ್ರಾವಿಡ ಮಾದಿಗ ಜನಾಂಗಕ್ಕೆ



ರಾಜಕೀಯ ಶಕ್ತಿ ತುಂಬಲು ಬಿಜೆಪಿ ಹೈಕಮಾಂಡ್ ಮುಂದಾಗಬೇಕು. ಈ ಹಿಂದೆ ಮಾದಿಗ ಜನಾಂಗದ ಶಂಕರ್‌ಗೆ ಪಕ್ಷ ಟಿಕೆಟ್ ನೀಡಿತ್ತಾದರೂ ಅವರೂ ಕೊನೆಗಳಿಗೆಯಲ್ಲಿ ಚುನಾವಣೆ ಕಣದಿಂದ ಹಿಂದೆ ಸರಿದು ಜನಾಂಗಕ್ಕೆ ನೋವುಂಟು ಮಾಡಿದ್ದರು. ಈ ಬಾರಿ ಬಾಲರಾಜ್‌ಗೆ ಟಿಕೆಟ್ ನೀಡಿದಲ್ಲಿ ಗೆಲ್ಲುವ ಅವಕಾಶ ಹೆಚ್ಚಿದ್ದು ಜನಾಂಗದ ಎಲ್ಲರೂ ಅವರ ಪರ ಕೆಲಸ ಮಾಡಲು ಸಿದ್ಧರಾಗಿದ್ದಾರೆ ಎಂದರು.

ತಾಪಂ ಮಾಜಿ ಸದಸ್ಯ ಮಲಿಯೂರು ಜವರಯ್ಯ ಮಾತನಾಡಿ, ಕ್ಷೇತ್ರದಲ್ಲಿ ಎಡಗೈ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮಳವಳ್ಳಿ, ಕೊಳ್ಳೇಗಾಲ, ನಂಜನಗೂಡು ಕ್ಷೇತ್ರದಲ್ಲಿ ಸಮಾಜದವರಿಗೆ ಟಿಕೆಟ್ ನೀಡದೆ ಎಲ್ಲಾ ಪಕ್ಷದವರೂ ಅನ್ಯಾಯ ಮಾಡುತ್ತಿದ್ದಾರೆ. ಪ್ರಮುಖ ಪಕ್ಷಗಳು ಜನಾಂಗದ ಅಭ್ಯರ್ಥಿಗಳನ್ನು ಗುರುತಿಸಿ ರಾಜಕೀಯ ಸ್ಥಾನಮಾನ ದೊರಕಿಸಿಕೊಡಲು ಮುಂದಾಗಿಲ್ಲ. ಹಾಗಾಗಿ ಈ ಬಾರಿ ಜನಾಂಗದ ಸ್ಥಳೀಯ ಯುವಕರಿಗೆ ವರಿಷ್ಠರು ಟಿಕೆಟ್ ನೀಡುವ ಮೂಲಕ ಅವಕಾಶ ಕಲ್ಪಿಸಿಕೊಡಬೇಕೆಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಮೇಗಳಕೊಪ್ಪಲು ರಂಗಸ್ವಾಮಿ ಮಾತನಾಡಿದರು. ಪ್ರಗತಿಪರ ಸಂಘಟನೆ ಮುಖ್ಯಸ್ಥ ಕೃಷ್ಣಪ್ಪ, ಸುರೇಶ್, ಸಿ.ಕುಮಾರ್, ಆರ್.ರಂಗಸ್ವಾಮಿ, ವೈ.ನಾಗೇಶ್, ಕೇತುಪುರ ನಾಗರಾಜ್, ಗಾಡಿ ಹೋಗಿ ಹುಂಡಿ ಜಯರಾಂ, ನಾಗಪ್ಪ, ಹನುಮನಾಳು ನಾಗರಾಜ್, ಚಾಮೇಗೌಡ, ಫುಡ್ ಬಜಾರ್ ಸ್ವಾಮಿ, ಬೆಟ್ಟಹಳ್ಳಿ ಶಿವರಾಂ, ಮಾಕನಹಳ್ಳಿ ಲಕ್ಷ್ಮಣ, ಶ್ರೀನಿವಾಸ್, ಬೀಡನಹಳ್ಳಿ ಶಶಿಧರ್, ನಂದೀಶ್, ಶಿವಪ್ರಸಾದ್, ಹರಳೆಕೊಪ್ಪಲು ಶಂಕರ್ ಹಾಜರಿದ್ದರು.

ಜಿರೋಡ್ ಗೆಲುವಿನ ಗೋಲು

ಸೆಮಿಗೆ ಫ್ರಾನ್ಸ್, ಇಂಗ್ಲೆಂಡ್ ಔಟ್



ದೋಹಾ, ಡಿ.11– ಒಲಿವಿಯೆರ್ ಜಿರೋಡ್ ಅವರು ಎರಡನೇ ಅವಧಿಯಲ್ಲಿ ಗಳಿಸಿದ ಗೋಲಿನ ನೆರವಿನಿಂದ ಇಂಗ್ಲೆಂಡ್ ತಂಡವನ್ನು ಮಣಿಸಿದ ಹಾಲಿ ಚಾಂಪಿಯನ್ ಫ್ರಾನ್ಸ್, ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಅಲ್ ಖೋರ್‌ನ ಅಲ್ ಬೈತ್ ಕ್ರೀಡಾಂಗಣದಲ್ಲಿ ಶನಿವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಫ್ರಾನ್ಸ್ 2–1 ಗೋಲುಗಳಿಂದ ಹ್ಯಾರಿ ಕೇನ್ ಬಳಗವನ್ನು ಮಣಿಸಿತು. ತಂಡಕ್ಕೆ ದೊರೆತ ಎರಡನೇ ಪೆನಾಲ್ಟಿ ಕಿಕ್ ಅವಕಾಶವನ್ನು ಕೈಚೆಲ್ಲಿದ ಕೇನ್ 'ದುರಂತ ನಾಯಕ' ಎನಿಸಿದರು.

ಯುರೋಪ್‌ನ ಎರಡು ಬಲಿಷ್ಠ ತಂಡಗಳ ನಡುವಣ ಪಂದ್ಯ ಸಾಕಷ್ಟು ಪೈಪೋಟಿಯಿಂದ ಕೂಡಿತ್ತು. ಒರೆಲಿಯಾನ್ ಚುವಮೆನಿ (17ನೇ ನಿ.) ಮತ್ತು ಜಿರೋಡ್ (78ನೇ ನಿ.) ಅವರು ಫ್ರಾನ್ಸ್ ಪರ ಗೋಲು ಗಳಿಸಿದರೆ, ಇಂಗ್ಲೆಂಡ್ ತಂಡದ ಏಕೈಕ ಗೋಲನ್ನು ಕೇನ್ 54ನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶದಲ್ಲಿ ತಂದಿತ್ತರು. ಬುಧವಾರ ರಾತ್ರಿ ನಡೆಯಲಿರುವ ಎರಡನೇ ಸೆಮಿಫೈನಲ್‌ನಲ್ಲಿ ಫ್ರಾನ್ಸ್ ತಂಡ ಮೊರೊಕ್ಕೊ ವಿರುದ್ಧ ಪೈಪೋಟಿ ನಡೆಸಲಿದೆ.

ಟೂರ್ನಿಯಲ್ಲಿ ಐದು ಗೋಲು ಗಳಿಸಿರುವ ಸ್ಟಾರ್ ಆಟಗಾರ ಕಿಲಿಯಾನ್ ಎಂಬಾಪೆ ಅವರನ್ನು ಇಂಗ್ಲೆಂಡ್‌ನ ಡಿಫೆಂಡರ್‌ಗಳು ಕಟ್ಟಿಹಾಕಿದಾಗ, ಅನುಭವಿ ಜಿರೋಡ್ ತಂಡದ ನೆರವಿಗೆ ನಿಂತರು. ಎದುರಾಳಿ ತಂಡದ ಗೋಲು ಗಳಿಸುವ ಕೆಲವು ಪ್ರಯತ್ನಗಳನ್ನು ಅದ್ಭುತವಾಗಿ ತಡೆದ ಗೋಲ್‌ಕೀಪರ್ ಹ್ಯೂಗೊ ಲಾರಿಸ್ ಅವರೂ ಫ್ರಾನ್ಸ್ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಫ್ರಾನ್ಸ್ ತಂಡ ಈ ಪಂದ್ಯದಲ್ಲಿ ನಿರೀಕ್ಷೆಗಿಂತಲೂ ಬೇಗನೇ ಗೋಲಿನ ಖಾತೆ ತೆರೆಯಿತು. ಉಸ್ಮಾನ್ ದೆಂಬೆಲೆ ಅವರಿಂದ ದೊರೆತ ಪಾಸ್‌ನಲ್ಲಿ ಗ್ರೀಸ್‌ಮನ್, ಚೆಂಡನ್ನು ಚುವಮೆನಿ ಅವರತ್ತ ಕಳುಹಿಸಿ ದರು. ಅವರು 25 ಮೀಟರ್ಸ್ ದೂರ ದಿಂದ ಬಿರುಸಿನ ವೇಗದಲ್ಲಿ ಒದ್ದ ಚೆಂಡು ಗೋಲ್ ಕೀಪರ್ ಜೋರ್ಡನ್ ಪಿಕ್‌ಫೋರ್ಡ್ ಅವರನ್ನು ತಪ್ಪಿಸಿ ಗುರಿ ಸೇರಿತು.

ಎರಡನೇ ಅವಧಿಯ ಏಳನೇ ನಿಮಿಷದಲ್ಲಿ ಚುವಮೆನಿ, ಎದುರಾಳಿ ತಂಡದ ಬುಕಾಯೊ ಸಾಕಾ ಅವರನ್ನು ಪೆನಾಲ್ಟಿ ಆವರಣದಲ್ಲಿ ಬೀಳಿಸಿದರು. ರೆಫರಿ ಇಂಗ್ಲೆಂಡ್‌ಗೆ ಪೆನಾಲ್ಟಿ ಕಿಕ್ ಅವಕಾಶ ನೀಡಿದರು. ಕೇನ್ ಅವರು ಚೆಂಡನ್ನು ಯಶಸ್ವಿಯಾಗಿ ಗುರಿ ಸೇರಿಸಿ 1–1 ರಲ್ಲಿ ಸಮಬಲಕ್ಕೆ ಕಾರಣರಾದರು.

78ನೇ ನಿಮಿಷದಲ್ಲಿ ಫ್ರಾನ್ಸ್ ಮತ್ತೆ ಮುನ್ನಡೆ ಗಳಿಸಿತು. ಗ್ರೀಸ್‌ಮನ್ ಅವರು ನೀಡಿದ ಕ್ರಾಸ್‌ನಲ್ಲಿ ಜಿರೋಡ್ ಹೆಡರ್ ಮೂಲಕ ಗೋಲು ಗಳಿಸಿದರು. ನಿಗದಿತ ಅವಧಿ ಕೊನೆಗೊಳ್ಳಲು ಆರು ನಿಮಿಷಗಳು ಇದ್ದಾಗ ಇಂಗ್ಲೆಂಡ್‌ಗೆ ಪೆನಾಲ್ಟಿ ಕಿಕ್ ದೊರೆಯಿತು. ಥಿಯೊ ಹೆರ್ನಾಂಡೆಜ್ ಅವರು ಇಂಗ್ಲೆಂಡ್‌ನ ಸಬ್‌ಸ್ಟಿಟ್ಯೂಟ್ ಆಟಗಾರ ಮೇಸನ್ ಮೌಂಟ್ ಅವರನ್ನು ಕೆಳಕ್ಕೆ ಬೀಳಿಸಿದ್ದಕ್ಕೆ ರೆಫರಿ ಪೆನಾಲ್ಟಿ ನೀಡಿದರು. ಪಂದ್ಯದಲ್ಲಿ ತಮ್ಮ ಎರಡನೇ ಪೆನಾಲ್ಟಿ ಕಿಕ್ ತೆಗೆದುಕೊಂಡ ಕೇನ್, ಗುರಿ ಸೇರಿಸಲು ವಿಫಲರಾದರು.

ಹಿಮಾಚಲ ಪ್ರದೇಶದ ಮುಖ್ಯಮಂತ್ರಿಯಾಗಿ ಸುಖ್ವಿಂದರ್ ಸಿಂಗ್ ಪ್ರಮಾಣ ವಚನ

ಶಿಮ್ಲಾ, ಡಿ.11– ಹಿಮಾಚಲ ಪ್ರದೇಶದ ನೂತನ ಮುಖ್ಯಮಂತ್ರಿಯಾಗಿ ಸುಖ್ವಿಂದರ್ ಸಿಂಗ್ ಇಂದು ಪ್ರಮಾಣ ವಚನ ಸ್ವೀಕರಿಸಿದರು.



ಐತಿಹಾಸಿಕ ರಿಡ್ಜ್ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಹಿಮಾಚಲ ಪ್ರದೇಶದ 15ನೇ ಮುಖ್ಯಮಂತ್ರಿಯಾಗಿ ಸುಖ್ವಿಂದರ್ ಸಿಂಗ್ ಅಧಿಕಾರ ವಹಿಸಿಕೊಂಡರು. ಮುಕೇಶ್ ಅಗ್ನಿಹೋತ್ರಿ ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರಳೇಕರ್ ಪ್ರಮಾಣ ವಚನ ಬೋಧಿಸಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಮಾಜಿ ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಇತ್ತೀಚಿಗೆ ನಡೆದ ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 40 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು.

ಮಾಂಡೌಸ್ ಎಫೆಕ್ಟ್: ಬಿಜೆಪಿ, ಜೆಡಿಎಸ್ ಕಾರ್ಯಕ್ರಮಗಳು ಮುಂದೂಡಿಕೆ

ಬೆಂಗಳೂರು, ಡಿ.11– ಮಾಂಡೌಸ್ ಚಂಡಮಾರುತ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಮಳೆಯಾಗುತ್ತಿದ್ದು, ಇದರ ಪರಿಣಾಮ ರಾಜಕೀಯ ಪಕ್ಷಗಳ ಮೇಲೂ ಬಿದ್ದಿದೆ. ಚುನಾವಣೆ ಹತ್ತಿರಬರುತ್ತಿರುವ ಹಿನ್ನೆಲೆ ರಾಜಕೀಯ ಪಕ್ಷಗಳು ರ‍್ಯಾಲಿ, ಸಮಾವೇಶಗಳನ್ನು ಆರಂಭಿಸಿದ್ದವು. ಚಂಡಮಾರುತವು ರಾಜ್ಯ ರಾಜಕೀಯ ಪಕ್ಷಗಳ ಕಾರ್ಯಕ್ರಮಗಳ ಅಬ್ಬರಕ್ಕೆ ಕೊಂಚ ಬ್ರೇಕ್ ನೀಡಿದೆ.



ರಾಜ್ಯದಲ್ಲಿ ಮಳೆ ಸುರಿಯುತ್ತಿರುವ ಹಿನ್ನೆಲೆ ಬಿಜೆಪಿ ಜನಸಂಕಲ್ಪ ಸಮಾವೇಶವನ್ನು ಮುಂದೂಡಿಕೆ ಮಾಡಲಾಗಿದೆ. ಬೆಂಗಳೂರಿನಲ್ಲಿ ಇಂದು ನಿಗದಿಯಾಗಿದ್ದ ಸಮಾವೇಶ ಮುಂದೂಡಲಾಗಿದೆ. ಇನ್ನೊಂದೆಡೆ, ಮಕೂರು ಜಿಲ್ಲೆಯಲ್ಲಿ ಬಿಟ್ಟು ಬಿಡದೆ ಮಳೆಯಾಗುತ್ತಿರುವ ಹಿನ್ನೆಲೆ ಇಂದು ಚಿಕ್ಕನಾಯಕನಹಳ್ಳಿಯಿಂದ ಮತ್ತೆ ಶುರುವಾಗಬೇಕಿದ್ದ ಪಂಚರತ್ನ ರಥಯಾತ್ರೆ ನಾಲ್ಕು ದಿನ ಮುಂದೂಡಿಕೆ ಮಾಡಲಾಗಿದೆ.

ಜೆ.ಪಿ.ನಡ್ಡಾ ರಾಜ್ಯ ಪ್ರವಾಸದಲ್ಲಿ ಬದಲಾವಣೆ: ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ರಾಜ್ಯ ಪ್ರವಾಸ ಕೈಗೊಳ್ಳಲಿದ್ದಾರೆ. ಇದರ ಭಾಗವಾಗಿ ಡಿ.15ರಂದು ನಿಗದಿಯಾಗಿದ್ದ ಬಾಗಲಕೋಟೆ ಭೇಟಿ ಇದೀಗ ರದ್ದಾಗಿದೆ. ಅಂದು ಬಾಗಲಕೋಟೆ ಬದಲು ಕೊಪ್ಪಳಕ್ಕೆ ನಡ್ಡಾ ಅವರು ಆಗಮಿಸಲಿದ್ದಾರೆ. ಡಿ.15ರಂದು ಬಾಗಲಕೋಟೆ ಬಿಜೆಪಿ ಕಚೇರಿ ಉದ್ಘಾಟನೆಗೆ ಆಗಮಿಸಬೇಕಿದ್ದ ಜೆ.ಪಿ.ನಡ್ಡಾ ಮತ್ತು ಸಿಎಂ ಬೊಮ್ಮಾಯಿ ಕಾರ್ಯಕ್ರಮವನ್ನು ಕೊಪ್ಪಳಕ್ಕೆ ಸ್ಥಳಾಂತರಿಸಲಾಗಿದೆ.

ಕೊಪ್ಪಳದಿಂದಲೇ ವರ್ಚುವಲ್ ಮೂಲಕ ಬಾಗಲಕೋಟೆ ಮತ್ತು ಉತ್ತರ ಕರ್ನಾಟಕದ ಇತರೆ ಜಿಲ್ಲೆಗಳ ಬಿಜೆಪಿ ಕಚೇರಿಗಳನ್ನು ಉದ್ಘಾಟನೆ ಮಾಡಲಾಗುತ್ತಿದೆ.

'ಮೈಸೂರು ಫ್ಯಾಷನ್ ವೀಕ್' ಸೀಸನ್–6'ನಲ್ಲಿ ಶೋ ಟಾಪರ್ ಆಗಿ ಮಿಂಚಿದ ಜಯಪ್ರದಾ

ಜಯಂತಿ ಬಲ್ಲಾಳ್ ಡಿಸೈನ್ ಮಾಡಿದ ರೇಷ್ಮೆ ಸೀರೆಯುಟ್ಟು ರ‍್ಯಾಂಪ್ ವಾಕ್



ಮೈಸೂರು, ಡಿ.11(ಜಿಎ)– ಚಿನ್ನದಂತೆ ಹೊಳೆಯುವ ಸೀರೆಯುಟ್ಟು ರ‍್ಯಾಂಪ್ ಮೇಲೆ ಹೆಜ್ಜೆ ಹಾಕಿದ ನಟಿ ಜಯಪ್ರದಾ 'ಮೈಸೂರು ಫ್ಯಾಷನ್ ವೀಕ್' ಸೀಸನ್–6'ನಲ್ಲಿ ಶೋ ಟಾಪರ್ ಆಗಿ ಮಿಂಚಿದರು.

ದಕ್ಷಿಣ ಭಾರತದ ಅತೀ ದೊಡ್ಡ ಫ್ಯಾಷನ್ ಶೋ 'ಮೈಸೂರು ಫ್ಯಾಷನ್ ವೀಕ್' ಸೀಸನ್–6' ಶುಕ್ರವಾರದಿಂದ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಮೈಸೂರು ಯೂನಿಯನ್‌ನಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸೇರಿದಂತೆ ಹಲವು ಕಂಪನಿಗಳ ಪ್ರಾಯೋಜಕತ್ವದಲ್ಲಿ ನಡೆದ ಶೋನಲ್ಲಿ ಫ್ಯಾಷನ್ ಶೋ ಆಯೋಜಕಿ ಮತ್ತು ಖ್ಯಾತ ಫ್ಯಾಷನ್ ವಿನ್ಯಾಸಕಿಯಾದ ಜಯಂತಿ ಬಲ್ಲಾಳ್ ಅವರು ಡಿಸೈನ್ ಮಾಡಿದ ರೇಷ್ಮೆ ಸೀರೆಯುಟ್ಟು ನಟಿ ಜಯಪ್ರದ ರ‍್ಯಾಂಪ್ ಮೇಲೆ ಹೆಜ್ಜೆ ಹಾಕಿ ಎಲ್ಲರ ಮನ ಸೆಳೆದು ಶೋ ಟಾಪರ್ ಆಗಿ ಹೊರ ಹೊಮ್ಮಿದರು.

'ಮೈಸೂರು ಫ್ಯಾಷನ್ ವೀಕ್' ಸೀಸನ್–6'ನ ಅಂತಿಮ ದಿನವಾದ ಇಂದು ಬಾಲಿವುಡ್ ನಟಿ, ಮಾಡಲ್ ಪೂನಂಪಾಡೆ ಕಪ್ಪು ಬಣ್ಣದ ಡ್ರಸ್ ತೊಟ್ಟು ಎಲ್ಲರ ಹುಬ್ಬೇರಿಸುವಂತೆ ಮಾಡಿದರು. ತಮಿಳು ನಟಿ ಗಾಯತ್ರಿ ಶಂಕರ್ ಸೇರಿದಂತೆ ಖ್ಯಾತ ಮಾಡೆಲ್‌ಗಳಾದ ಸೋನಾಲಿಕಾ ಸಹಾಯ್, ಶ್ವೇತಾ ಡಾಲಿ, ಕರಿಷ್ಮಾ ಮೋದಿ, ಐರಿಸ್ ಭಾಸ್ಕರ್ ಮೈಟಿ, ಪಾರುಲ್ ಬಿಂದಾಲ್, ರಿಯಾ ಸುಬೋಧ್, ಜಸ್ಪಾಲ್ ಕೌರ್ ಚನಾ, ಜಾಕಿ ಬೆಸ್ವರ್‌ವಿಚ್, ಪ್ರಿಯಾಂಕಾ ದಿವಾನ್, ವೀಣಾ ಸಿಂಗ್, ಶಾನವಾಜ್ ಆಲಂ, ಸನ್ನಿ ಕಾಂಬ್ಳೆ, ಸುಜೋ ಮ್ಯಾಥ್ಯೂ, ಗೋಕುಲ್ ಗಣೇಶ್, ರಿತೇಶ್ ರಾವತ್, ರಿತೇಶ್ ರಾವತ್ ಮೊದಲಾದ ಸೂಪರ್ ಮಾಡೆಲ್‌ಗಳು ರ‍್ಯಾಂಪ್ ಮೇಲೆ ವಾಕ್ ಮಾಡುವ ಮೂಲಕ ಫ್ಯಾಷನ್ ವೀಕ್‌ಗೆ ವರ್ಣರಂಜಿತ ತೆರೆ ಎಳೆದರು.



ಗಡಿ ವಿವಾದ: ರಾಜ್ಯ ಚಳಿಗಾಲ ಅಧಿವೇಶನದ ಮೊದಲ ದಿನ ಸಭೆ ನಡೆಸಲು ಎಂಇಎಸ್ ನಿರ್ಧಾರ

ಬೆಳಗಾವಿ, ಡಿ.11– ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದದ ನಡುವೆಯೇ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕರ್ನಾಟಕ ಚಳಿಗಾಲದ ಅಧಿವೇಶನದ ಮೊದಲ ದಿನವಾದ ಡಿಸೆಂಬರ್ 19ರಂದು ಬೆಳಗಾವಿಯಲ್ಲಿ ಸಭೆ ನಡೆ ಸಲು ಮುಂದಾಗಿದೆ ಎಂದು ತಿಳಿದುಬಂದಿದೆ.

ಬೆಳಗಾವಿಯ ವ್ಯಾಕ್ಸಿನ್ ಡಿಪೋದಲ್ಲಿ ಈ ಸಭೆ ನಡೆಯಲಿದ್ದು, ಈ ಸಭೆಗೆ ಮಹಾರಾಷ್ಟ್ರದ ಸಿಎಂ ಏಕನಾಥ್ ಶಿಂಧೆ, ಮಾಜಿ ಸಿಎಂ ಉದ್ಧವ್ ಠಾಕ್ರೆ ಮತ್ತು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಸೇರಿದಂತೆ ಹಲವು ಪ್ರಮುಖ ರಾಜಕಾರಣಿಗಳನ್ನು ಎಂಇಎಸ್ ಆಹ್ವಾನಿಸಿದೆ ಎಂದು ತಿಳಿದುಬಂದಿದೆ.

ಸಭೆ ಕುರಿತು ಮಹಾರಾಷ್ಟ್ರ ಏಕೀಕರಣ ಸಮಿತಿಯು ಈಗಾಗಲೇ ಬೆಳಗಾವಿ ಪೊಲೀಸ್ ಆಯುಕ್ತರ ಕಚೇರಿಗೆ ಮನವಿ ಪತ್ರವನ್ನು ಸಲ್ಲಿಸಿದೆ ಎಂದು ವರದಿಗಳು ತಿಳಿಸಿವೆ.

ಕರ್ನಾಟಕ ಸರ್ಕಾರವು ಗಡಿ ವಿವಾದ ಸಂಬಂಧ ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ನ್ಯಾಯಾಲಯದಲ್ಲಿ ಸಂಕಷ್ಟ ಎದುರಿಸುತ್ತಿದೆ. ಮರಾಠಿ ಭಾಷಾಭಿಮಾನಿಗಳ ಆಶಯಕ್ಕೆ ವಿರುದ್ಧವಾಗಿ ಕರ್ನಾಟಕ ಸರ್ಕಾರ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನವನ್ನು ಬಲವಂತವಾಗಿ ನಡೆಸುತ್ತಿದೆ. ಆದ್ದರಿಂದ, ಡಿಸೆಂಬರ್ 19 ರಂದು ಮರಾಠಿಗಳ ಆಶಯಗಳನ್ನು ವ್ಯಕ್ತಪಡಿಸಲು ಮಹಾಮೇಳವ, ಮರಾಠಿ ಭಾಷಾಶಾಸ್ತ್ರದ ಸಮಾವೇಶವನ್ನು ಯೋಜಿಸಲಾಗಿದೆ ಪತ್ರದಲ್ಲಿ ತಿಳಿಸಿದೆ.

ಮೂಲಗಳ ಪ್ರಕಾರ, ಎಂಇಎಸ್ ಪ್ರತಿ ರಾಜಕೀಯ ಪಕ್ಷದಿಂದ ಇಬ್ಬರು ಉನ್ನತ ನಾಯಕರನ್ನು ಆಹ್ವಾನಿಸಿದೆ ಎಂದು ತಿಳಿದುಬಂದಿದೆ. ಮಹಾರಾಷ್ಟ್ರ ಸಿಎಂ ಶಿಂಧೆ, ಶಿವಸೇನೆ (ಯುಬಿಟಿ) ನಾಯಕ ಉದ್ಧವ್ ಠಾಕರೆ, ಬಿಜೆಪಿಯ ಡಿಸಿಎಂ ದೇವೇಂದ್ರ ಫಡ್ನವೀಸ್, ಎನ್‌ಸಿಪಿ ನಾಯಕ ಶರದ್ ಪವಾರ್, ಮಹಾರಾಷ್ಟ್ರ ಗಡಿ ಉಸ್ತುವಾರಿ ಸಚಿವರಾದ ಚಂದ್ರಕಾಂತ ಪಾಟೀಲ್ ಮತ್ತು ಶಂಭುರಾಜ್ ದೇಸಾಯಿ ಸಭೆಗೆ ಆಹ್ವಾನಿಸಲಾಗಿದೆ ಎಂದು ತಿಳಿದಿಬಂದಿದೆ.